
# ವಿ. ರಾಮಮೂರ್ತಿ

ಡಾ. ಹೆಚ್.ಎ. ಪಾರ್ಶ್ವನಾಥ್



ಕರ್ನಾಟಕ ನಾಟಕ ಅಕಾಡೆಮಿ

ರಂಗಸಂಪನ್ನರು ಮಾಲಿಕೆ

# ಏ. ರಾಮಮೂರ್ತಿ

ಡಾ|| ಹೆಚ್. ಎ. ಪಾರ್ಶ್ವನಾಥ್

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೦೨

**V. Ramamurthy :**
A Monograph in Kannada by **Dr. H.A. Parshwanath**
Published by **Mr. Siddaraju,** Registrar, Karnataka Nataka Academy, Kannada Bhavana, J.C.Road, Bengaluru- 560002. Phone: 080-22237484

ಹಕ್ಕುಗಳು : ಕರ್ನಾಟಕ ನಾಟಕ ಅಕಾಡೆಮಿ
ಮೊದಲ ಮುದ್ರಣ : ೨೦೧೬
ಪ್ರತಿಗಳು : ೧,೦೦೦
ಪುಟಗಳು : viii + ೧೦೦ = ೧೦೮
ಬೆಲೆ : ರೂ. ೮೦/-

**ಪ್ರಕಾಶಕರು**
ಸಿದ್ಧರಾಜು, ರಿಜಿಸ್ಟ್ರಾರ್
**ಕರ್ನಾಟಕ ನಾಟಕ ಅಕಾಡೆಮಿ**
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨
ದೂರವಾಣಿ: ೦೮೦ ೨೨೨೩೭೪೮೪

ಮುಖಪುಟ ವಿನ್ಯಾಸ :
**ಕೃಷ್ಣ ರಾಯಚೂರು**

ಮುದ್ರಣ :
**ಸ್ಯಾಬ್ ಟೆಕ್ ಪ್ರಿಂಟರ್ಸ್**
ಬೆಂಗಳೂರು - ೫೬೦ ೦೨೬
ಮೊ. : ೯೭೩೯೦೬೭೩೫೯

# ಪ್ರಧಾನ ಸಂಪಾದಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಮುಂಬಯಿಯಲ್ಲಿ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ ೨೦೧೫ ಸೆ.೨೪ ರಿಂದ ೩೦ರ ವರೆಗೆ ನಡೆದ ರಾಜ್ಯ ಕನ್ನಡ ವೃತ್ತಿರಂಗಭೂಮಿ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್.ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ ೨೧ ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ ಬಹುತೇಕ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟಣೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ಹಿಂದಿನ ವರ್ಷ ಹಾಗೂ ಈ ವರ್ಷದ ಪ್ರಕಟಣಾ ಸಮಿತಿ ಮತ್ತು ಈ ಕನಸು ಸಾಕಾರಗೊಳ್ಳಲು ಶ್ರಮಿಸಿದ ಸದಸ್ಯ ಗುಡಿಹಳ್ಳಿ ನಾಗರಾಜ ಹಾಗೂ ಪುಸ್ತಕ ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳು.

ಎಲ್.ಬಿ.ಶೇಖ (ಮಾಸ್ತರ)<br>ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ

# ರಂಗಸಂಪನ್ನರು

ಕರ್ನಾಟಕ ನಾಟಕ ಅಕಾಡೆಮಿ ಪ್ರಕಟನೆಗೆ ಆದ್ಯತೆ ಇರುವ ಅಕಾಡೆಮಿಯಲ್ಲ, ಇದು ಪ್ರಯೋಗ ಪ್ರಧಾನವಾದುದು. ಆದರೂ ರಂಗಭೂಮಿ ಚಟುವಟಿಕೆ, ಅಧ್ಯಯನಕ್ಕೆ ಪೂರಕವಾಗಬಲ್ಲ ಆಕರಗಳು ಅಕಾಡೆಮಿಯಲ್ಲಿ ದೊರೆಯುವಂತಾಗಬೇಕು ಎಂದು ಈ ಹಿಂದೆ ತಕ್ಕಮಟ್ಟಿನ ಪ್ರಕಟನೆ ಕಾರ್ಯಗಳು ನಡೆದಿವೆ. ಮಧ್ಯೆ ಕ್ಷೀಣಿಸಿದ್ದ ಪ್ರಕಟನಾ ವಿಭಾಗವನ್ನು ಚುರುಕುಗೊಳಿಸಿ ಮತ್ತಷ್ಟು ಪುಸ್ತಕಗಳನ್ನು ಹೊರತರಬೇಕು ಎಂದು ಅಧ್ಯಕ್ಷರಾದ ಎಲ್.ಬಿ.ಶೇಖಿ ಮಾಸ್ತರ ಅವರ ಅಧ್ಯಕ್ಷತೆಯಲ್ಲಿ 23 ಜುಲೈ 2014 ರಂದು ನಡೆದ ಪ್ರಕಟನಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಸಮಿತಿ ಸದಸ್ಯರಾದ ಪಿ.ತಿಪ್ಪೇಸ್ವಾಮಿ, ವಿ.ಎನ್.ಅಕ್ಕಿ, ಗುಡಿಹಳ್ಳಿ ನಾಗರಾಜ ಹಾಗೂ ರಿಜಿಸ್ಟ್ರಾರ್ ಸಿದ್ಧರಾಜು ಭಾಗವಹಿಸಿದ್ದರು.

ಪ್ರಕಟನೆಗೆ ಇದ್ದ ಬೇಡಿಕೆಗಳು ಹಲವಾರು. ಆದರೆ ಸೀಮಿತ ಅವಕಾಶದಲ್ಲಿ ತೀರಾ ಅಗತ್ಯವಾದ ಪುಸ್ತಕಗಳನ್ನು ಮಾತ್ರ ಪ್ರಕಟಿಸಲು ಸಾಧ್ಯವಿತ್ತು. ಕನ್ನಡ ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಪ್ರತಿಭಾವಂತರ ಕುರಿತ ಪುಸ್ತಕಗಳನ್ನು ಹೊರತರುವ 'ರಂಗಸಂಪನ್ನರು' ಮಾಲಿಕೆಯನ್ನು ಸಿಜಿಕೆಯವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆರಂಭಿಸಿ ಕೆಲವು ಪುಸ್ತಕಗಳನ್ನು ಹೊರತರಲಾಗಿತ್ತು. ನಂತರದ ಅವಧಿಯಲ್ಲೂ ಕೆಲವು ಪುಸ್ತಕಗಳು ಹೊರಬಂದವು. ಆ ಮಾಲಿಕೆಯನ್ನು ಮುಂದುವರಿಸಲು ತೀರ್ಮಾನಿಸಿದೆವು.

ಬಿ.ವಿ.ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪ್ರತಿ ಜಿಲ್ಲೆಯ ರಂಗಮಾಹಿತಿ ಹೊರತರುವ ಯೋಜನೆ ರೂಪಿಸಿ ಸದಸ್ಯರಿಗೇ ಆ ಹೊಣೆ ವಹಿಸಲಾಗಿತ್ತು. 5–6 ಜಿಲ್ಲೆಗಳ ರಂಗಮಾಹಿತಿ ಬರಹವೂ ಪೂರ್ಣಗೊಂಡಿತ್ತು. ಆದರೆ ಪುಸ್ತಕಗಳು ಪ್ರಕಟನೆಯಾಗಲಿಲ್ಲ. ಉಳಿದಿರುವ ಇತರ ಜಿಲ್ಲೆಗಳನ್ನೂ ಸೇರಿಸಿಕೊಂಡು ಜಿಲ್ಲೆಗೊಂದು ರಂಗಮಾಹಿತಿ ಪುಸ್ತಕಗಳನ್ನು ಹೊರತರುವ ಯೋಜನೆ ಹಮ್ಮಿಕೊಂಡೆವು. ಆಯಾ ಜಿಲ್ಲೆಗಳ ರಂಗ ಚಟುವಟಿಕೆಯಲ್ಲಿ ಪಾಲ್ಗೊಂಡ ಲೇಖಕರಿಗೆ ಈ ಕೆಲಸವನ್ನು ಒಪ್ಪಿಸಿದೆವು. ಜಿಲ್ಲಾ ರಂಗಮಾಹಿತಿ ಕಲೆಹಾಕುವುದು ಗುರುತರ ಕೆಲಸ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಂಪೂರ್ಣ ಮಾಹಿತಿ ಎಂದು ಭಾವಿಸಬಾರದು. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

ರಂಗಸಂಪನ್ನರು ಮಾಲಿಕೆಗೆ ಪುಸ್ತಕ ಬರೆಯಲು ಕಲಾವಿದರ ಬಳಿ ಕುಳಿತಾಗಲೂ ಲೇಖಕರಿಗೆ ಮಾಹಿತಿ ಹಾಗೂ ಚಿತ್ರಗಳ ಕೊರತೆ ಕಾಡಿದೆ. ಆದರೂ ತಾವು ಕಣ್ಣಾರೆ ಕಂಡಿದ್ದ ಕಲಾವಿದರ ಪ್ರತಿಭಾ ಸಂಪನ್ನತೆಯನ್ನು ಆಪ್ತವಾಗಿ ಚಿತ್ರಿಸಿಕೊಟ್ಟಿದ್ದಾರೆ.

2015ರಲ್ಲಿ ಪ್ರಕಟಣಾ ಸಮಿತಿ ಬದಲಾದಾಗಲೂ ಈ ಮಾಲಿಕೆಗಳ ಪುಸ್ತಕಗಳನ್ನು ಸಂಪಾದಿಸುವ ಹೊಣೆಯನ್ನು ನನಗೇ ವಹಿಸಲಾಯಿತು. ಸದಸ್ಯರು ಇಟ್ಟ ವಿಶ್ವಾಸ ಹಾಗೂ ಅಧ್ಯಕ್ಷರಾದ ಶ್ರೀ ಶೇಖ್ ಮಾಸ್ತರ್ ಅವರು ಪುಸ್ತಕದ ಕೆಲಸ ಎಲ್ಲಿಗೆ ಬಂತು ಎಂದು ಸದಾ ನೆನಪಿಸುತ್ತ, ಈ ಪ್ರಕಟನೆಗಳ ಕುರಿತು ತಾಳಿದ ಆಸಕ್ತಿಯ ಫಲವಾಗಿ ಈ ಪುಸ್ತಕಗಳು ಇದೀಗ ಹೊರಬರುತ್ತಿವೆ.

**ಅಂತಾರ್ರಾಷ್ಟ್ರೀಯ ಬೆಳಕು ತಜ್ಞ ವಿ. ರಾಮಮೂರ್ತಿ**

ಹಿರಿಯ ರಂಗಕರ್ಮಿ ವಿ. ರಾಮಮೂರ್ತಿ ಹೆಸರಾಂತ ನಟ, ನೇಪಥ್ಯ ಕಲಾವಿದ ಹಾಗೂ ನಿರ್ದೇಶಕರು. ನಾಟಕಗಳಿಗೆ ಬೆಳಕಿನ ವಿನ್ಯಾಸ ಮಾಡುವುದರಲ್ಲಿ ಅವರು ನಿಸ್ಸೀಮರು. ಅಂತಾರ್ರಾಷ್ಟ್ರೀಯ ಮಟ್ಟದಲ್ಲಿ ಅವರಿಗೆ ಹೆಸರಿದೆ.

ದೆಹಲಿ ರಾಷ್ಟ್ರೀಯ ನಾಟಕ ಶಾಲೆಯ ಪದವಿ ನಂತರ ಯೂರೋಪ್, ಅಮೆರಿಕ ದೇಶಗಳ ಹಲವು ರಂಗ ತಂಡಗಳ ಜೊತೆ ನೇಪಥ್ಯ ಕಲಾವಿದರಾಗಿ ಕೆಲಸ ಮಾಡಿ, ಕನ್ನಡ ನಾಡಿಗೆ ವಾಪಸ್ಸಾಗಿ ಇಲ್ಲಿಯ ಹವ್ಯಾಸಿ ರಂಗಭೂಮಿಯಲ್ಲಿ ತೊಡಗಿಕೊಂಡು ಅದರ ತಾಂತ್ರಿಕ ಉನ್ನತಿಗೆ ಶ್ರಮಿಸಿದ್ದಾರೆ. ಕರ್ನಾಟಕ ಸರ್ಕಾರ ಹವ್ಯಾಸಿ ರಂಗಭೂಮಿಗೆ ನೀಡುವ ಅತ್ಯುನ್ನತ ಬಿ.ವಿ. ಕಾರಂತ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಡಾ॥ ಹೆಚ್.ಎ. ಪಾರ್ಶ್ವನಾಥ್ ವೃತ್ತಿಯಿಂದ ವೈದ್ಯರು, ಪ್ರವೃತ್ತಿಯಿಂದ ರಂಗವೈದ್ಯರು. ರಾಜ್ಯದ ವಿವಿಧೆಡೆ ಸೇವೆಯಲ್ಲಿದ್ದಾಗ ಆಯಾ ಪ್ರದೇಶಗಳ ರಂಗ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ರಂಗ ಸಮಸ್ತವನ್ನು ದಾಖಲಿಸುತ್ತಾ ಬಂದಿದ್ದಾರೆ. ರಂಗ ಇತಿಹಾಸವನ್ನು ಕರಾರುವಕ್ಕಾಗಿ, ನಿಖರವಾಗಿ ದಾಖಲಿಸಿರುವ ಅವರೇ ಸ್ವತಃ ಒಂದು ರಂಗಕೋಶವಿದ್ದಂತೆ. ರಾಮಮೂರ್ತಿಯವರ ಕುರಿತು ಪುಸ್ತಕ ಬರೆಯಲು ೨೪ ಬಾರಿ ಅವರೊಂದಿಗೆ ಕುಳಿತು ಆಮೂಲಾಗ್ರವಾಗಿ ವಿಷಯ ದಾಖಲಿಸಿಕೊಂಡು ಈ ಕೃತಿ ರಚಿಸಿದ್ದಾರೆ. ಇದೊಂದು ಅಪೂರ್ವ ದಾಖಲೆ.

**–ಗುಡಿಹಳ್ಳಿ ನಾಗರಾಜ**

ಪ್ರಕಟಣಾ ಸಮಿತಿ ಸದಸ್ಯರು :

**ಕೆ. ಜಗುಚಂದ್ರ**

**ಉಮೇಶ್ ಸಾಲಿಯಾನ್**

**ಹಾಲ್ಕುರಿಕೆ ಶಿವಶಂಕರ್**

# ಕರ್ನಾಟಕ ನಾಟಕ ಅಕಾಡೆಮಿ

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು

ಸದಸ್ಯರು

ರಾಜಪ್ಪ ಕಿರಗಸೂರು
ಕಲ್ಪನಾ ನಾಗನಾಥ್
ಪಿ.ತಿಪ್ಪೇಸ್ವಾಮಿ
ಎಂ.ಎಸ್.ಗುಣಶೀಲನ್
ಮುದ್ದಣ್ಣ ರಟ್ಟಿಹಳ್ಳಿ
ಅನ್ನಪೂರ್ಣ ಸಾಗರ
ಗುಡಿಹಳ್ಳಿ ನಾಗರಾಜ
ಎಚ್.ಷಡಾಕ್ಷರಪ್ಪ ಹೊಸಮನಿ
ಶ್ರೀಪಾದ ಭಟ್
ಉಮೇಶ ಸಾಲಿಯಾನ್
ವಿ.ಎನ್.ಅಕ್ಕಿ
ಬಿ.ಎಂ.ರಾಮಚಂದ್ರ
ಎನ್.ಕೆ.ರಾಮಕೃಷ್ಣ
ವಿ.ವರಲಕ್ಷ್ಮಿ
ಎಸ್.ಕೆ.ಕೊನೆಸಾಗರ
ಹಾಲ್ಕುರಿಕೆ ಶಿವಶಂಕರ್
ಎಲ್.ಎಚ್.ರಂಗನಾಥಪ್ಪ
ಕೆ.ಜಗುಚಂದ್ರ

ರಿಜಿಸ್ಟ್ರಾರ್:
ಸಿದ್ದರಾಜು

ಯೋಜನಾ ಸಹಾಯಕರು:
ಕೆ.ರೇವಣ್ಣ

ಕಚೇರಿ ಸಿಬ್ಬಂದಿ:
ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ

# ಲೇಖಕನ ಮಾತು

ಆಧುನಿಕ ಕನ್ನಡ ರಂಗಭೂಮಿಯ ಹಿರಿಯ ಮುತ್ಸದ್ದಿ ವಿ. ರಾಮಮೂರ್ತಿಯವರ ರಂಗಬದುಕೊಂದು ನಿತ್ಯ ಸತ್ವಶವಾದುದು. ಅವರ ಈ ೮೦ ತುಂಬಿ ಮುನ್ನಡೆಯುತ್ತಿರುವ ಇಳಿ ವಯಸ್ಸಿನಲ್ಲಿಯೂ ಎಳೆಯವನಾಗಿ ತೋರುವ ಬತ್ತದ ಉತ್ಸಾಹ, ಅಸ್ಖಲಿತ ಮಾತುಗಾರಿಕೆ, ಚಿಂತನ ಚಿಲುಮೆ ಪದಮಾತ್ರಗಳಿಗೆ ನಿಲುಕದಂತಹವು. ರಂಗಭೂಮಿಯ ಇತಿಹಾಸವನ್ನು ಗುರುತಿಸುವಲ್ಲಿ ಅವರ ಕೊಡುಗೆ ಅನನ್ಯ, ಅನೂಹ್ಯ. ಅದರ ದಾಖಲಾತಿಯ ಕ್ರಿಯೆ–ಪ್ರಕ್ರಿಯೆ–ಪ್ರತಿಕ್ರಿಯೆಗಳು ಸದಾ ಆಗಬೇಕಾದ ನಿರೀಕ್ಷೆ–ಪ್ರತೀಕ್ಷೆ–ಸಮೀಕ್ಷೆ ಅತ್ಯಗತ್ಯವಾದುದು. ಈ ಕೈಂಕರ್ಯದಲ್ಲಿ ಕರ್ನಾಟಕ ನಾಟಕ ಅಕಾಡೆಮಿಯು ತನ್ನ ಯೋಜಿತ ಕ್ರಿಯಾಶೀಲ ಆಲೋಚನೆಯ ಪರಿಧಿಯಲ್ಲಿ ಶ್ರೀ ರಾಮಮೂರ್ತಿಯವರ ಸಿದ್ಧಿ ಸಾಧನೆ ಪ್ರಸಿದ್ಧಗಳ ಕುರಿತು ವಿಶ್ಲೇಷಣಾತ್ಮಕ ಕೃತಿಯನ್ನು ಬಯಸಿ ನನಗೆ ವಹಿಸುದುದು ನಿಜಕ್ಕೂ ಅತೀವ ಸಂತಸ ಸಮಾಧಾನವನ್ನು ತಂದಿತು ಎಂದುಸಿರಲು ಸಂತಸಪಡುತ್ತೇನೆ.

ಖಂಡಿತವಾಗಿ ರಾಮಮೂರ್ತಿಯವರ ಅಗಾಧ ಪ್ರಗಾಢ ನೆನಪಿನ ಆಳದಿಂದ ಹುಗಿದು ಬಗೆದು ತೆಗೆದ ಅನೇಕ ರಂಗ ಸಂಗತಿಗಳು ಮತ್ತು ಸ್ಮೃತಿ ವಿಸ್ಮೃತಿಗಳು ಅವರ ಒಡಳಾಳದಿಂದ ಒಡಮೂಡಿದ ಆಕರ್ಷಕ, ಅಪೂರ್ವ ರಂಗಾಂಶಗಳನ್ನು ಒಳಗೊಂಡಿವೆ: ರಂಗ ಚಿಂತನ ಚೇತನ ಚಿಲುಮೆಯಾಗಿದೆ. ಅವರೊಡನೆ ದಿನಕ್ಕೆ ಒಂದೂವರೆ ತಾಸಿನಂತೆ ಇಪ್ಪತ್ನಾಲ್ಕು ಸಂದರ್ಶನ ಸಂಭಾಷಣೆಗಳಲ್ಲಿ ದೊರೆತ ಮಾಹಿತಿಗಳು ವ್ಯಷ್ಟಿಯಿಂದ ಸಮಷ್ಟಿಯೆಡೆಗೆ ಕೊಂಡೊಯ್ದವು: ಪಾಶ್ಚಿಮಾತ್ಯ ಮತ್ತು ಭಾರತೀಯ ರಂಗಭೂಮಿಯ ಆಳ, ವಿಶಾಲ ಸ್ತರದ ಅರಿವು ಉಂಟಾಯಿತು: ರಂಗೇತಿಹಾಸವನ್ನು ಕಟ್ಟಿಕೊಟ್ಟಿತು. ಅವರ ನಿರರ್ಗಳ ಧಾಟಿಯ ಮಾತುಗಾರಿಕೆಯಿಂದ ಹೊರಹೊಮ್ಮಿದ ಸಂಗತಿಗಳು ಆಗಾಗ್ಗೆ ಮೆಲಕುಹಾಕುವಂತಹವು.

ಅವರು ನಾಡಿನ ಪ್ರಮುಖ ಪ್ರಾಯೋಗಿಕ ನೇಪಥ್ಯಗಾರನಾಗಿ ವಿಶೇಷ ಬೆಳಕು ತಜ್ಞರಾಗಿ ಗುರುತಿಸಲ್ಪಟ್ಟಿದ್ದರೂ ಅನೇಕ ರಂಗ ತಂಡಗಳನ್ನು ಕಟ್ಟಿ ಬೆಳೆಸಿದರು. ನಟನಾಗಿಯೂ ಗುರುತಿಸಲ್ಪಟ್ಟವರು, ನಿರ್ದೇಶಕನಾಗಿ ವಿಶೇಷತೆಯನ್ನು ಮೆರೆದವರು.

Entertainment should lead to enlightment ಎಂಬುದು ಅವರ ರಂಗಸಂಚಾರಿ ಭಾವದ ಉಕ್ತಿ: ಸುಸಂಗತ ರಂಗವ್ಯಾಖ್ಯಾನ ಆಖ್ಯಾನ ಸದಾ ಕುತೂಹಲಕಾರಿ.

ಇಂತಹ ಮಹಾನ್ ರಂಗತಜ್ಞನ ಕುರಿತು ಪ್ರಸ್ತುತ ಹೊತ್ತಿಗೆ ಬರೆಯಲು ನನಗೆ ಸದಾವಕಾಶವನ್ನು ಒದಗಿಸಿದ ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಎಲ್. ಬಿ. ಶೇಖ್ (ಮಾಸ್ತರ) ಮತ್ತು ನಿರಂತರ ರಂಗಕರ್ಮಿ, ಸ್ನೇಹಜೀವಿ, ಅಮಿತ ಉತ್ಸಾಹಿ ಸದಸ್ಯರಾದ ಶ್ರೀ ಗುಡಿಹಳ್ಳಿ ನಾಗರಾಜ ಅವರಿಗೆ ನನ್ನ ಹೃದಯ ತುಂಬಿದ ಕೃತಜ್ಞತೆಗಳು.

**– ಡಾ॥ ಹೆಚ್. ಎ. ಪಾರ್ಶ್ವನಾಥ್**

# ಪ್ರವೇಶ

ಪ್ರದರ್ಶನ ಕಲೆಗಳಲ್ಲಿ ಪ್ರಮುಖವಾದ ನಿತ್ಯಜೀವಂತ ಕಲೆ ರಂಗಭೂಮಿಯ ಯಶಸ್ವೀ ಪ್ರಯೋಗಗಳಿಗೆ ನೇಪಥ್ಯದ ಸ್ಥಾನ ಅತಿಮುಖ್ಯ. ನೇಪಥ್ಯದಲ್ಲಿ ದುಡಿಯುವ ಯಾವುದೇ ರಂಗಕರ್ಮಿಯಾಗಲಿ ಆತನಲ್ಲಿ ಸಿದ್ಧತೆ ಬದ್ಧತೆ ಪ್ರಬುದ್ಧತೆಯಿರಬೇಕಾಗುತ್ತದೆ. ಆಗ ಆತನು ಉತ್ತಮ ರಂಗಚಿಂತಕ ಮತ್ತು ರಂಗತಜ್ಞನಾಗಲು ಸಾಧ್ಯ. ನಿರ್ದೇಶಕನ ನಿರೀಕ್ಷೆ, ಅಪೇಕ್ಷೆ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರತಿಭಾವಿಶೇಷಕ್ಕೆ ನೇಪಥ್ಯಜ್ಞಾನವಿರುವುದು ಅನಿವಾರ್ಯ ಮತ್ತು ಅತ್ಯವಶ್ಯ. ಹೀಗೆ ಪರಸ್ಪರ ಅವಲಂಬಿತ ಕ್ರಿಯೆ ಪ್ರಕ್ರಿಯೆ ರಂಗಕ್ರಿಯೆಯು ನಿರಂತರವಾದುದು. ಈ ಹಿನ್ನೆಲೆಯಲ್ಲಿ ಬೆಳಕು ಮತ್ತು ರಂಗವಿನ್ಯಾಸದ ಪಾತ್ರವು ನಟ ನಟಿಯರ ಪ್ರತಿಭೆಯ ಪ್ರಭೆಗೆ ಪೋಷಕ ಪಾತ್ರವನ್ನು ನಿರ್ವಹಿಸುತ್ತದೆ.

ಆಧುನಿಕ ಭಾರತ ಹಾಗೂ ಕನ್ನಡ ರಂಗಭೂಮಿಯ ಸಚೇತನ ಸ್ವರೂಪರೂ, ನಿಷ್ಣಾತ ರಂಗಕುಶಲಿಯೂ, ಅವಿಶ್ರಾಂತ ರಂಗಕಾಯಕಜೀವಿಯೂ ನುರಿತ ಅರಿತ ಖ್ಯಾತ ರಂಗಬೆಳಕು ಮತ್ತು ರಂಗವಿನ್ಯಾಸ ತಜ್ಞರೂ, ವಿಚಾರಜ್ಞ ನೇಪಥ್ಯ ಕಲಾಕಾರರೂ ಆದ ವಿ. ರಾಮಮೂರ್ತಿಯವರು ತಮ್ಮ ಅವಿರತ, ಅಸಾಮಾನ್ಯ, ಅಸೀಮ ಕೊಡುಗೆಯಿಂದ ಸಿದ್ಧಿ ಸಾಧನೆಗೈದ ಸುಪ್ರಸಿದ್ಧರು. ತಮ್ಮ ರಂಗಶ್ರದ್ಧೆ, ರಂಗಶ್ರಮ ಪರಿಶ್ರಮ ಮತ್ತು ಉತ್ಸಾಹ ಸಂಯಮ ಗುಣಗಳೊಂದಿಗೆ ನಿತ್ಯ ಕಲೋಪಾಸನೆಯಲ್ಲಿ ಅತೀವ ಶ್ರದ್ಧೆ, ಅಪಾರ ನಂಬಿಕೆ ಮತ್ತು ಅಪೂರ್ವ ಕಾಳಜಿಯುಳ್ಳವರಾಗಿ ಸಕಲ ಸಹರಂಗತಜ್ಞರು, ರಂಗಪ್ರೇಮಿಗಳು, ರಂಗಬಂಧುಗಳು ಹಾಗೂ ಕಲಾವಿದರ ಮನದಂಗಳದಲ್ಲಿ ಎಂದೂ ಮಾಸದ ನೆನಪುಗಳೊಂದಿಗೆ ರಂಗಪರಿಚಾರಕನಾಗಿ ನಾಡಿನಾದ್ಯಂತ ಅಚ್ಚೊತ್ತಿದವರು. ತಮ್ಮ ಅರವತ್ತು ವರುಷಗಳಿಗೂ ಮಿಗಿಲಾದ ರಂಗಭೂಮಿಯೊಡನೆಯ ಬಹುದೀರ್ಘ ನಿಕಟ ಒಡನಾಟದಲ್ಲಿ ಕಂಡ ಚೆಲುವು, ಒಲವು, ನಿಲುವು, ಗೆಲುವು, ಸೆಳವುಗಳನ್ನು ಮುಕ್ತ ಮನದಾಳದಿಂದ ಸ್ವೀಕರಿಸಿ ಸಕ್ರಿಯಾಶಾಲಿಯಾಗಿ ರಂಗಸಂಪದವನ್ನು ಬೆಳಗಿದವರು,

ಮತ್ತದರ ವ್ಯಾಪ್ತಿಯನ್ನು ಎಲ್ಲೆಡೆ ವಿಸ್ತಾರಗೊಳಿಸಿದವರು; ಸಮಸ್ತ ರಂಗಕರ್ಮಿಗಳು ಮತ್ತು ರಂಗಾಸಕ್ತರ ಅಸೀಮ ಪ್ರೀತಿ, ಮೆಚ್ಚುಗೆಯ ಭಾವ ಬಾಂಧವ್ಯಕ್ಕೆ ಪಾತ್ರರಾದವರು, ರಂಗಕಾಯಕ ಜೀವಿಗಳ ನಡೆನುಡಿ ಪಡೆಗಳಿಗೆ ಈಡಾದವರು, ನಾಟಕವೇ ತಮ್ಮ ಜೀವಭಾವಕೋಶದ ಉಸಿರಾಗಿ ಜೀವನ ರಂಗಪಥವೆಂದು ಬಗೆದವರು. ಅವರ ರಂಗರಥ ಯಾತ್ರೆಯು ರಂಗಭೂಮಿಯ ಯಶೋಗಾಥೆಯಾಗಿಯೂ ಬೆಳಕಾಗಿರುವುದು ನಾಟಕ ಕಲೆಯ ಪ್ರಾದುರ್ಭಾವ ಲಕ್ಷಣದ ನೈಜ ಪ್ರತೀಕವೂ ಆಗಿದೆಯೆಂದರೆ ಅತಿಶಯೋಕ್ತಿಯಾಗದು. ಇದೇ ವಿ. ರಾಮಮೂರ್ತಿಯವರ ಯಶಸ್ವೀ ರಂಗಕಾಯಕ ಜೀವನಯಾತ್ರೆಯ ಮೂಲಚೂಲವೂ ಹೌದು. ಯಾವ ರಂಗಕರ್ಮಿಯು ತನ್ನ ಪಾಲಿನ ಕಾರ್ಯನಿರ್ವಹಣೆಯಲ್ಲಿ ಅದರ ಆದ್ಯತೆ ಬಾಧ್ಯತೆ ಸಾಧ್ಯತೆಯ ಪರಿವೆಯನ್ನು ಹೊಂದಿ ಮುನ್ನಡೆಯಬೇಕೆಂದು ಬಯಸಿದವರು. ಅವರ ಸರಳತೆ ಸದುವಿನಯ ಮತ್ತು ಸುದೀರ್ಘ ರಂಗಾನುಭವದ ಹಿನ್ನೆಲೆಯ ಮೂಸೆಯಿಂದ ಮೈತಳೆದ ಹೊರಹೊಮ್ಮುವ ನಿರರ್ಗಳ ವಾಕ್ಪಟುತ್ವ ನಿಜಕ್ಕೂ ಅಚ್ಚರಿ ಮೂಡಿಸುವಂತಹದು. ಅಲ್ಲದೆ ಈ ಗುಣ ವಿಶೇಷಗಳಿಂದಾಗಿ ಒಮ್ಮೆ ಅವರ ಸನಿಹ - ಸಂಪರ್ಕಕ್ಕೆ ಬಂದವರೆಂದಿಗೂ ಅವರನ್ನು ಮರೆಯಲಾರರು, ಮರೆಯಬಾರದು. ಸದಭಿರುಚಿಯ ಹಾಸ್ಯಪ್ರೇಮಿಯಾಗಿ ಮಹಾಮಾತುಗಾರರಾದ ಶ್ರೀ ರಾಮಮೂರ್ತಿಯವರ ಚಿಂತನಾಕಡಲಿನ ಆಳದಿಂದ ಸಲಿಲ ಜಲಧಾರೆಯಂತೆ ಓತಪ್ರೋತವಾಗಿ ಹರಿಯುವ ವಿಚಾರಧಾರೆಯು ಕೇಳುಗರಲ್ಲಿ ವಿಶೇಷ ಆಸಕ್ತಿಯನ್ನು ಮೂಡಿಸಿ, ಸಂಕೀರ್ಣ ಭಾವೋತ್ಪತ್ತಿಯನ್ನು ಕೆರಳಿಸಿ, ಮನೋಲ್ಲಾಸವನ್ನು ಅರಳಿಸಿ ಮಂತ್ರಮುಗ್ಧರನ್ನಾಗಿಸುವಂತಹದು. ಇಂತಾಗಿ ಭಾರತದ ರಂಗಭೂಮಿಯ ಬೆಳವಣಿಗೆಯಲ್ಲಿ ಶ್ರೀ ರಾಮಮೂರ್ತಿಯವರು ನೀಡಿದ ಕೊಡುಗೆ ಅಸಾಧಾರಣವಾದುದು ಹಾಗೂ ಅನನ್ಯ ಅನೂನ್ಯವಾದುದು.

ರಂಗಬೆಳಕಿಗೆ ಇನ್ನೊಂದು ಹೆಸರು ಶ್ರೀ ರಾಮಮೂರ್ತಿಯವರು. ಅವರ ರಂಗಾನುಭವ ದಾಳದಿಂದ ಅಸದಳವಾಗಿ ಹೊರಹೊಮ್ಮುವುದು ಬೆಳಕು ಮಾತ್ರ. ಅದು ಸಮಾಜದ ಆರೋಗ್ಯಕರ ಶೀಲ ಸಂವರ್ಧನೆಗೆ ಸನ್ಮಾರ್ಗ. ರಂಗಭೂಮಿ ಎಂಬುದು ಜನತಾ ಮಾಧ್ಯಮವೆಂಬುದರ ಅರಿವು ಅಪಾರ. ಕಲೆಯೆಂಬುದು ಎಲ್ಲಿಯೋ ಒಂದು ಮೂಲೆಯಲ್ಲಿ ಉದಯಿಸಿ ಪ್ರವಹಿಸಿದರೂ ಅದರ ಪ್ರಭಾವ - ಪ್ರವಾಹ ಅಪಾರ, ಜಾಗತಿಕಮಯ. ಈ ದಿಸೆಯಲ್ಲಿ ಅವರಿಗೆ ಸ್ಪಷ್ಟ ಕಲ್ಪನೆ, ಪರಿಕಲ್ಪನೆ ಮತ್ತು ಚಿಂತನೆಗಳಿವೆ, ಹೊಂದಿರುವ ಉದ್ದೇಶದ ಬಗೆಗೆ ಖಚಿತ ಧಾಟಿಯಿಂದ ಮುಂದಾಗುವ ಮನೋಭೂಮಿಕೆಯಿದೆ ಹಾಗೂ ರಂಗವಲಯ ಮತ್ತು ಸಮಾಜದೊಡನೆಯ ಸಾಧಕ ಬಾಧಕ ಸಂಪರ್ಕ ಸಂಬಂಧಗಳ ವಿಚಾರದಲ್ಲಿ ಸ್ಪಷ್ಟ ನಿಲುವನ್ನು ತಾಳುವ

ಧೀಮಂತಿಕೆಯಿದೆ. 'ಜಗವೇ ನಾಟಕರಂಗ'ವೆಂಬ ಅನುಸಾರದ ಹಿನ್ನೆಲೆಯಲ್ಲಿ ವಿಶ್ವ ರಂಗಭೂಮಿಯ ಕಲ್ಪನೆಯಿದೆ; ಬದುಕನ್ನು ಕಟ್ಟಿಕೊಡುವ ಉಪಾಧಿಯಿಂದಾಗಿ ನಿತ್ಯ ರಂಗೋಪಾಸನೆಯೆಂಬುದು ಕಾಯಕಜೀವಿಯ ಅಂತರಂಗದ ತೀರದ ತೃಷೆಯಾಗಿದೆ. He has got an alertness of approach and possesses clarity of thoughts and purposes. The theatre is more a passion than fashion for him.

### ಜನನ – ಬಾಲ್ಯ – ರಂಗಪ್ರಸಂಗಾವಧಾನ

ರಂಗಭೂಮಿಯ ಬೆಳಕಿಗೆ ಅನ್ವರ್ಥನಾಮರಾದ ಪ್ರಖ್ಯಾತ ಶ್ರೀ ರಾಮಮೂರ್ತಿಯವರು ದೊಡ್ಡ ಸುಸಂಸ್ಕೃತ ಕುಟುಂಬದ ಕುವರನಾಗಿ ಜನಿಸಿದುದು ದಿನಾಂಕ 24-02-1935ರಂದು ಕನ್ನಡಿಗರ ಕಲ್ಯಾಣನಗರಿ ಬೆಂಗಳೂರಿನಲ್ಲಿ. ತಂದೆ ವೆಲ್ಲಾಲೂರು ವೆಂಕಟಾದ್ರಿ ಶರ್ಮ ಮತ್ತು ತಾಯಿ ವಿ. ಪದ್ಮಾವತಮ್ಮನವರ ಏಳು ಜನ ಮಕ್ಕಳಲ್ಲಿ ನಾಲ್ಕು ಗಂಡುಮಕ್ಕಳು ಮತ್ತು ಮೂರು ಹೆಣ್ಣು ಮಕ್ಕಳು; ಶ್ರೀ ರಾಮಮೂರ್ತಿಯವರು ನಾಲ್ಕನೆಯ ಮಗುವಾಗಿ ಎರಡನೆಯ ಮಗನಾಗಿ ಜನ್ಮತಾಳಿದವರು. ವೆಲ್ಲಾಲೂರು ಎಂಬುದು ಆಂಧ್ರಪ್ರದೇಶದ ಮುಲಕುನಾಡಿನ ಒಂದು ಊರು. ತಂದೆಯವರು ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿನ ಉದ್ದಾಮ ಪಂಡಿತರು; ಅಂದಿನ ಮೈಸೂರು ವಿಶ್ವವಿದ್ಯಾನಿಲಯದ ಬೆಂಗಳೂರಿನ ಸಂತ ಜೋಸೆಫ್ ಕಾಲೇಜು ಮತ್ತು ಮದರಾಸ್ ವಿಶ್ವವಿದ್ಯಾಲಯ ಹಾಗೂ ತದನಂತರದ ಮೈಸೂರು ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜು ಮತ್ತು ಮಹಾರಾಣಿ ಕಾಲೇಜಿನಲ್ಲಿ ಸಂಸ್ಕೃತ ಮತ್ತು ತೆಲುಗು ಅಧ್ಯಾಪಕರಾಗಿದ್ದರು. ಶ್ರೀ ರಾಮಮೂರ್ತಿಯವರ ಮಾತೃಭಾಷೆ (ಮನೆಮಾತು) ತೆಲುಗು. ಅವರು ಸ್ಕೂಲು ಕಾಲೇಜಿನಲ್ಲಿ ಓದಿದ್ದು ಸಂಸ್ಕೃತ. ಆದರೂ ಕನ್ನಡದ ಬಗ್ಗೆ ಒಲವು ಮಾತ್ರ ಎಂದೂ ಜಾಸ್ತಿ ಹಾಗೂ ಜಾಗೃತಿಯಾಗಿದ್ದಿತು. ಆದ್ದರಿಂದ ಅವರ ತಂದೆಯವರು ಮನೆಗೆ ತರಿಸುತ್ತಿದ್ದ 'ತಾಯಿನಾಡು' (ಸಂಪಾದಕ : ಪಿ.ಆರ್. ರಾಮಯ್ಯ) ಕನ್ನಡ ದಿನಪತ್ರಿಕೆಯನ್ನು ಎಡೆಬಿಡದೆ ಓದುತ್ತಿದ್ದರು. ಅವರು ಅದನ್ನು ಓದುತ್ತ ಕನ್ನಡವನ್ನು ಕಲಿಯಲು ಪ್ರಾರಂಭಿಸಿದರು. ಅವರು ಓದುತ್ತಿದ್ದ ಇನ್ನೊಂದು ದಿನಪತ್ರಿಕೆಯೆಂದರೆ ತಿ.ತಾ. ಶರ್ಮಾ ಅವರ 'ವಿಶ್ವಕರ್ನಾಟಕ'. ಕಳೆದ ಶತಕದ 50ರ ದಶಕದಲ್ಲಿ ಫರ್ಡಿನೆಂಡ್ ಕಿಟ್ಟೆಲ್‌ರವರ ಡಿಕ್ಷನರಿಯನ್ನು ಓದುತ್ತಿದ್ದರು. ಹೀಗಾಗಿ ಅವರಿಗೆ ಕನ್ನಡವನ್ನು ಓದುವುದು ಬರೆಯುವುದು ಕಷ್ಟವಾಗಲಿಲ್ಲ. ಕಾರಣ ಮನೆಯಲ್ಲಿಯೇ ಹಿರಿಯರಿಂದ ತೆಲುಗು ಓದುವುದು ಬರೆಯುವುದನ್ನು ಕಲಿತರು. ಕನ್ನಡ ಮತ್ತು ತೆಲುಗು ಭಾಷೆಗಳ ಅಕ್ಷರಗಳಿಗೂ ಬಹು ಸಾಮ್ಯವಿದ್ದು, ಹೆಚ್ಚಿನ ವ್ಯತ್ಯಾಸವಿಲ್ಲವಷ್ಟೆ. ಜೊತೆಯಲ್ಲಿ ಅವರು ಹೈಸ್ಕೂಲ್‌ನಲ್ಲಿದ್ದಾಗಲೇ ಕನ್ನಡದ

ಮಹಾಕವಿ ಪಂಪ, ರನ್ನ, ಪೊನ್ನ, ಜನ್ನ ಮುಂತಾದ ಕವಿಗಳ ಕಾವ್ಯಪುರಾಣಗಳಿಂದ ಮೊದಲ್ಗೊಂಡು ಆಧುನಿಕ ಕನ್ನಡ ಸಾಹಿತ್ಯವನ್ನು ಬಹಳ ಆಳವಾಗಿ ಅಧ್ಯಯನ ಮಾಡಿದರು. ತಮ್ಮಲ್ಲಿ ಗೊತ್ತಿಲ್ಲದ ಅನೇಕ ವಿಷಯಗಳನ್ನು ಇತರೆ ಹಿರಿಯರಿಂದ ಕಲಿತುಕೊಳ್ಳುತ್ತಿದ್ದರು. ಹೀಗಾಗಿ 'Kannada has overtaken the other languages in time' ಎಂದು ಆಗಾಗ್ಗೆ ಹೇಳುತ್ತಿರುವರು. ಕೌಟುಂಬಿಕವಾಗಿ ಅವರು ಅವಿವಾಹಿತರಾಗಿಯೇ ಉಳಿದರು; ರಂಗಸೇವೆಗೆ ಮುಡುಪಾದರು.

ಶ್ರೀ ರಾಮಮೂರ್ತಿಯವರು ರಂಗಭೂಮಿಗೆ ಪ್ರವೇಶ ಮಾಡಲು ಪ್ರೇರಣೆಯನ್ನುಂಟು ಮಾಡಿದುದು ತುಸುಮಟ್ಟಿಗೆ ಮನೆಯ ಹಾಗೂ ಸುತ್ತಮುತ್ತಲಿನ ವಾತಾವರಣವೇ ಆಗಿದ್ದಿತು. ಸಾಂಪ್ರದಾಯಿಕವಾಗಿ ಅವರ ತಂದೆಯವರಿಗೂ ನಾಟಕದ ಬಗೆಗೆ ವಿಶೇಷ ಒಲವು ಮತ್ತು ಬೆಂಬಿಡದ ಗೀಳು ಇದ್ದವು. ಅವರ ಸೋದರಮಾವ ವಿ. ಉಮಾ ಮಹೇಶ್ವರರಾವ್ ಅವರು ವಕೀಲರಾಗಿದ್ದು ಕಲಾಸಕ್ತಿಯನ್ನುಂಟುಮಾಡಿದರು. ಅವುಗಳು ಕ್ರಮೇಣವಾಗಿ ಶ್ರೀ ರಾಮಮೂರ್ತಿಯವರಲ್ಲಿಯೂ ಅಂಕುರಿಸಲು ಮೊದಲಾಯಿತು. ಅವರು ಚಿಕ್ಕಂದಿನಿಂದಲೂ ನಾಟಕಗಳು ಮತ್ತು ಎಲ್ಲಾ ಭಾಷೆಗಳ ಸಿನಿಮಾಗಳನ್ನು ಒಂದು ವಾರಕ್ಕೆ ಕನಿಷ್ಠಪಕ್ಷ ಎರಡರಂತೆ ನೋಡುವ ರೂಢಿಯನ್ನು ಬೆಳೆಸಿಕೊಂಡಿದ್ದರು. ಚಿತ್ತೂರು ವಿ. ನಾಗಯ್ಯ, ನಾರದನ ಪಾತ್ರ ಖ್ಯಾತಿ ಸೂರ್ಯಬಾಬು, ಕಲ್ಯಾಣಂ ರಘುರಾಮಯ್ಯ ಮುಂತಾದ ತೆಲುಗು ಕಲಾವಿದರು ಹಾಗೂ ಪಿ.ಯು. ಚಿನ್ನಪ್ಪ, ಟಿ.ಕೆ. ಷಣ್ಮುಗಂ ಸೋದರರು ಮುಂತಾದ ತಮಿಳು ಕಲಾವಿದರು ಅಭಿನಯಿಸುತ್ತಿದ್ದ ಚಲನಚಿತ್ರಗಳನ್ನು ತಪ್ಪದೇ ವೀಕ್ಷಿಸುತ್ತಿದ್ದರು. ಬೆಂಗಳೂರು ಮಹಾನಗರದ ಹೃದಯಭಾಗದಲ್ಲಿನ ಅಂದಿನ ಶ್ರೀ ಶಿವಾನಂದ ರಂಗಮಂದಿರ (1940) ಮತ್ತು ಇಂದಿನ ಮೂವಿಲ್ಯಾಂಡ್ ಥಿಯೇಟರ್ ಸನಿಹದ ಗಾಂಧಿನಗರದಲ್ಲಿದ್ದ ಅವರ ಮನೆಯೇ ಕಲೆಯ ಆವಾಸಸ್ಥಾನವಾಗಿದ್ದಿತು. ಅಲ್ಲದೆ ಸುತ್ತಮುತ್ತಲಿನಲ್ಲಿ ಮೊದಲು ಶ್ರೀ ಗುಬ್ಬಿ ಚನ್ನಬಸವೇಶ್ವರ ನಾಟಕ ಮಂದಿರವಿದ್ದಿತು. ಇದು ತದನಂತರದಲ್ಲಿ ಗೀತಾ ಟಾಕೀಸ್ ಎಂಬುದಾಗಿ ಮಾರ್ಪಾಡಾಯಿತಷ್ಟೆ. ಗುಬ್ಬಿ ಕಂಪನಿಯು ನಡೆಸುತ್ತಿದ್ದ ನಾಟಕದ ಪ್ರಾಕ್ಟೀಸುಗಳು, ರಂಗಪರಿಕರಗಳ ಸಾಗಾಣಿಕೆ, ಬಳಕೆ, ತಯಾರಿಕೆಗಳು, ಅಂದಚಂದದ ಗಾಂಭೀರ್ಯಯುಕ್ತ ಆನೆ ಕುದುರೆಗಳ ಓಡಾಟದ ನೋಟ ಹೀಗೆ ಹತ್ತಾರು ದೃಶ್ಯಗಳು ಅವರ ಮನದಾಳದಲ್ಲಿ ಅಳಿಸಲಾರದ ಪ್ರಭಾವವನ್ನು ಬೀರಿದವು; ನಟನಾಗಾಯನ ಸಾಮರ್ಥ್ಯ ವಿಶೇಷಗಳು ಅಂಕುರಿಸಿದವು. ಅಲ್ಲದೆ ಕಂಪನಿಯು ಒಂದು ಕ್ಯಾಂಪಿನಿಂದ ಇನ್ನೊಂದು ಕ್ಯಾಂಪಿಗೆ ಮೊಕ್ಕಾಂ ಹೂಡಲು ನಾಟಕದ ಸಾಮಾನು ಸರಂಜಾಮುಗಳನ್ನು ಎತ್ತಿನ ಗಾಡಿಗಳಲ್ಲಿ

ಹೇರಿಕೊಂಡು ಶ್ರೀ ಶಿವಾನಂದ ಥಿಯೇಟರ್‌ಗೆ ತರುತ್ತಿದ್ದುದು ಮತ್ತು ಜಟಕಾ ಗಾಡಿಗಳಲ್ಲಿ ಧ್ವನಿವರ್ಧಕಗಳನ್ನು ಕಟ್ಟಿಗೊಂಡು ಪ್ರಸಿದ್ಧಗೊಳ್ಳುತ್ತಿದ್ದ ನಾಟಕಗಳ ಅಮೋಘ ಪ್ರದರ್ಶನಗಳ ವಿವರಗಳು ಪ್ರಚಾರವಾಗುತ್ತಿದ್ದುದು, ನಾಟಕ ನೋಡಲೆಂದು ಕಿಕ್ಕಿರಿದು ಮುಗಿಬೀಳುತ್ತಿದ್ದ ಸಮಾಜದ ಎಲ್ಲ ವರ್ಗ ವರ್ಣದ ಅಂತಸ್ತುಗಳ ಪ್ರೇಕ್ಷಕರು ಹಾಗೂ ಟಿಕೆಟ್ ಸಿಗದೆ ನಿರಾಶರಾಗಿ ಗುಂಪು ಗುಂಪಾಗಿ ತೆರಳುತ್ತಿದ್ದ ಜನರನ್ನು ಅತ್ತಿತ್ತ ಚದುರಿಸಲು ಆನೆಯ ಪ್ರಯೋಗ ಮಾಡುತ್ತಿದ್ದ ನಿಯಂತ್ರಣನಿರತ ನೋಟಗಳು ಶ್ರೀ ರಾಮಮೂರ್ತಿಯವರ ಮೇಲೆ ಗಾಢವಾದ ಪರಿಣಾಮವನ್ನು ಬೀರುತ್ತಿದ್ದವು. ಗುಬ್ಬಿ ಥಿಯೇಟರಿನಲ್ಲಿ 'ಕುರುಕ್ಷೇತ್ರ', 'ದಶಾವತಾರ', 'ಸಾಹುಕಾರ' ಮತ್ತು 'ಅಣ್ಣತಮ್ಮ' ಮುಂತಾದ ಜನಪ್ರಿಯ ನಾಟಕಗಳ ಪ್ರದರ್ಶನಗಳಾಗುತ್ತಿದ್ದವು. ಪ್ರೇಕ್ಷಕರು ಈ ನಾಟಕಗಳನ್ನು ನೋಡಲು ನಾ ಮುಂದು ತಾ ಮುಂದುಯೆಂದು ಮುಗಿಬೀಳುತ್ತಿದ್ದರು. ಆಗ ಅದೇ ಥಿಯೇಟರ್‌ನಲ್ಲಿ ಶ್ರೀ ರಾಮಮೂರ್ತಿಯವರಿಗೆ ರಂಗಭೂಮಿಯ ಖ್ಯಾತ ಕಲಾವಿದರಾದ ಜಿ.ವಿ. ಅಯ್ಯರ್, ಹೊನ್ನಪ್ಪ ಭಾಗವತರ್, ಟಿ.ಎನ್. ಬಾಲಕೃಷ್ಣ ಮತ್ತು ಡಾ. ರಾಜಕುಮಾರ್ ಮುಂತಾದ ಮಹನೀಯರನ್ನು ಭೇಟಿಯಾಗಿ ಹಾಗೂ ಅವರನ್ನು ರಂಗದ ಮೇಲೆ ನೋಡುವ ಸೌಭಾಗ್ಯ ಒದಗಿಬಂದಿತ್ತು. ಗುಬ್ಬಿ ಕಂಪನಿಯ ಒಂದು ಬ್ರಾಂಚ್ ಬೇರೊಂದು ಊರಿನಲ್ಲಿ ಮೊಕ್ಕಾಂ ಹೂಡಲು ತೆರಳಿದಾಗ ಈ ಗುಬ್ಬಿ ಥಿಯೇಟರ್‌ನಲ್ಲಿ ಹುಣಸೂರು ಕೃಷ್ಣಮೂರ್ತಿ, ಎಂ.ಎಸ್. ಮಾಧವರಾಯರು ಹಾಗೂ ಅನೇಕ ವೃತ್ತಿ ಕಂಪನಿಗಳು ತಮ್ಮ ತಮ್ಮ ಪ್ರದರ್ಶನಗಳನ್ನು ನೀಡುತ್ತಿದ್ದುದು ಸಾಮಾನ್ಯವಾಗಿದ್ದಿತು. ಶ್ರೀ ರಾಮಮೂರ್ತಿಯವರು ಮತ್ತು ಅವರ ತಂದೆಯವರು ಗುಬ್ಬಿ ವೀರಣ್ಣನವರ ಕುಟುಂಬದ ಆತ್ಮೀಯರಾಗಿದ್ದರು. ಒಟ್ಟಿನಲ್ಲಿ ಸುತ್ತಲಿನ ರಂಗಭೂಮಿ ಮತ್ತು ಚಲನಚಿತ್ರಗಳ ಪರಿಸರವು ಶ್ರೀ ರಾಮಮೂರ್ತಿಯವರ ಸುಪ್ತ ಭೂಮಿಕೆಯಲ್ಲಿ ರಂಗಾಸಕ್ತಿಯ ಬೀಜಗಳನ್ನು ಬಿತ್ತಿತು. ನೃತ್ಯ, ನಾಟಕ, ಸಂಗೀತ ಮುಂತಾದ ಕಲಾಪ್ರದರ್ಶನ ದೃಶ್ಯ - ಶ್ರವ್ಯ ಕಲೆಗಳ ಆವಿಷ್ಕಾರಕ್ಕೆ ಒಳಗಾಗಿ ಅದರ ಸುವಿಸ್ತಾರ ವಾಸ್ತವ್ಯದಲ್ಲಿ ಮೀಯುವಂತೆ ಮಾಡಿತು; ಅದರಲ್ಲಿಯೂ ರಂಗಕಲೆಯತ್ತಲಿನ ಕತ್ತಲನ್ನು ದೂರೀಕರಿಸಿ ಬೆಳಕು ಚೆಲ್ಲುವ ಬೆಂಬಿಡದ ಸೆಳೆತ ಆವಿರ್ಭವಿಸಿತು. ಶಾಲಾ ಕಾಲೇಜುಗಳಲ್ಲಿನ ಕಲಿಕಾಕಾಲದಲ್ಲಿಯೇ ರಂಗಾಸಕ್ತಿಯು ಅಂಕುರಿಸಿ ಚಿಗುರೊಡೆದು ಗಿಡವಾಗಿ ಬೆಳೆದು ಹೆಮ್ಮರವಾಗಿ ಒಡಮೂಡಿದುದು ರಂಗಭೂಮಿಯ ಅವಿರತ ಪರಿಧಿಯಲ್ಲಿನ ಯೋಗಾಯೋಗ ಕರ್ಮಧರ್ಮ ಸಂಯೋಗವೇ ಸರಿ; ರಂಗಕಲೆ ಅವರ ಅಧ್ಯಾತ್ಮಸೆಲೆಯಾಗಿದ್ದಿತು. ಸರ್ವೇಸಾಮಾನ್ಯವಾಗಿ ರಂಗದ ಮೇಲೆ ಜಾಜ್ವಲ್ಯಮಾನವಾದ ಬೆಳಕಿನಾಟದಲ್ಲಿ ಮಿಂಚಿ ಮಿನುಗುವ ಮಹತ್ವಾಕಾಂಕ್ಷೆಯನ್ನೊತ್ತು ಕೇವಲ ನಟನಾ

ಕಲಾವಿದನಾಗಲು ಮುಂದಾಗಿ ಹೆಣಗಾಡುವ ರಂಗಪ್ರವೇಶ ಮಾಡುವ ಹಂಬಲವನ್ನೊತ್ತು ಬರುವ ಕಲಾಕಾಂಕ್ಷಿ ಮಂದಿಯೇ ಹೆಚ್ಚು. ಆದರೆ ಈ ಸ್ಥಾಪಿತ ರೂಢಿ ಮತ್ತು ಅಭಿಪ್ರಾಯಕ್ಕೆ ತದ್ವಿರುದ್ಧವಾಗಿಯೆಂಬಂತೆ ಅವರು ರಂಗಪ್ರವೇಶಗೈದುದು ಮೇ 1952ರಂದು ಅದೇ ಗಾಂಧಿನಗರದ ಗುಬ್ಬಿ ಥಿಯೇಟರಿನಲ್ಲಿಯೇ.

ಶ್ರೀ ರಾಮಮೂರ್ತಿಯವರು ರಂಗಭೂಮಿ ಮತ್ತು ಅದರ ತಾಂತ್ರಿಕತೆ ಬಗೆಗಿನ ತಮ್ಮ ಸಮಾನ ಆಸಕ್ತಿ ಮತ್ತು ಒಲವಿನಿಂದಾಗಿ ರಂಗದ ಹಿಂಬದಿಯಲ್ಲಿ ದುಡಿಯಲು ತವಕಿಸಿದರು. ರಂಗದ ಮೇಲಿನ ನಟ ನಟಿಯರ ಹಾವಭಾವ ಪ್ರಭಾವದ ಪ್ರದರ್ಶನಕ್ಕಿಂತ ಅಂತಹವರನ್ನು ಬೆಳಗಿಸಲು ಮುಂದಾದರು. ಪ್ರತಿಭಾಪ್ರಭಾವಿಗಳ ಪ್ರವರ್ಧಮಾನಕ್ಕೆ ಹೆಣಗುವ ಕೆಲವೇ ಕೆಲವು ಅಪರೂಪದ ಸೃಜನಶೀಲ ನೇಪಥ್ಯಗಾರರ ಪೈಕಿ ಶ್ರೀ ರಾಮಮೂರ್ತಿಯವರು ಅಪೂರ್ವ ವ್ಯಕ್ತಿಯಾಗಿ ಢಾಳಾಗಿ ಕಂಡುಬರುತ್ತಾರೆ. ಅಲ್ಲಿಂದ ಮೊದಲ್ಗೊಂಡ ಅವರ ರಂಗಯಾತ್ರೆಯು ಅವರನ್ನೋರ್ವ ಪೂರ್ಣ ಪ್ರಮಾಣದ ಶಿಸ್ತುಬದ್ಧ, ನಿಷ್ಠಾವಂತ, ಪ್ರಾಮಾಣಿಕ, ಮುಕ್ತ ಹಾಗೂ ಪರಿಪಕ್ವಗೊಂಡ ವೃತ್ತಿರಂಗತಜ್ಞನನ್ನಾಗಿ ಮಾರ್ಪಡಿಸಿದುದು ನಿಜಕ್ಕೂ ಹೆಮ್ಮೆಯ ಸಂಗತಿ ಹಾಗೂ ಕನ್ನಡ ರಂಗಭೂಮಿಯ ಭಾಗ್ಯವಿಶೇಷವೆನ್ನಬಹುದು. ತತ್ಪರಿಣಾಮವಾಗಿ ಅವರ ಸಮಾನಮನಸ್ಕರು ಹಾಗೂ ಸಮಾನವಯಸ್ಕರು ಆದ ರಂಗಗೆಳೆಯರೊಡಗೂಡಿ ರಂಗ ಸಂಘಟನೆಯೊಂದು ರೂಪುಗೊಳ್ಳಲು ಸಾಧ್ಯವಾಯಿತು. ಅದುವೇ ಮನೆಯಲ್ಲಿ ಮೈತಾಳಿದ 'ಕಲಾನಿಕೇತನ' (1952). ಈ ಕೈಂಕರ್ಯದಲ್ಲಿ ಹೊಯ್‌ಕಯ್ ಆಗಿ ಒಗ್ಗೂಡಿದವರೆಂದರೆ ಶ್ರೀ ರಾಮಮೂರ್ತಿಯವರ ಆತ್ಮೀಯರಾದಂತಹ ಎಂ.ವಿ. ಶ್ರೀನಾಥ್, ಸಿ.ಕೆ. ಮಾಧವರಾವ್, ಎಲ್.ಪಿ. ಶಾಸ್ತ್ರೀ, ಎಸ್. ನಾಗಭೂಷಣರಾವ್, ಎಸ್.ಜಿ. ರಾಮಚಂದ್ರ, ಎ.ಕೆ. ಕೃಷ್ಣದಾಸ್, ಬಿ.ಎಸ್. ವಿಶ್ವನಾಥ್, ಎಚ್. ಕೃಷ್ಣಮೂರ್ತಿ ಮತ್ತು ಕೆ. ಸೀತಾರಾಂ ಮುಂತಾದವರು. 'ಗಂಭೀರವಾಗಿ ನಾನು ರಂಗಭೂಮಿಯನ್ನು ಪ್ರವೇಶ ಮಾಡಲು ಕಾರಣಕರ್ತರಾದವರು ವಿದ್ಯಾಗುರುಗಳಾದ ಪ್ರೊ. ಎಂ.ಎಸ್. ನಾಗರಾಜ್ ಮತ್ತು ಪ್ರೊ. ಎ. ರಾಮರಾವ್ ಅವರು. ಅವರಿಂದ ಅಧ್ಯಯನಕ್ಕೆ ಬಹಳ ಪ್ರೋತ್ಸಾಹ ಸಿಕ್ಕಿತು' ಎಂಬುದಾಗಿ ಶ್ರೀ ರಾಮಮೂರ್ತಿಯವರು ಆಗಾಗ್ಗೆ ನುಡಿಯುತ್ತಿರುತ್ತಾರೆ. ಬೆಂಗಳೂರಿನ ಶೇಷಾದ್ರಿಪುರಂನ ರಾಜೀವಗಾಂಧೀ ಸರ್ಕಲ್ ಬಳಿಯಿರುವ ಆರ್ಯ ಈಡಿಗ ಸಂಘದ ಹಾಸ್ಟಲ್‌ನ ಸಣ್ಣ ವೇದಿಕೆಯಲ್ಲಿ ಹಾಗೂ ಮತ್ತಿತರೆಡೆಗಳಲ್ಲಿ 'ಕಲಾನಿಕೇತನ'ದ ನಾಟಕ ಪ್ರದರ್ಶನಗಳು ನಡೆಯುತ್ತಿದ್ದವು. Pamplet ಮೂಲಕ ಹಾಗೂ ಬಣ್ಣದ Poster ಮಾಡಿ ಗೋಡೆಗಳ ಮೇಲೆ ಅಂಟಿಸುವುದರ ಮೂಲಕ ಪ್ರಚಾರ ಮಾಡಲಾಗುತ್ತಿತ್ತು. ಇದರೊಡನೆ ಪ್ರದರ್ಶನದ

ವಿವರಗಳನ್ನೊಳಗೊಂಡ ಸಣ್ಣ Brochureನ್ನು ಹೊರತರಲಾಗುತ್ತಿತ್ತು. ಹೀಗೆ ನಾಟಕ ಪ್ರದರ್ಶನದ ಖರ್ಚು ವೆಚ್ಚವನ್ನು ಸರಿದೂಗಿಸಲಾಗುತ್ತಿತ್ತು.

ಶ್ರೀ ರಾಮಮೂರ್ತಿಯವರು ಸಂಸ್ಥಾಪಿಸಿದ 'ಲಲಿತ ಕಲಾನಿಕೇತನ' (ಸ್ಥಾಪನೆ : 1957)ವು ನಿತ್ಯ ಕ್ರಿಯಾಶೀಲವಾಗಿದ್ದಿತು. ಅದರ ಅಧ್ಯಕ್ಷರಾಗಿ ಶ್ರೀ ಸಿದ್ಧಯ್ಯ ಪುರಾಣಿಕರು, ಉಪಾಧ್ಯಕ್ಷರಾಗಿ ಶ್ರೀ ಎಂ.ಎಸ್. ನಾಗರಾಜ್‌ರವರು ಮತ್ತು ಕಮಿಟೆಡ್ ಕಾರ್ಯದರ್ಶಿಯಾಗಿ ಶ್ರೀ ರಾಜಾರಾಂ ಗಿರಿಯನ್ ಅವರಿದ್ದರು. ಇದರ ಮೂಲಕ ತಾವೂ ಹಾಡುವುದರೊಂದಿಗೆ ಇತರೆ ಗಾಯಕ ಗಾಯಕಿಯರೊಂದಿಗೆ ಸುಗಮ ಸಂಗೀತ ಮತ್ತು ಜಾನಪದ ಸುಧೆಯ ಸವಿಯನ್ನು ಎಲ್ಲೆಡೆ ಹರಡುತ್ತಿದ್ದರು. ಅಲ್ಲದೆ ಗಾಯತ್ರಿ ಮತ್ತು ಚಂದ್ರಕಲಾ ವಾದ್ಯಗೋಷ್ಠಿಗಳಲ್ಲಿ ಸಮೂಹ ಗಾಯನದೊಂದಿಗೆ ಎಲ್ಲೆಡೆ ಮಾರ್ದನಿಸಿದರು, ತಮ್ಮ ರಂಗಯಾತ್ರೆಯನ್ನು ಮುಂದುವರೆಸಿದರು. ಹಾಡುಗಳನ್ನು ಹಾಡುವುದಕ್ಕೆ ಅಂಥ ಕಲಾವಿದರಾದಂಥ ವಿದ್ವಾನ್ ಬಿ. ದೊರೆಸ್ವಾಮಿ ಅವರ ಸಂಗೀತದ ಮಾರ್ಗದರ್ಶನವು ಶ್ರೀ ರಾಮಮೂರ್ತಿಯವರಿಗೆ ಒದಗಿ ಬರುತ್ತಿತ್ತು. ಇಂತಹವೇ ಸಂದರ್ಭ ಸನ್ನಿವೇಶಗಳಲ್ಲಿ ಅನೇಕ ಜನಪ್ರಿಯ ಗಾಯಕರು ಹಾಗೂ ಉದಯೋನ್ಮುಖಿ ಕವಿಗಳ ರಚನೆಗಳಿಗೆ ಹೃದ್ಯ ರಾಗ - ಸಂಗೀತ ಸಂಯೋಜನೆಗೈದು ಸ್ವತಃ ಹಾಡುಗಾರರ ಗುಂಪು ಮತ್ತು ವಾದ್ಯಗಾರರೊಂದಿಗೆ ಪ್ರಚುರಪಡಿಸುತ್ತಿದ್ದರು. ಅಲ್ಲಿ ಖ್ಯಾತ ನಾಟಕಕಾರರಾದ ಕೈವಾರ ರಾಜಾರಾವ್, ಎಂ.ಆರ್.ಶ್ರೀ. ಮತ್ತು ಬೇಲೂರು ಕೃಷ್ಣಮೂರ್ತಿ ಮುಂತಾದವರ ನಾಟಕಗಳು ಪ್ರದರ್ಶನಗೊಳ್ಳುತ್ತಿದ್ದವು. 'ಕಲಾನಿಕೇತನ'ವನ್ನು ಮುನ್ನಡೆಸಲು ಅವರಿಗೆ ಸೂಕ್ತ ತಿಳಿವಳಿಕೆ ಮತ್ತು ಪ್ರೋತ್ಸಾಹವನ್ನು ನೀಡುತ್ತಿದ್ದವರೆಂದರೆ ಎಂ.ಎಸ್. ನಾಗರಾಜ್ ಮತ್ತು ನಾಗಭೂಷಣರಾವ್ ಅವರು. ಶ್ರೀ ಕೆ. ಉಪೇಂದ್ರ ಅವರು ಆಗ ಪ್ರಕಟವಾಗುತ್ತಿದ್ದ 'ಕಲಾ' ಕೈಬರಹ ಪತ್ರಿಕೆಯ ಮೊದಲ ಎಡಿಟರ್ ಆಗಿದ್ದರು ಹಾಗೂ ಶ್ರೀ ರಾಮಮೂರ್ತಿಯವರು ಅದರ ಆರ್ಟ್ ಡೈರೆಕ್ಟರ್ ಆಗಿದ್ದರು. ಕವಿಪುಂಗವರಾದ ಯುಗದ ಕವಿ ಜಗದಕವಿ ಕುವೆಂಪು, ವರಕವಿ ದ.ರಾ. ಬೇಂದ್ರೆ, ಪ್ರೇಮನಾದ ಕವಿ ಕೆ.ಎಸ್. ನರಸಿಂಹಸ್ವಾಮಿ, ತತ್ತ್ವಪದ ನಿಧಿ ಡಿ.ವಿ.ಜಿ., ಕಾವ್ಯಋಷಿ ಪು.ತಿ.ನ., ಮಾನವಿಕ ಮುತ್ಸದ್ದಿ ಸಿದ್ಧಯ್ಯ ಪುರಾಣಿಕ ಹಾಗೂ ಎಸ್. ನಾಗಭೂಷಣರಾವ್ ಅವರ ಕವನ ರಚನೆಗಳಲ್ಲದೆ ಎಚ್. ಕೃಷ್ಣಮೂರ್ತಿ ಮುಂತಾದವರ ವಿರಚಿತ ರಚನೆಗಳು ಅವರ ಗಾಯನ ಶ್ರುತಿ ಮೇಳ ಸಮೂಹಕ್ಕೊಳಪಟ್ಟು ಸುತ್ತಮುತ್ತಲೆಲ್ಲೆಡೆ ಮೊಳಗುತ್ತಿದ್ದವು. ಗೀತಗಾಯನದಲ್ಲಿ ಎಸ್.ಜಿ. ರಘುರಾಮ್, ವಿ. ಲಲಿತ, ಶ್ರೀಮತಿ ಹರಿಪ್ರಸಾದ್, ಎಚ್. ಕೃಷ್ಣಮೂರ್ತಿ, ಕೆ.ಎಸ್. ಹೇಮಲತ, ಎ.ಎಸ್. ಶ್ರೀನಿವಾಸನ್ ಮತ್ತು ಎನ್.ಎಸ್. ರಾಮದಾಸ್ ಮೊದಲಾದವರಿರುತ್ತಿದ್ದರು.

ಶ್ರೀ ರಾಮಮೂರ್ತಿಯವರ ಮೇಷ್ಟ್ರು ಶ್ರೀ ಎಂ.ಎಸ್. ನಾಗರಾಜ್ ಅವರು ಬರೆದ 'ರಾಹುಕಾಲ' ನಾಟಕವು 'ಕಲಾನಿಕೇತನ'ದ ವತಿಯಿಂದ ಬೆಂಗಳೂರು ಮತ್ತು ಪ್ರಸಿದ್ಧ ಹಾಸನದ ದನಗಳ ಜಾತ್ರೆ (1956)ಯಲ್ಲಿ ಹಾಗೂ ಮಂಡ್ಯದಲ್ಲಿ ಪ್ರದರ್ಶನ ಕಂಡಿದ್ದಿತು. ಶ್ರೀ ರಾಮಮೂರ್ತಿಯವರು ಅದನ್ನು ನಿರ್ದೇಶಿಸುವುದರೊಂದಿಗೆ ಪಾತ್ರವನ್ನೂ ನಿರ್ವಹಿಸಿದ್ದರು. ಅದೊಂದು ಲಘು ಪ್ರಹಸನವಾಗಿತ್ತು.

UNESCOದ ಒಂದು ಅಂಗವಾದ ದೆಹಲಿಯ ಭಾರತೀಯ ನಾಟ್ಯಸಂಘದ ಘಟಕವಾಗಿ ಮೂರ್ತಗೊಂಡ 'ಮೈಸೂರು ಸ್ಟೇಟ್ ನಾಟ್ಯಸಂಘ - ಥಿಯೇಟರ್ ಸೆಂಟರ್ (1967)ನಲ್ಲಿ ಪ್ರೋಗ್ರಾಂ ಸಬ್‌ಕಮಿಟಿಯ ಎಕ್ಸಿಕ್ಯುಟಿವ್ ಡೈರೆಕ್ಟರ್ ಆಗಿದ್ದ ಶ್ರೀ ರಾಮಮೂರ್ತಿ ಯವರೊಡನೆ ಚುನಾಯಿತರಾಗಿ ಶ್ರೀರಂಗ (ಆದ್ಯ ರಂಗಾಚಾರ್ಯ) ಮೊದಲ ಅಧ್ಯಕ್ಷರು, ವಿಮಲಾ ರಂಗಾಚಾರ್ (ಜನರಲ್ ಸೆಕ್ರೆಟರಿ), ಜಿ.ಎಸ್. ಉಲ್ಲಾಳ್ ಮತ್ತು ಪಿ.ಐ. ಜೋಸೆಫ್ (ಉಪಾಧ್ಯಕ್ಷರು), ಪ್ರೊ. ಎಂ.ಎಸ್. ನಾಗರಾಜ್ (ಪ್ರೋಗ್ರಾಂ ಸಬ್‌ಕಮಿಟಿ ಚೇರ್‌ಮನ್), ಎಸ್.ಜಿ. ರಾಮಚಂದ್ರ, ಬಿ.ಎನ್. ನಾಣಿ (ಜಂಟಿ ಸೆಕ್ರೆಟರಿ), ಪ್ರೊ. ಜಿ.ಎಸ್. ರಾಮರಾವ್ (ಪ್ರಜಾವಾಣಿ ಉಪಸಂಪಾದಕರು) ಮೊದಲಾದವರಿದ್ದರು. 'ನಾಟ್ಯಸಂಘ'ವು ಪ್ರತ್ಯೇಕ ದ್ವೀಪಗಳಂತಿದ್ದ ನಾನಾ ರಂಗ ತಂಡಗಳನ್ನು ಒಂದೆಡೆ ಕೂಡಿಹಾಕಿ ಪರಸ್ಪರ ವಿಚಾರ ವಿನಿಮಯ, ಸ್ನೇಹ ಸೌಹಾರ್ದತೆ ಮತ್ತು ಸಹಕಾರ ಮನೋಭಾವವನ್ನು ಬಿತ್ತುವಲ್ಲಿ ಯಶಸ್ವಿಯಾಯಿತು. ಈ ನಿಟ್ಟಿನಲ್ಲಿ ಶ್ರೀರಂಗರ ಪ್ರೋತ್ಸಾಹ ಬಹಳವಾಗಿತ್ತು. ನಾಟ್ಯಸಂಘದ ಹುಟ್ಟಿಗೆ ಮೂಲ ಕಾರಣಕರ್ತರಾದವರೆಂದರೆ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರು. ಇದರ ವತಿಯಿಂದ ರಾಜ್ಯ ಶಿಕ್ಷಣ ಇಲಾಖೆಯ ನೆರವು ಪಡೆದು 1961ರ ಆಜುಬಾಜುವಿನಲ್ಲಿ ಇಡೀ ದೇಶದಲ್ಲಿಯೇ ಮೊಟ್ಟಮೊದಲ ಬಾರಿಗೆ ಬೆಂಗಳೂರಿನಲ್ಲಿ ಹೈಸ್ಕೂಲ್ ಶಿಕ್ಷಕರಿಗಾಗಿ ರಂಗತರಬೇತಿ ಶಿಬಿರ (Teachers Training Workshop)ವನ್ನು ಏರ್ಪಡಿಸಿದಾಗ ಶ್ರೀ ರಾಮಮೂರ್ತಿಯವರು ಅದರ ಅಸಿಸ್ಟೆಂಟ್ ಡೈರೆಕ್ಟರ್ ಆಗಿದ್ದರು. ಶ್ರೀರಂಗರು ಅಧ್ಯಕ್ಷರಾಗಿದ್ದ ಈ ರಂಗಕಮ್ಮಟದಲ್ಲಿ ಆಡಳಿತಗಾರನಾಗಿ ಎಸ್. ಶಿವರಾಂ, ಸರಕಾರದ ಅಕಾಡೆಮಿ ವತಿಯಿಂದ ಗೋವಿಂದರಾಜು ಅವರಲ್ಲದೆ ಬಿ.ಎನ್. ನಾಣಿ ಮತ್ತು ಎ.ಎಲ್. ಶ್ರೀನಿವಾಸಮೂರ್ತಿ ಅವರಿದ್ದರು. ಶ್ರೀ ರಾಮಮೂರ್ತಿಯವರು ಮೇಕಪ್ ಮತ್ತುಬಿ. ನಾಣಿಯವರು ಲೈಟಿಂಗ್ ತರಬೇತಿಯನ್ನು ನೀಡುತ್ತಿದ್ದರು. ಈ ಕಮ್ಮಟವು ಮೈಸೂರು ರಾಜ್ಯದ ರಂಗತಂಡಗಳಲ್ಲಿ ಹೊಸ ಚೈತನ್ಯವನ್ನುಂಟುಮಾಡಿತು. ಈ ನಿಟ್ಟಿನಲ್ಲಿ ಅವರು ಶ್ರೀರಂಗರನ್ನು ಓರ್ವ ನಿಷ್ಠಾವಂತ ಸಮಾಜ ಸುಧಾರಕನನ್ನಾಗಿ ಕಂಡಿದ್ದಾರೆ. ಅವರ ಮಾತಿನಲ್ಲಿಯೇ ಹೇಳುವುದಾದರೆ, "ಶ್ರೀರಂಗರ ಆಗಮನದ ನಂತರದಲ್ಲಿ ನಾಟಕ

ರಂಗದಲ್ಲಿನ ಈ ಸಾಮಾಜಿಕತೆಯ ಜೊತೆಗೆ ತಾಂತ್ರಿಕ ಬೆಳವಣಿಗೆಗಳೂ ಬಂದವು. ನಾಟಕಕಾರ ಕೇವಲ ಕಥೆ ಹೇಳುವ ನಾಟಕಕಾರ ಅಷ್ಟೇ ಅಲ್ಲ. He is also a designer, a reformer ಎನ್ನುವಂತಹ ಹೊಸ ಹೊಣೆಯ ದೃಷ್ಟಿಕೋನಗಳನ್ನು ತಂದುಕೊಟ್ಟವರು ಶ್ರೀರಂಗರೇ. He is the unique combination of an artist, a technician and a philosopher. ಆದ್ದರಿಂದಲೇ ಅಂದಿಗೂ ಇಂದಿಗೂ ಶ್ರೀರಂಗರು ಕೆಲವು ನಿರ್ದೇಶಕರಿಗೆ ಮತ್ತು ತಾಂತ್ರಿಕಜ್ಞರಿಗೆ ಒಂದು ದೊಡ್ಡ ಸವಾಲು."*

**ಬೆಂಗಳೂರು ಲಿಟ್ಲ್ ಥಿಯೇಟರ್ (Bangalore Little Theatre, BLT) :** ಇದು ಬೆಂಗಳೂರು ನಗರದ ಹಳೆಯ ರಂಗತಂಡವಾಗಿದ್ದು ಗಮನಾರ್ಹ ಪ್ರದರ್ಶನಗಳನ್ನಿತ್ತಿದೆ. ಇದು ಸೆಪ್ಟೆಂಬರ್ 1959ರಲ್ಲಿ ಇಂಗ್ಲಿಷ್ ನಾಟಕಗಳನ್ನಾಡಲು ಪ್ರಾರಂಭಗೊಂಡಿತು. ಬಾದಾಮಿ ಹೌಸ್‌ನ ಲಿಂಕನ್ ಸಿನಿಮಾ ಥಿಯೇಟರ್‌ನಲ್ಲಿ ಆಸ್ಕರ್ ವೈಲ್ಡ್‌ನ 'Importance of Being Earnest' ನಾಟಕದ ವಾಚನದೊಂದಿಗೆ ಸಂಸ್ಥೆಯು ಅಸ್ತಿತ್ವಕ್ಕೆ ಬಂದಿತು. ಬೆಂಗಳೂರು ಲಿಟ್ಲ್ ಥಿಯೇಟರ್‌ನ ಸಂಸ್ಥಾಪಕ ಸದಸ್ಯನಾಗಿ ಶ್ರೀ ರಾಮಮೂರ್ತಿಯವರಿದ್ದರು. ಅದರ ಇತರೆ ಸದಸ್ಯರಾದ ಪ್ರೊ. ಬಿ. ಚಂದ್ರಶೇಖರ್ (ಬಿ.ಸಿ.), ಎಸ್.ಜಿ. ರಾಮಚಂದ್ರ, ಬಿ.ಎನ್. ನಾಣಿ (ಬೆಳವಾಡಿ ನಾರಾಯಣ್), ಎ.ಟಿ. ಪದ್ಮನಾಭರಾವ್, ಎಸ್. ಶಿವರಾಂ, ಬೆಂಗಳೂರಿಗೆ ಆಗಮಿಸಿದ ಸ್ಕಾಟ್ ಟಾಡ್ ಮತ್ತವರ ಮಡದಿ ಮಾರ್ಗರೇಟ್ ಟಾಡ್‌ರೊಡಗೂಡಿ ಸಂಘದ ಇಂಗ್ಲಿಷ್ ನಾಟಕ ಚಟುವಟಿಕೆಗಳಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದರು. ಸ್ಕಾಟ್ ಟಾಡ್ ಅವರು Indian Telephone Industries (ITI) ಕಾರ್ಖಾನೆಗೆ Member of Board of Directors ಆಗಿದ್ದರು. ಈ ದಂಪತಿಗೆ ರಂಗಭೂಮಿಯ ಬಗೆಗೆ ಅತೀವ ಪ್ರೀತಿಯಿದ್ದಿತು. ಶ್ರೀ ವಿಶ್ವನಾಥ್ ಎಂಬುವರು ಟಾಡ್‌ರವರ ಸೆಕ್ರೆಟರಿಯಾಗಿದ್ದರು. ಬಿ.ಎಲ್.ಟಿ.ಯೊಂದಿಗೆ ಮತ್ತೂ ಕೈ ಜೋಡಿಸಿದವರೆಂದರೆ ವಿಮಲಾ ರಂಗಾಚಾರ್, ಎ. ರಾಮರಾವ್, ಉಪಾಸನೆ ಸೀತಾರಾಂ, ಸಿ.ಆರ್. ಸಿಂಹ, ಪ್ರೊ. ಎಸ್. ರಾಮಸ್ವಾಮಿ, ಜಸ್ಟೀಸ್ ಶ್ರೀ ಚಂದ್ರರಾಜೇ ಅರಸ್ ಅವರ ತಮ್ಮ ಶ್ರೀ ಅನಂತದೇವರಾಜ್ ಅರಸ್ (ಅಧ್ಯಕ್ಷ), ಪೆನ್ನಿಲಾಯರ್ (ಪಾರ್ಸಿ) ಮತ್ತು ವಿಜ್ಞಾನಿ ಪ್ರೊ. ರಾಯ್‌ಪೆರ್ರಿ ಮುಂತಾದವರು. ಇದರ ಸಂಸ್ಥಾಪಕ ಸದಸ್ಯರ ಸಂಖ್ಯೆಯೇ 50ರವರೆಗೆ ಬೆಳೆದಿದ್ದಿತು. ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಮಾಸ್ತರಾಗಿದ್ದ ಪ್ರೊ. ಎಸ್. ರಾಮಸ್ವಾಮಿಯುವರು ಬಿ.ಎಲ್.ಟಿ.ಯ ಮೊದಲ ಕಾರ್ಯದರ್ಶಿ. ಅವರು ಬರೆದ 'Stage Struck' ನಾಟಕಕ್ಕೆ ಶ್ರೀ ರಾಮಮೂರ್ತಿಯವರು ಪೀಠಿಕೆಯನ್ನು ಬರೆದಿದ್ದರು. ಲೇಡಿ ಮಾರ್ಗರೇಟ್ ಅವರು ಲಂಡನ್‌ನಲ್ಲಿರತಕ್ಕಂಥ London Academy of Music and Dramatic Art

(LAMDA)ನ ಪದವೀಧರೆ. ಅವರು ಶ್ರೀ ರಾಮಮೂರ್ತಿಯವರಿಗೆ ಪರಿಚಯವಾಗಿದ್ದು 'ನಾಟ್ಯಸಂಘ'ದ ಮುಖೇನ ಮತ್ತು ಅವರು ಶ್ರೀ ರಾಮಮೂರ್ತಿಯವರ ಕುರಿತು ಆಗಾಗ್ಗೆ ವಿಚಾರಿಸುತ್ತಿದ್ದರು. ಪ್ರೊ. ಪೆರ್ರಿಯವರು ಸಂಘದ ಉಪಾಧ್ಯಕ್ಷರಾಗಿದ್ದರು. ಅವರಿಂದ ಶ್ರೀ ರಾಮಮೂರ್ತಿಯವರು ಪಿಯಾನೋವಾದ್ಯ ನುಡಿಸುವುದನ್ನು ಕಲಿತರು. ಪ್ರೊ. ಪೆರ್ರಿಯವರು ಮ್ಯಾಂಚೆಸ್ಟರ್‌ನಿಂದ ಆಗಮಿಸಿದವರಾಗಿದ್ದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಹೈ ಹೋಲ್ಟೇಜ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪ್ರಾಧ್ಯಾಪಕರಾಗಿದ್ದರು. ಬಿ.ಎಲ್.ಟಿ.ಯ ಮೊಟ್ಟಮೊದಲ ರಂಗ ಪ್ರಯೋಗವೆಂದರೆ ಫ್ರೆಂಚ್ ನಾಟಕಕಾರ ಜೀನ್ - ಬಾಪ್ಟಿಸ್ಟೆ ಪೋಕಲಾನ್ ಮೋಲಿಯೇರ್ (Jean - Baptiste Poquelin Moliere, 1622-73)ನ 'ಭೂರ್ಜ್ವಾ ದಿ ಜಂಟಲ್‌ಮನ್' (ಭೂರ್ಜ್ವಾ ಆಗಿದ್ದವನು ಮಹಾಶಯನಾದ, 'Le Bourgeois gentilhomme', 1670); ಮೋಲಿಯೇರ್‌ನ ಮೂಲ ಹೆಸರು ಪೋಕಲಾನ್ ಎಂದಿದ್ದಿತು. ಟಾಡ್ ಅವರು ಅಂದಿನ ಉದ್ಘಾಟನಾ ನಾಟಕ ಪ್ರದರ್ಶನವನ್ನು ಸೂಕ್ಷ್ಮಾತಿಸೂಕ್ಷ್ಮವಾಗಿ ನಿರ್ದೇಶಿಸಿದ್ದರು. ಶ್ರೀಮತಿ ಮಾರ್ಗರೇಟ್ ಟಾಡ್ ಅವರು ರಂಗ ಚಲನವಲನಗಳು, ಇಂಗ್ಲಿಷ್ ಭಾಷಾಪ್ರಯೋಗ (ಉಚ್ಚಾರಣೆ) ಮತ್ತು ಗುಂಪು ವಿಂಗಡನೆಯ ಕಾರ್ಯಗಳಲ್ಲಿ ತರಬೇತಿ ನೀಡುತ್ತಿದ್ದರು. ಶ್ರೀ ರಾಮಮೂರ್ತಿಯವರು ರಂಗ ಸಂಗೀತವನ್ನು ಒದಗಿಸಿದ್ದರು. ಸ್ಕಾಟ್‌ಟಾಡ್ ನಿರ್ದೇಶನದ ಮತ್ತೊಂದು ರೂಪಾಂತರ 'The Prodigious Snob' ಪ್ರಾರಂಭಿಕವಾಗಿಯೂ ಪ್ರದರ್ಶನಕಂಡಿತು. ಇದರೊಂದಿಗೆ ನಾಟಕಪ್ರಿಯರಿಗೆ ನಾಟಕ ವಾಚನ, ರಂಗಪ್ರಯೋಗ ಹಾಗೂ ರಂಗಭೂಮಿಯ ವಿವಿಧ ಶಾಖೆಗಳ ಬಗೆಗೆ ರಂಗಶಿಬಿರಗಳು ನೆರವೇರಿದವು. ಇದು ರಂಗಭೂಮಿ ಚಟುವಟಿಕೆಗಳಿಗೆ ಮೀಸಲಾದ 'Back Stage' ಪ್ರಕಟಣೆಗೆ ಮೊದಲಾಗಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿತು; ಅಭಿನಯ ಮತ್ತು ನಿರ್ದೇಶನದಲ್ಲಿ ಹಲವಾರು ಹೊಸ ಪ್ರತಿಭೆಗಳು ಮಿನುಗಿದವು.

ಅಂದಿನ ಕಾಲದಲ್ಲಿ ಬೆಂಗಳೂರಿನ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ (ITI), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (IISc), ಎಚ್.ಎ.ಎಲ್. (HAL)ನಲ್ಲಿ ಅದರ ಅಂಗವಾಗಿ Aeroengineers ಫ್ಯಾಕ್ಟರಿ ಇತ್ತು. ಅದು Roll Royce ಕಂಪನಿಯದಾಗಿತ್ತು. ಈ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದವರಲ್ಲಿ ಬ್ರಿಟಿಷರು ಇದ್ದರು. ಈ ಸಾಲಿನಲ್ಲಿ ಪ್ರಮುಖರಾದವರೆಂದರೆ ದಂಪತಿಗಳಾದ ಟಾಡ್ಸ್, ದಿ ಲೀಹಸ್ (The Leahs) ಹಾಗೂ ದಿ ಮ್ಯೂರ್‌ಹೆಡ್ಸ್ (The Muirheds) ಮುಂತಾದವರಿದ್ದರು. Norman Issot ಅವರು 'ನಾಟ್ಯಸಂಘ'ದ ಮೆಂಬರ್ ಆಗಿದ್ದು BLTಗೆ Lighting Control Board ಅನ್ನು ಮಾಡಿಕೊಟ್ಟರು. ಅದಕ್ಕೆ ಶ್ರೀ ರಾಮಮೂರ್ತಿ ಮತ್ತು ಬಿ. ನಾಣಿ ಅವರು ಸಹಾಯ ಮಾಡಿದರು.

ಶ್ರೀ ಟಾಡ್ ಅವರು ಇಲ್ಲದಿದ್ದಾಗ ಇನ್‌ಸ್ಟಿಟ್ಯೂಟ್‌ನ ಅವರ ನಿವಾಸದಲ್ಲಿ ಸಮಿತಿಯ ಸಭೆಗಳು ನಡೆಯುತ್ತಿದ್ದವು. ದಿನಗಳುರುಳಿದಂತೆ ಬಿ.ಎಲ್.ಟಿ.ಯಲ್ಲಿ ಬಗೆಬಗೆಯ ಪ್ರತಿಭಾನ್ವಿತರು ರಂಗದ ಮೇಲೆ ಕಾಣಿಸಿಕೊಂಡರು. ರಂಗಭೂಮಿ, ಚಲನಚಿತ್ರ ಮತ್ತು ದೂರದರ್ಶನ ಮಾಧ್ಯಮಗಳೆಲ್ಲದರಲ್ಲಿಯೂ ಪ್ರಖ್ಯಾತರಾದ ಸಿ.ಆರ್. ಸಿಂಹ, 'ಉಪಾಸನೆ' ಚಲನಚಿತ್ರದ ಖ್ಯಾತಿ ಸೀತಾರಾಂ, ಪ್ರೊ. ವಿಜಯ ಪದಕಿ, ಯು.ಕೆ. ಜಯದೇವ, ಶ್ರೀನಾಥ್ ಮತ್ತು ಆರ್. ನಾಗೇಶ್ ಮುಂತಾದವರನ್ನು ಹೆಸರಿಸಬಹುದು. ಇಷ್ಟಾದಾಗ್ಯೂ ಬಿ.ಎಲ್.ಟಿ.ಯ ಪ್ರಮುಖ ವ್ಯಕ್ತಿಗಳಲ್ಲಿ ಪ್ರಖರವಾಗಿ ಕಂಡುಬರುತ್ತಿದ್ದ ನಾಮಧೇಯವೆಂದರೆ ಶ್ರೀ ರಾಮಮೂರ್ತಿಯವರು. 'The Tea House at the August Moon' (ರಚನೆ : ಜಾನ್ ಪ್ಯಾಟ್ರಿಕ್, ನಿರ್ದೇಶಕ : ಟಾಡ್) ನಾಟಕ ಪ್ರಯೋಗಗೊಂಡಾಗ ಶ್ರೀ ರಾಮಮೂರ್ತಿಯವರು ಅದರ ಸೂತ್ರಧಾರ ಸಕಿನಿ (Sakini) ಪಾತ್ರ ಮಾಡುತ್ತಿದ್ದರು. ಆಗ ಅವರಿಗೆ ದೆಹಲಿಯ ಎನ್.ಎಸ್.ಡಿ.ಯಲ್ಲಿ ಸೀಟ್ ಸಿಕ್ಕಿ ತೆರಳಲು ಪ್ರೊ. ಬಿ.ಸಿ.ಯವರು ಆ ಪಾತ್ರವನ್ನು ವಹಿಸಿಕೊಂಡರು. 1970 ರಿಂದ 1995ರವರೆಗೆ ಬಿ.ಎಲ್.ಟಿ.ಯೊಡನಿದ್ದ ಡಾ. ಕೆ.ಎಂ. ಶ್ರೀನಿವಾಸಗೌಡರು ಉತ್ಪಲದತ್ತರ 'ಸೂರ್ಯ ಶಿಕಾರ್' ನಾಟಕವನ್ನು ನಿರ್ದೇಶಿಸಲು ಶ್ರೀ ರಾಮಮೂರ್ತಿಯವರು ಸ್ಟೇಜ್ ಡಿಸೈನಿಂಗ್ ಮತ್ತು ಲೈಟಿಂಗ್ ಮಾಡಿದ್ದರು. ಅಲ್ಲದೆ ಅವರು ಸಿ.ಆರ್. ಸಿಂಹ ಅಭಿನಯದ 'ತುಘಲಕ್' ಇಂಗ್ಲಿಷ್ ನಾಟಕ ಪ್ರದರ್ಶನವನ್ನೂ ನಿರ್ದೇಶಿಸಿದ್ದರು. ಅದು ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನ ಕಂಡಂದು ಶ್ರೀ ರಾಮಮೂರ್ತಿಯವರು ಲೈಟಿಂಗ್ ಮಾಡಿದ್ದರು.

ಬೆಂಗಳೂರಿನ ಬಾದಾಮಿ ಹೌಸ್ ಆಗಿನ ಜಾರ್ಜ್ ಓಕ್ಸ್ (George Oakes) ಬಿಲ್ಡಿಂಗ್ ಆಗಿದ್ದಿತು. ಅಲ್ಲಿ ಅಮೆರಿಕದ Unites States Informaton Library (USIL) ಇತ್ತು. ಅದರಿಂದ ಶ್ರೀ ರಾಮಮೂರ್ತಿಯವರು ಸದಸ್ಯರಾಗಿ ಪುಸ್ತಕಗಳನ್ನು ತೆಗೆದುಕೊಳ್ಳುತ್ತಿದ್ದರು. ಅಲ್ಲಿಯೇ ವೈ.ಎನ್.ಕೆ.ಯವರ ಪರಿಚಯವಾಯಿತು. ಅಂದು ಥಿಯೇಟರ್ ಟೆಕ್ನಾಲಜಿ ಕುರಿತ 'Theatre Arts' ಎಂಬ ಮ್ಯಾಗಜೀನ್ ಪ್ರಕಟಗೊಳ್ಳುತ್ತಿತ್ತು. USILನ ಡೈರೆಕ್ಟರ್ ಆಗಿದ್ದ ಜೋಸೆಫ್ ಹೋರ್ನ್ (Joseph Horne) ಅವರ ನೆರವಿನಿಂದ ಅಮೆರಿಕನ್ ರಂಗಭೂಮಿಯನ್ನು ಅರಿತುಕೊಳ್ಳಲಾರಂಭಿಸಿದರು ಮತ್ತು ಅವರೊಡನೆ ರಂಗ ಒಡನಾಟವಿದ್ದಿತು. USILನವರು ಆಗ ಪ್ರತಿಷ್ಠಿತ ಸಂಘ ಸಂಸ್ಥೆಗಳಿಗೆ ದಪ್ಪರಟ್ಟಿನ ಸಣ್ಣ ಅಲ್ಮಿರಾದಲ್ಲಿ ವಿವಿಧ ವಿಷಯಗಳಿಗೆ ಸಂಬಂಧಪಟ್ಟ 100 ಅಮೆರಿಕನ್ ಪುಸ್ತಕಗಳನ್ನು ಉಚಿತವಾಗಿ ಕೊಡುತ್ತಿದ್ದರು. ಅಂತಹದ್ದನ್ನು 'ಕಲಾನಿಕೇತನಕ್ಕೆ' ಕೊಟ್ಟರು. ಅಷ್ಟೇ ಅಲ್ಲದೆ 16 ಮಿ.ಮಿ.ನ ಸುಮಾರು

ಒಂದು ಗಂಟೆ ಕಾಲದ ಚಲನಚಿತ್ರಗಳನ್ನು, ಜೊತೆಗೆ 16 ಎಂ.ಎಂ. ಪ್ರೊಜೆಕ್ಟರ್, ಟ್ರಾನ್ಸ್‌ಫರ್ಮರ್ ಇತ್ಯಾದಿ ಉಪಕರಣಗಳನ್ನು ಸುಮಾರು ಎರಡು ದಿವಸಗಳ ಅವಧಿಗೆ ಉಚಿತವಾಗಿ ಸಂಘ ಸಂಸ್ಥೆಗಳ ಸದಸ್ಯರು ನೋಡಲು ಎರವಲಾಗಿ ಕೊಡುತ್ತಿದ್ದರು. ಆದರೆ ಅದರ ಬಗ್ಗೆ ಸವಿವರ ವರದಿ ನೀಡಬೇಕಾಗುತ್ತಿತ್ತು. ಅದೇ ವೇಳೆಗೆ ಬ್ರಿಟಿಷ್ ಕೌನ್ಸಿಲ್ ಲೈಬ್ರರಿ (British Council Library)ಯಿದ್ದು ಸ್ಯಾಂಕೆ ಹೆಚ್. ಬೆಸ್ಟ್ (Sankey H. Best) ಅವರು ಅದರ ಮ್ಯಾನೇಜರ್ ಆಗಿದ್ದರು.

ಶ್ರೀ ರಾಮಮೂರ್ತಿಯವರು 1962ರ ಚಳಿಗಾಲದ ರಜಾದಿನಗಳಲ್ಲಿ (Winter Holidays) ಡಿಸೆಂಬರ್ 1 ರಿಂದ 31ರವರೆಗಿನ ಅವಧಿಯಲ್ಲಿ ಭಾರತ ಸರಕಾರದ ನ್ಯಾಷನಲ್ ಇನ್ಸಿಟ್ಯೂಟ್ ಫಾರ್ ಆಡಿಯೋವಿಶುಯಲ್ ಎಜುಕೇಶನ್ (National Institute for Audiovisual Education)ವತಿಯಿಂದ ನೆರವೇರಿದ ಕಪ್ಪು ಬಿಳುಪು ಮತ್ತು ವರ್ಣ ಫೋಟೋಗ್ರಫಿ ಮತ್ತು ಸಿನಿಮೆಟೋಗ್ರಫಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಅದರಲ್ಲಿ ಫೋಟೋ ತೆಗೆಯುವುದು ಮತ್ತು ಡಾರ್ಕ್‌ರೂಮ್‌ನಲ್ಲಿ ಸಿಲ್ಕ್‌ಗ್ರೀನ್, ಡೆವಲಪಿಂಗ್, ಪ್ರಿಂಟಿಂಗ್ ಮತ್ತು ಎಡಿಟಿಂಗ್ ನಡೆಸುತ್ತಿದ್ದರು. ಬಿ.ವಿ. ಕಾರಂತ, ಬಿ.ಎಂ. ಶಾ. ಹಾಗೂ ಗೋವರ್ಧನ ಎಚ್. ಪಂಚಾಲ್ ಅವರಿದ್ದು ಪ್ರೊ. ಖನ್ನಾ ಅವರು ಇದನ್ನು ನಡೆಸಿಕೊಟ್ಟರು. ಭಕ್ಷಿ ಎನ್ನುವ ಉಪಾಧ್ಯಾಯರೂ ಇದ್ದರು. ಜೊತೆಯಲ್ಲಿ ಪ್ರೊ. ಅಲ್ಕಾಜಿಯವರು ಶ್ರೀ ರಾಮಮೂರ್ತಿಯವರನ್ನು ಒಳಗೊಂಡಂತೆ ನಾಲ್ಕು ಜನರನ್ನು ಡೆಪ್ಯೂಟ್ ಮಾಡಿದ್ದರು. ಒಬ್ಬೊಬ್ಬರೂ ಡೆಲ್ಲಿಯ ಬಗೆಗೆ ಒಂದೊಂದು ವಿಷಯದಲ್ಲಿ Film Strip ಮಾಡಿದ್ದರು. ಶ್ರೀ ರಾಮಮೂರ್ತಿಯವರು 'Monuments in Delhi' (ಕುತುಬ್ ಮಿನಾರ್, ಸಫ್ದರ್‌ಜಂಗ್ ಆಸ್ಪತ್ರೆ - ಇತ್ಯಾದಿ) ಕುರಿತು ನಿರ್ಮಿಸಿದ್ದರು. ಅಲ್ಲದೆ ಅವರು ನ್ಯೂಯಾರ್ಕ್‌ನ ಕ್ಲೀಗಲ್ ಬ್ರದರ್ಸ್ (Kliegl Bros)ನಲ್ಲಿ Certificate Course in Illumination Engineering ಕಮ್ಮಟದಲ್ಲಿಯೂ ಭಾಗವಹಿಸಿದ್ದರು.

* * *

ಶ್ರೀರಂಗರೊಡನೆಯ ತಮ್ಮ ಒಡನಾಟ ಕುರಿತು ಶ್ರೀ ರಾಮಮೂರ್ತಿಯವರು ಹೀಗೆ ನುಡಿದರು : "ಭಾರತೀಯ ರಂಗಭೂಮಿಯ ಅಧ್ವರ್ಯುಗಳಲ್ಲೊಬ್ಬರಾದ ಶ್ರೀರಂಗರು ಬೆಂಗಳೂರಿಗೆ ಬಂದಾಗ 'ರವಿ ಕಲಾವಿದರು'ರೊಂದಿಗೆ ಸಂಪರ್ಕ ಬೆಳೆಯಿತು. ಆಗ ಅವರು ಬೆಂಗಳೂರು ಆಕಾಶವಾಣಿಯಲ್ಲಿ ಡ್ರಾಮಾ ಪ್ರೊಡ್ಯೂಸರ್ ಆಗಿದ್ದರು. ಆಗ ನನಗೆ ಅವರ ಪರಿಚಯವಿರಲಿಲ್ಲ. 1956ರಲ್ಲಿ ನಾನು ITIಗೆ ಸೇರಿದ ಹೊಸದರಲ್ಲಿ ಬೆಂಗಳೂರಿನ ಆಕಾಶವಾಣಿಯ ನಾಟಕದಲ್ಲಿ ಪಾತ್ರ ಮಾಡಲು ಕರೆಬಂತು. 3-4

ತಿಂಗಳುಗಳಲ್ಲಿ ನಿಗದಿತ ಕಾಲದಲ್ಲಿ ರಿಹರ್ಸಲ್ ನಡೆಯಿತು. ಪುನಃ Reading ಮಾಡೋಣ ಅಂದ್ರು. ಶ್ರೀರಂಗರ ಅಸಿಸ್ಟೆಂಟ್ ನೀಲಕಂಠರಾವ್ ಅವರು ಪ್ರೋಗ್ರಾಂ ಎಕ್ಸಿಕ್ಯುಟಿವ್ ಆಗಿದ್ದರು. ಶ್ರೀರಂಗರ ಬಗ್ಗೆ ಆಗಾಗ್ಗೆ ನಾನು ಬಹಳ ಕೇಳಿದ್ದೆ. ಪೇಪರ್‌ಗಳಲ್ಲಿ ಓದುತ್ತಿದ್ದೆ. ಅವರು ರಾಯಚೂರಿನಲ್ಲಿ 25-27 ಡಿಸೆಂಬರ್ 1955ರವರೆಗೆ ನೆರವೇರಿದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಒಟ್ಟಿನಲ್ಲಿ ಅವರ ವೈಯಕ್ತಿಕ ಪರಿಚಯ ಆಕಾಶವಾಣಿಯಲ್ಲಾಯಿತು. ಆಗ ಡೆಲ್ಲಿಯಲ್ಲಿ ಕನ್ನಡ ಡ್ರಾಮಾ ಡಿವಿಜನ್‌ನ್ನು ಪ್ರಾರಂಭ ಮಾಡಿದ್ದರು. 'ರವಿ ಕಲಾವಿದರು' ಪಂಚವಾರ್ಷಿಕ ಯೋಜನೆಗಳ ಬಗ್ಗೆ ಬಿ.ಎಸ್. ನಾರಾಯಣರಾವ್ ಅವರು ಬರೆದ 'ಕರ್ತಾರನ ಕಮ್ಮಟ' ನಾಟಕವನ್ನು ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಪ್ರದರ್ಶಿಸಿದರು. ಅದೊಂದು ಒಳ್ಳೆಯ ಪ್ರೊಡಕ್ಷನ್.

ಸಮಾಜ ಸುಧಾರಕರಾದ ಟಿ.ಪಿ. ಕೈಲಾಸಂ, ಪರ್ವತವಾಣಿ ಮೊದಲಾದವರ ನಾಟಕಗಳು ಪ್ರದರ್ಶನಗೊಳ್ಳುತ್ತಿರುವಾಗಲೇ ಶ್ರೀರಂಗರ ಬೆಂಗಳೂರು ಆಗಮನ ಮತ್ತು ನೆಲೆಸುವಿಕೆಯು ಹೊಸಸ್ಪರ್ಶ ನೀಡಿ ಆಧುನಿಕ ಕನ್ನಡ ರಂಗಭೂಮಿಯ ನವಮನ್ವಂತರದ ಅದೃಷ್ಟದ ಬಾಗಿಲನ್ನು ತೆರೆಯಿತು (1955). ತತ್ಪರಿಣಾಮವಾಗಿ ಕನ್ನಡ ರಂಗಭೂಮಿಯಲ್ಲಿ ಸಾಮಾಜಿಕ ನಾಟಕಗಳತ್ತ ಒಲವು ತೀವ್ರಗೊಂಡಿತು. 1956ರಲ್ಲಿ ಶ್ರೀರಂಗರು ಆಕಾಶವಾಣಿ ಬೆಂಗಳೂರು ಕೇಂದ್ರದ ನಾಟಕ ನಿರ್ಮಾಪಕ - ನಿರ್ದೇಶಕನಾಗಿ ಅಧಿಕಾರ ಸ್ವೀಕರಿಸಿ ಮೂರು ವರುಷಗಳ ಕಾಲ ಕೆಲಸ ಮಾಡಿ ತ್ಯಾಗಪತ್ರವನ್ನಿತ್ತು 1959ರಲ್ಲಿ ಅಲ್ಲಿಂದ ಹೊರಬಂದರು."

ಶ್ರೀ ರಾಮಮೂರ್ತಿಯವರು ಬೆಂಗಳೂರಿನ ನಿರ್ದಿಷ್ಟ ಗೊತ್ತುಗುರಿಯನ್ನೊತ್ತ ಕಲಾತಂಡಗಳ ಮೂಲಕ ಮೈವೆತ್ತ ತಮ್ಮ ಅನನುಕರಣೀಯ ರಂಗಶಿಸ್ತು, ಪ್ರಾಮಾಣಿಕತೆ, ನಿಯಮ ಸಂಯಮ ಮತ್ತು ಅಚ್ಚುಕಟ್ಟುತನದ ಪ್ರತಿಫಲವಾಗಿಯೆಂಬಂತೆ ರಂಗಭೂಮಿಯ ಅಮಿತ ಆಶೋತ್ತರಗಳನ್ನು ಪೂರೈಸಿದ್ದಾರೆ. 'ರಂಗಭೂಮಿಯ ಎಲ್ಲಾ ವಿಭಾಗಗಳ ತಂತ್ರಜ್ಞರೂ ಕಲಾವಿದರೂ ಪರಸ್ಪರ ಒಂದೆಡೆ ಕಲೆತು ಮುಕ್ತ ವಿಚಾರ ವಿನಿಮಯ ನಡೆಸಿ ಸ್ವಪ್ರೇರಣೆಯಿಂದ ರಂಗಕಲೆಯ ಚಟುವಟಿಕೆಗಳಲ್ಲಿ ಸೌಹಾರ್ದತೆಯಿಂದ ಕೆಲಸ ಮಾಡಬೇಕು. ಹೀಗೆ ತೊಡಗಿಸಿಕೊಳ್ಳುವುದರ ಮೂಲಕ ಯಾವುದೇ ರಂಗತಂಡವು ಸುಸಂಬಂಧಿತ ಸಂಘಟನೆಯಾಗಿ ರೂಪುಗೊಂಡು ಸಮೂಹ ಕಾರ್ಯವಿಧಾನ - ಪ್ರಧಾನ ಮತ್ತು ಸ್ಫೂರ್ತಿಯಿಂದ ಸ್ಪಷ್ಟ ರಂಗಕಲ್ಪನೆಗಳು ಒಡಮೂಡುವುದು' ಎನ್ನುವರು. ಶ್ರೀರಂಗರು ಆಕಾಶವಾಣಿಯ ನಾಟಕ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಂದು ಆಹ್ವಾನಿತ ಕಾರ್ಯಕ್ರಮ ನಿರ್ವಾಹಕರಾಗಿದ್ದ ವಿ.ಸೀ.ಯವರು ಇತರರೊಡಗೂಡಿ ನಾಟಕ

ತಂಡವೊಂದನ್ನು ಕಟ್ಟಲು ಮುಂದಾಗಿದ್ದರು. ವಿ.ಸೀ. ಅವರು ವಿ. ರಾಮಮೂರ್ತಿ, ಜಿ. ಶ್ರೀನಿವಾಸಮೂರ್ತಿ, ಎಚ್.ವಿ. ವೆಂಕಟಸುಬ್ಬಯ್ಯ, ಟಿ. ಶ್ರೀನಿವಾಸರಾಜು ಮೊದಲಾದ ಕೆಲವು ರಂಗಚಿಂತಕರೊಡನೆ ಬಹಳ ವಿಶ್ವಾಸ, ಸಲಿಗೆಯ ನಡೆ ನುಡಿಯನ್ನಿಟ್ಟುಕೊಂಡಿದ್ದರು. ಶ್ರೀ ಹೊನ್ನಪ್ಪ ಭಾಗವತರು 'ಲಲಿತಕಲಾನಿಕೇತನ'ದ ಸದಸ್ಯರು ಮತ್ತು ಶ್ರೀ ಗುಬ್ಬಿ ಚನ್ನಬಸವೇಶ್ವರ ನಾಟಕ ಕಂಪನಿಯ ಕಲಾವಿದರನ್ನು ಒಗ್ಗೂಡಿಸಿ ಶ್ರೀ ಉಮಾಮಹೇಶ್ವರ ನಾಟಕ ಮಂಡಳಿಯನ್ನು ಸ್ಥಾಪಿಸಿದರು; ಎಂ.ಎಸ್. ನಾಗರಾಜ್ ವಿರಚಿತ 'ಬಸವೇಶ್ವರ' ನಾಟಕದಲ್ಲಿ ಬಸವಣ್ಣನ ಪಾತ್ರವನ್ನು ನಿರ್ವಹಿಸಿದರು. ಗುಬ್ಬಿ ವೀರಣ್ಣ ಮತ್ತು ಬಿ. ಜಯಮ್ಮ ಅವರೂ ಪಾತ್ರವಹಿಸಿದ್ದರು. ಶ್ರೀ ರಾಮಮೂರ್ತಿಯವರು ಕಳ್ಳನ ಪಾತ್ರವನ್ನು ನಿರ್ವಹಿಸುವುದರೊಂದಿಗೆ ಕಲಾವಿದರಿಗೆ ಮೇಕಪ್ ಮಾಡಿದ್ದರು. ಹೊನ್ನಪ್ಪ ಭಾಗವತರ್ ಮತ್ತು ಮುನಿಯಪ್ಪನವರು ಸಂಗೀತ ಸಂಯೋಜಿಸಿದ್ದರು. ಅದರ ಮೊದಲ ಪ್ರದರ್ಶನವು ಬೆಂಗಳೂರು ನಗರದ ಸರ್ ಕೆ.ಪಿ. ಪುಟ್ಟಣ್ಣಶೆಟ್ಟಿ ಟೌನ್‌ಹಾಲ್‌ನಲ್ಲಿ ನೆರವೇರಿತು.

ಸ್ವಾತಂತ್ರ್ಯಪೂರ್ವ ಕಾಲದಲ್ಲಿಯೇ ಜನ್ಮತಾಳಿ ಹೆಸರಾಂತ ವಕೀಲರು ಮತ್ತು ಕಲಾವಿದರಾಗಿದ್ದ ಬಳ್ಳಾರಿ ಟಿ. ರಾಘವಾಚಾರ್ಯರ ಸ್ಥಾಪಕ ನಾಟಕ ತಂಡವಾಗಿದ್ದ ಅಮೆಚ್ಯೂರ್ ಡ್ರಾಮಾಟಿಕ್ ಅಸೋಸಿಯೇಷನ್ (Amateur Dramatic Association, ADA, ಸ್ಥಾಪನೆ : 1909) ನಿಂದ ಮೊದಲ್ಗೊಂಡು ಇತರೆ ರಂಗಸಂಘ ಸಂಸ್ಥೆಗಳೊಡನೆ ಶ್ರೀ ರಾಮಮೂರ್ತಿಯವರು ತಮ್ಮನ್ನು ವಿಶೇಷವಾಗಿ ಗುರುತಿಸಿಕೊಂಡಿದ್ದರು, ಒಡನಾಟವನ್ನಿರಿಸಿಕೊಂಡಿದ್ದರು. ಕೆ. ಭೀಮರಾವ್ ಅವರು ಮಲ್ಲೇಶ್ವರಂನಲ್ಲಿರುವ ಹಿಮಾಂಶು ಶಿಶುವಿಹಾರದ ಸ್ಥಾಪಕರು ಮತ್ತು ಹಿಮಾಂಶು ಸೌಂಡ್ ಸಿಸ್ಟಮ್ ಮಾಲೀಕರೂ ಆಗಿದ್ದ ಮಲ್ಲೇಶ್ವರದ ನಿವಾಸಿ, ಎಂ.ಎಲ್.ಎಸ್. ಶಾಸ್ತ್ರೀಯವರು ಎ.ಡಿ.ಎ. ಸಂಸ್ಥೆಯಲ್ಲಿ ಅದ್ಭುತ ನಟರಾಗಿ ನಂತರ ಅದರ ಕಾರ್ಯದರ್ಶಿಯಾಗಿದ್ದರು. ಇದರ ಥಿಯೇಟರ್ ಟ್ರಸ್ಟ್ ಸ್ಥಾಪನೆಗೊಳ್ಳಲು ಕೆ. ನೆಟ್ಟಕಲ್ಲಪ್ಪ, ಬಿ.ಎಸ್. ಗರುಡಾಚಾರ್, ಎಂ.ಎಲ್.ಎಸ್. ಶಾಸ್ತ್ರೀ, ವಿಮಲಾ ರಂಗಾಚಾರ್, ಪಿ.ಐ. ಜೋಸೆಫ್, ಡಾ. ಎಂ.ಎನ್. ಶ್ರೀನಿವಾಸನ್ ಮತ್ತು ಕಿರ್ಲೋಸ್ಕರ್ ಚೀಫ್ ಇಂಜಿನಿಯರ್ ಎಸ್.ಜಿ. ರಾಮಚಂದ್ರ ಮುಂತಾದವರು ಅದರ ಹೊಸ ಸದಸ್ಯರಾಗಿದ್ದರು. ಆಗಿನ ಕಾಲದಲ್ಲಿ ಬೆಂಗಳೂರಿಗೆ ಮುನಿಸಿಪಾಲಿಟಿಯವರು ಎ.ಡಿ.ಎ. ನಾಟಕ ಸಂಸ್ಥೆಗೆ ಒಂದು ನಿವೇಶನವನ್ನು ನೀಡಿದ್ದರು. ಈ ರಂಗಮಂದಿರ ನಿರ್ಮಿತಿಯಲ್ಲಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ನೀಡಿದ ಸ್ಫೂರ್ತಿ ಮತ್ತು ಮಾರ್ಗದರ್ಶನ ಅವಿಸ್ಮರಣೀಯವಾದುದು. ಸಿ.ಕೆ. ನಾಗರಾಜರಾಯರು ಮತ್ತು ಟಿ. ಸದಾಶಿವಯ್ಯನವರ ನೇತೃತ್ವದಲ್ಲಿ ಜನ್ಮತಾಳಿದ್ದು ಮತ್ತು ಆಶು ನಾಟಕಗಳಿಂದಾಗಿ

ಕೀರ್ತಿಪಡೆದ 'ಯುನೈಟೆಡ್ ಆರ್ಟಿಸ್ಟ್ಸ್' ಕಲಾವಿಲಾಸಿ ಸಂಸ್ಥೆ (ಸ್ಥಾಪನೆ : 1936), ಬಿ.ಎಸ್. ವೆಂಕಟರಾಂ ನೇತೃತ್ವದ 'ಛಾಯಾ ಕಲಾವಿದರು' (ಸ್ಥಾಪನೆ : 1937) ಮತ್ತು ಹೆಸರಾಂತ ಸಾಹಿತಿ, ನಿರ್ಮಾಪಕ, ವ್ಯಾಯಾಮಪಟು ಪ್ರೊ. ಕೆ.ವಿ. ಅಯ್ಯರ್ ಅವರ ಅಧ್ಯಕ್ಷತೆಯಲ್ಲಿ ತಿಂಗಳಿಗೊಂದು ನಾಟಕ ಪ್ರದರ್ಶನವನ್ನು ನೀಡುತ್ತಿದ್ದು ಹಾಗೂ ಎಸ್. ವಿಜಯ, ಬಿ.ಎಸ್. ನಾರಾಯಣರಾವ್, ಜಿ.ಎಸ್. ರಾಮರಾವ್, ವಿಶ್ವನಾಥ್, ಲೋಕನಾಥ್, ಸುಬ್ರಹ್ಮಣ್ಯ ಮತ್ತು ಶಿವನೆಗೋಪಾಲಯ್ಯ ಮುಂತಾದ ಕಲಾವಿದರನ್ನೊಳಗೊಂಡಿದ್ದ 'ರವಿ ಕಲಾವಿದರು' (ಸ್ಥಾಪನೆ : 1947), 'ವಿಚಾರ ವಿಹಾರ' ಮುಂತಾದ ತಂಡಗಳು ಶ್ರೀ ರಾಮಮೂರ್ತಿಯವರ ನಕ್ಷೆ - ಕಕ್ಷೆ - ರಕ್ಷೆಯಲ್ಲಿ ಇಂಬನ್ನಿತ್ತಿದ್ದವು. ಈ ತಂಡಗಳಲ್ಲದೆ ಶ್ರೀ ರಾಮಮೂರ್ತಿಯವರು ಸ್ವಾತಂತ್ರ್ಯೋತ್ತರ ಕಾಲದಲ್ಲಿನ ಎ.ಎಸ್. ಮೂರ್ತಿಯವರ 'ಚಿತ್ರಾ ಆರ್ಟಿಸ್ಟ್ಸ್' (ಸ್ಥಾಪನೆ : 1952-53), ಡಾ. ರಾಜೀವ್ ತಾರಾನಾಥ್ ಕಾರಣಕರ್ತೃತ್ವದ 'ಅಭಿನಯ ತರಂಗ'ವಲ್ಲದೆ ಚಿತ್ರ ಕಲಾವಿದ ಎ.ಎಲ್. ಶ್ರೀನಿವಾಸಮೂರ್ತಿ, ಎಂ. ಮಹಾದೇವ್, ಪಿ.ಎ. ವೇಣುಗೋಪಾಲರೆಡ್ಡಿ, ವಿಮಲಾ ರಂಗಾಚಾರ್, ಕೃಷ್ಣಮೂರ್ತಿ, ಎ.ಎನ್. ಕಪಿನಯ್ಯ, ಗೋದಾ ರಾಮಕುಮಾರ್ ಮುಂತಾದವರಿದ್ದ 'ಕಲಾಜ್ಯೋತಿ', ಹೆಚ್.ಕೆ. ರಾಮಮೂರ್ತಿ, ಎಸ್. ಸೋಮಸುಂದರಂ ಹಾಗೂ ಬಿ.ಸಿ.ಎಸ್. ನಾರಾಯಣ ಅವರು ಒಡಗೂಡಿದ 'ಕಲಾಘೋಷಿಣಿ' ತಂಡಗಳು ಹಾಗೂ ಉಚ್ಛ್ರಾಯ ಸ್ಥಿತಿಯಲ್ಲಿ ಬಾಳಿಬೆಳಗಿದ ಕೆಲವು ವೃತ್ತಿ ನಾಟಕ ಕಂಪನಿಗಳ ಪೌರಾಣಿಕ ನಾಟಕ ಪ್ರದರ್ಶನಗಳ ರಂಗವೈಭವಯುಗವನ್ನು ರಸವತ್ತಾಗಿ ತೆರೆದಿಡಬಲ್ಲರು.

### ರಂಗಾಭಿಯಾನ

ಅನ್ವೇಷಣಾಪ್ರವೃತ್ತಿ, ಅಭಿನಯಾಸಕ್ತಿ ಹಾಗೂ ತಾಂತ್ರಿಕ ಪರಿಣತಿ ಬಗೆಗಿನ ಅತೀವ ಒಲವಿನಿಂದಾಗಿ ತಮ್ಮ ಬದುಕಿನ ವಿಚಕ್ಷಣಾಹಾದಿಯ ಪ್ರಾರಂಭಿಕ ಹಂತದಲ್ಲಿಯೇ ಶ್ರೀ ರಾಮಮೂರ್ತಿಯವರು ರಂಗಭೂಮಿಯನ್ನೇ ತಮ್ಮ ಜೀವಿತಾವಧಿಯ ಸಂಪೂರ್ಣ ಸೇವಾವೃತ್ತಿಯನ್ನಾಗಿ ಕೈಗೊಂಡು ಮುನ್ನಡೆಯಲು ಉದ್ದೇಶಿಸಿ ಮುಂದಾದರು; ಏನನ್ನಾದರೂ ಮಹತ್ತಾದುದನ್ನು ಸಾಧಿಸುವ ಮಹತ್ವಾಕಾಂಕ್ಷೆಯನ್ನೊತ್ತು ಮುನ್ನುಗ್ಗುತ್ತಿದ್ದರು. ಅವರು ತಮ್ಮ ರಂಗಪ್ರವೇಶ ಕುರಿತಂತೆ ವ್ಯಕ್ತಪಡಿಸಿರುವ ಅಭಿಪ್ರಾಯವು ಕುತೂಹಲಕಾರಿಯಾಗಿ ಮನಸೆಳೆಯುವಂತಹದು : 'ಅಂದಿನ ಪ್ರಾರಂಭಿಕ ದಿನಗಳಲ್ಲಿ ಆಕರ್ಷಣೀಯ ರಂಗಭೂಮಿಯನ್ನೇ ವೃತ್ತಿಯನ್ನಾಗಿ ಸ್ವೀಕರಿಸಿ ಪ್ರವೇಶಿಸುವವರ ಸಂಖ್ಯೆಯು ತುಸು ದುರ್ಲಭವೇ ಆಗಿದ್ದಿತು. ಅದಕ್ಕೆ ಕಾರಣವೆಂದರೆ ರಂಗಭೂಮಿಯೊಂದನ್ನೇ ನೆಚ್ಚಿಕೊಂಡು ನಿತ್ಯ ಬದುಕನ್ನು ಸಾಗಿಸಲಾಗದೆಂಬ ವಾಸ್ತವ

ಪರಿಸ್ಥಿತಿ. ಅವರು ಬೆಂಗಳೂರಿನ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ (Indian Telephone Industries, ITI)ನಲ್ಲಿ 1956ರಿಂದ 1961ರವರೆಗಿನ ಐದು ವರುಷ ಮೂರು ತಿಂಗಳು ಅವಧಿಯ ಸೇವೆ ಸಲ್ಲಿಸುತ್ತಿದ್ದ ತಮ್ಮ ಒಳ್ಳೆಯ ಹಾಗೂ ಸುಭದ್ರ ಉದ್ಯೋಗಿಯಾಗಿದ್ದಾಗಲೂ ತಮ್ಮ ಕಾರ್ಯಕ್ಷೇತ್ರದಲ್ಲಿಯೆಂತೋ ಇತರೆಡೆಗಳತ್ತಲೂ ಮನದಾಳದ ತುಡಿತವು ತೀವ್ರವಾಗಿದ್ದು ಪ್ರದರ್ಶನ ಕಲೆ ಮತ್ತು ಲಲಿತ ಕಲೆಗಳತ್ತಲೇ ಧಾವಿಸುತ್ತಿದ್ದಿತು. ಅದಕ್ಕೆ ಪೂರಕವಾಗಿಯೆಂಬಂತೆ ದೃಶ್ಯ ಶ್ರವ್ಯ ಮಾಧ್ಯಮವು ಅವರತ್ತ ತೆರೆದಿಟ್ಟುಕೊಳ್ಳಲು ಅಣಿಯಾಗಿದ್ದಿತು. ಹೀಗಾಗಿ ಅವರು ಶಾಸ್ತ್ರೀಯ ಸಾಹಿತ್ಯಸಿರಿಯತ್ತ ವಿಶೇಷ ಒಲವನ್ನು ಇರಿಸಿಕೊಂಡಿದ್ದು ರಂಗಕಾವ್ಯರಸಧಾರೆಯನ್ನು ಹರಿಸಲು ಸಿದ್ಧರಾದರು. ಅಂದು ಡಾ. ಎ.ಎಂ. ನಟೇಶ್ ಮೊದಲಿಯಾರ್ ಅವರು ಆಕಾಶವಾಣಿ ನಿರ್ದೇಶಕರಾಗಿದ್ದರು, 'ಕನ್ನಡ ನಾಡಿನ ಪರಂಪರೆ' ಎಂಬ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಇದರಲ್ಲಿ ಸಾಹಿತ್ಯ ಪರಂಪರೆ, ಸಂಗೀತ ಪರಂಪರೆ, ಕವಿ ಕಾವ್ಯ ಪರಂಪರೆ ಮತ್ತು ನಾಟಕ ಪರಂಪರೆ ಎಂಬ ವಿಭಾಗಗಳಿದ್ದವು. ಶ್ರೀ ಮಾ.ನ. ಚೌಡಪ್ಪನವರು ನಾಟಕ ಪರಂಪರೆಯ ಪ್ರೊಡ್ಯೂಸರ್ ಆಗಿದ್ದರು. ಅವರು 'ವಿಗಡ ವಿಕ್ರಮರಾಯ' ನಾಟಕದಲ್ಲಿನ ಒಂದು ಪ್ರಮುಖ ಸನ್ನಿವೇಶವನ್ನು ನಿರ್ಮಿಸಿದ್ದರು. ಅದು ಮಹಾರಾಜನ ಮಗನಿಗೆ ವಿಷಪ್ರಾಶನ ಮಾಡಿಸುವ ಸನ್ನಿವೇಶ. ಬೊಮ್ಮರಸನ ಪಾತ್ರವನ್ನು ಶ್ರೀ ರಾಮಮೂರ್ತಿಯವರು ನಿರ್ವಹಿಸಿದ್ದರು. ಮಹಾಮಾತ್ಯಶ್ರೀ ಪಾತ್ರಧಾರಿಯಾಗಿ ಶ್ರೀ ಸುಬ್ಬಯ್ಯನಾಯ್ಡು ಅವರ ಪತ್ನಿ ಲಕ್ಷ್ಮೀಬಾಯಿಯವರು ವಹಿಸಿದ್ದರು. ಸಂಗೀತ ಪರಂಪರೆ ಭಾಗದಲ್ಲಿ ಪ್ರೊಡ್ಯೂಸರ್ ಆಗಿ ಎಸ್.ಎಂ. ಪಾಟೀಲ ಇದ್ದರು. ಅವರು ಭಾವಗೀತೆಗಳನ್ನು ಪ್ರೊಡ್ಯೂಸ್ ಮಾಡಿದ್ದರು. ದ.ರಾ. ಬೇಂದ್ರೆಯವರ ಕವನವನ್ನು ಲಲಿತ ಕಲಾನಿಕೇತನದ ಕಲಾವಿದರಿಂದ ಪ್ರಸ್ತುತಪಡಿಸಲಾಯಿತು. ಶ್ರೀ ರಾಮಮೂರ್ತಿಯವರು ವಿಜಯದಶಮಿ ದಿನದಂದಿನ ಸೀಮೋಲ್ಲಂಘನವನ್ನು 'ಹೋಗೋಣ ಬಾ ಇನ್ನು ಸೀಮೆಯನು ದಾಟಿ' ಹಾಡಿಗೆ ನಿರ್ದೇಶನ ಮಾಡುವುದರೊಂದಿಗೆ ಗುಂಪುಗಾನವಾಗಿ ಹಾಡಿದರು.

### ಎನ್.ಎಸ್.ಡಿ. ಪ್ರವೇಶ

ಶ್ರೀರಂಗರು ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆ (National School of Drama, Estd : April 1959)ಯ ಸಲಹಾ ಸಮಿತಿಯ ಸದಸ್ಯನಾಗಿರುವಾಗ ಕರ್ನಾಟಕದ ರಂಗಶಿಕ್ಷಣಾರ್ಥಿಗಳಿಗೆ ಒಂದಿಲ್ಲೊಂದು ರೀತಿಯಲ್ಲಿ ವಿದ್ಯಾರ್ಥಿವೇತನ ಮತ್ತಿತರ ಪ್ರಯೋಜನಗಳನ್ನು ಹೆಚ್ಚು ಒದಗಿಸಿಕೊಟ್ಟರು. ಎನ್.ಎಸ್.ಡಿ.ಯ ಅಸಿಸ್ಟೆಂಟ್ ಡೈರೆಕ್ಟರ್ ಹಾಗೂ ಹಿಂದಿ ರಂಗಭೂಮಿಯಲ್ಲಿ ದೊಡ್ಡ ಹೆಸರಾಗಿದ್ದಂಥ

ಶ್ರೀ ನೇಮಿಚಂದ್ರ ಜೈನ್ ಅವರು ಬೆಂಗಳೂರಿನ ರಂಗಕಮ್ಮಟಕ್ಕೆ ಪಾಠಗಳನ್ನು ಬೋಧಿಸಲು ಬಂದಿದ್ದರು. ಅವರ ಪತ್ನಿ ರೇಖಾ ಜೈನ್ ಅವರು ದೆಹಲಿಯಲ್ಲಿ ಮಕ್ಕಳ ನಾಟಕಗಳನ್ನು Direct ಮಾಡುತ್ತಿದ್ದರು. ಅವರ ಮಗಳು ಕೀರ್ತಿ ಜೈನ್ ಅವರು ಎನ್.ಎಸ್.ಡಿ. ಗ್ರಾಜುಯೇಟ್ ಆಗಿದ್ದು ತದನಂತರ ಅದರ Director ಆಗಿದ್ದರು. ಶ್ರೀ ರಾಮಮೂರ್ತಿಯವರಿಗೆ ಅವರ ಪರಿಚಯ ಶ್ರೀರಂಗರ ಮುಖೇನ ಆಯಿತು. ಆಗ ಅವರು ಅಲ್ಲಿಯೇ ಶ್ರೀ ರಾಮಮೂರ್ತಿಯವರಿಂದ ಎನ್.ಎಸ್.ಡಿ. ಪ್ರವೇಶ ಬಯಸಿ ಅಪ್ಲಿಕೇಷನ್ ಹಾಕಿಸಿದರು. ಡೆಲ್ಲಿಗೆ ಹೋದ ಮೇಲೆ ಅವರ ಸೆಲ್‌ಕ್ಷನ್ ಆಗಿದೆಯೆಂಬ ಸುದ್ದಿ ಬಂತು. ಅವರ ದೂರದರ್ಶಕತ್ವದಲ್ಲಿ ಶ್ರೀ ರಾಮಮೂರ್ತಿಯವರು 1961ರಲ್ಲಿ ವ್ಯವಸ್ಥೆಗೊಂಡಿದ್ದ ರಂಗ ಶಿಕ್ಷಣ ಯೋಜನೆಯ ರೀತ್ಯ ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿ (ಬೆಂಗಳೂರು)ಯಿಂದ ವಿದ್ಯಾರ್ಥಿವೇತನ ಪಡೆದು ಎನ್.ಎಸ್.ಡಿ.ಯ ಮೂರನೆಯ ಬ್ಯಾಚ್‌ನಲ್ಲಿ ಸೇರ್ಪಡೆಗೊಳ್ಳಲು ದೆಹಲಿಗೆ ತೆರಳಿದರು. ಇದಕ್ಕೂ ಮೊದಲು ಎನ್.ಎಸ್.ಡಿ.ಯನ್ನು Asian Theatre Institute ಎಂದು ಕರೆಯಲಾಗಿದ್ದು ಅದು UNESCOದಿಂದ ಶುರುವಾಗಿದ್ದಿತು. ಅದರ ಮೊದಲ ಬ್ಯಾಚ್‌ನಲ್ಲಿ ಜಿ.ವಿ. ಶಿವಾನಂದ್ ಮತ್ತು ಎರಡನೆಯ ಬ್ಯಾಚ್‌ನಲ್ಲಿ ಬಿ.ವಿ. ಕಾರಂತ್ ಅವರಿದ್ದರು. ಶ್ರೀ ರಾಮಮೂರ್ತಿಯವರು ಪ್ರಾಸಂಗಿಕವಾಗಿ ಹೀಗೆ ನುಡಿದರು : "ಶ್ರೀರಂಗರು ನನ್ನ ಒಳ್ಳೆಯ ಸ್ನೇಹಿತರು. ನಾನು ಎನ್.ಎಸ್.ಡಿ. ಸೇರಲು ಬಹಳ ಸಹಾಯ ಮಾಡಿದವರೆಂದರೆ ಡೆಪ್ಯುಟಿ ಸೆಕ್ರೆಟರಿ ಆಫ್ ಎಜುಕೇಷನ್ ಆಗಿದ್ದ ಸಿದ್ಧಯ್ಯ ಪುರಾಣಿಕರು ಮತ್ತು ಅಸಿಸ್ಟೆಂಟ್ ಸೆಕ್ರೆಟರಿಯಾಗಿದ್ದ ರಾಜಾರಾಂ ಗಿರಿಯನ್ ಅವರು. ಅಂದಿನ ಶಿಕ್ಷಣ ಮಂತ್ರಿಗಳಾಗಿದ್ದ ಶ್ರೀ ಅಣ್ಣಾರಾವ್ ಗಣಮುಖಿಯವರ ಬೆನ್ನುಹತ್ತಿ ನನಗೆ ಸ್ಕಾಲರ್‌ಷಿಪ್ ಬರುವಂತೆ ಮಾಡಲಾಯಿತು. ಆಗ ಸುರತ್ಕಲ್ ಯೂನಿವರ್ಸಿಟಿ ರಿಜಿಸ್ಟ್ರಾರ್ ಆಗಿದ್ದ ಎಸ್.ಎಂ. ಪಾಟೀಲರು ಮಂತ್ರಿವರ್ಯರ ಪರ್ಸನಲ್ ಅಸಿಸ್ಟೆಂಟ್ ಆಗಿದ್ದರು. ನಾನು ನೆನೆಯಲೇಬೇಕಾದ ಮತ್ತೊರ್ವರೆಂದರೆ ITIನ ವಿ.ಎಂ. ಮುರುಗೇಶ್ (ದಪ್ತರಿ) ಮತ್ತು ಮೈಸೂರು ಸ್ಟೇಟ್ ಸಂಗೀತ ನಾಟಕ ಅಕಾಡೆಮಿ ಕಾರ್ಯದರ್ಶಿ ಗೋವಿಂದರಾಜು ಎಂಬುವರು. ದಪ್ತರಿಯವರು ನನ್ನನ್ನು ಬೀಳ್ಕೊಡುವಾಗ, 'ನೀನು ಈಗ ಡೆಲ್ಲಿಗೆ ಹೋಗ್ತಾ ಇದ್ದೀಯಾ, ಹೀಗೆ ಅಮೆರಿಕಕ್ಕೂ ಖಂಡಿತ ಹೋಗ್ತೀಯಾ. ದೇವರು ನಿನಗೆ ಒಳ್ಳೆಯದನ್ನು ಮಾಡಲಿ' ಎಂದರು. ಅವರ ಶುಭಾಶಯ ನಿಜವಾಯಿತು. ಇದು ನಾನು ಎನ್.ಎಸ್.ಡಿ.ಗೆ ಅಂಟಿಕೊಂಡ ಬಗೆ. ಒಂದು ವಿಧದಲ್ಲಿ ಎನ್.ಎಸ್.ಡಿ.ಯಿಂದ ಅತಿ ಹೆಚ್ಚು ಗ್ರಾಜುಯೇಟ್ಸ್ ಬಂದಿರುವುದು ಕರ್ನಾಟಕದಿಂದ ಎಂಬುದು ಹೆಮ್ಮೆಯ ವಿಷಯ. ಮೈಸೂರು ಸ್ಟೇಟ್ ಸಂಗೀತ ನಾಟಕ ಅಕಾಡೆಮಿಯಿಂದ ಸ್ಕಾಲರ್‌ಷಿಪ್

ಮಂಜೂರಾಯಿತು. ಆಮೇಲೆ ITI ಜನರಲ್ ಮ್ಯಾನೇಜರ್ ಆಗಿದ್ದ ಶ್ರೀ ಎಸ್.ವಿ. ಶೆಣೈಯವರು ಟಾಡ್ ಸಾಹೇಬರ ಸಲಹೆ ಮೇರೆಗೆ 2 ವರ್ಷದ Study Leave ಕೊಟ್ಟರು." ಅವರು ತಮ್ಮ ITI Colleagues ಅನ್ನು ನೆನಪು ಮಾಡಿಕೊಳ್ಳುತ್ತ ಎ.ಎಸ್. ಶ್ರೀನಿವಾಸನ್ ಅವರನ್ನು ನೆನೆದರು. ಬೆಂಗಳೂರಿನ ಮೋತಿಮಹಲ್ ಮಾಲೀಕ ರಾಜ್ಯಸಭೆಯ ಸದಸ್ಯ ಶ್ರೀರಾಮರೆಡ್ಡಿಯವರು ಸಹಾಯ ಮಾಡಿದ್ದರು. ಮುಂದುವರೆದು ಅವರು 'ಎನ್.ಎಸ್.ಡಿ. ಮೊದಲನೆಯ ವರ್ಷದಲ್ಲಿ ಓದುತ್ತಿದ್ದಾಗ, 'ರಂಗಭೂಮಿಯನ್ನು ವೃತ್ತಿಯನ್ನಾಗಿ ಸ್ವೀಕರಿಸಿಕೊಂಡು ಮುಂದುವರಿಯಬೇಕೆಂದಿದ್ದೇನೆ. ಈ ಪತ್ರವನ್ನು ನನ್ನ ರಾಜೀನಾಮೆಯೆಂದು ಪರಿಗಣಿಸಿ ನನ್ನನ್ನು ಐ.ಟಿ.ಐ.ನಿಂದ ಬಿಡುಗಡೆಗೊಳಿಸಿಕೊಡಬೇಕೆಂದು ಕೋರುತ್ತೇನೆ ಎಂದು ಪತ್ರ ಬರೆದೆ. ಅಂದಿನಿಂದ ಐ.ಟಿ.ಐ.ಗೂ ನನಗೂ ಅಫೀಸಿಯಲ್ ಆಗಿ ಸಂಬಂಧ ಕಡಿದುಹೋಯಿತು' ಎನ್ನುತ್ತಾ ವೃತ್ತಿಯನ್ನು ತೊರೆದ ತಮ್ಮ ರಂಗಸೇವಾಕಾಂಕ್ಷೆಗಾಗಿನ ದೃಢ ಅರ್ಪಣಾ ಹಾಗೂ ನಿಶ್ಚಯಭಾವವನ್ನು ಪ್ರಕಟಿಸಿದರು.

ಪ್ರೊ. ಇಬ್ರಾಹಿಂ ಅಲ್ಕಾಜಿಯವರು ಎನ್.ಎಸ್.ಡಿ.ಯ ಮೊದಲ ನಿರ್ದೇಶಕರಾಗಿದ್ದು ತಮ್ಮ ನಿಷ್ಣಾತ ರಂಗತಜ್ಞತೆ ಮತ್ತು ಆಡಳಿತಾತ್ಮಕ ಗುಣಲಕ್ಷಣಗಳಿಂದ ಬಹು ಪ್ರಸಿದ್ಧರಾದರು. ಪ್ರೊ. ಅಲ್ಕಾಜಿಯವರು 15 ವರ್ಷಗಳ ಕಾಲ (1962-77) ಶಿಸ್ತಿನ ಸಿಪಾಯಿಯಾಗಿ ಸತತವಾಗಿ ದುಡಿದು ಎನ್.ಎಸ್.ಡಿ. ಸಂಸ್ಥೆಯನ್ನು ಉನ್ನತ ಅಂತಾರಾಷ್ಟ್ರೀಯ ಮಟ್ಟಕ್ಕೇರಿಸಿದರು. ಅವರು ಲಂಡನ್ನಿನ ದಿ ರಾಯಲ್ ಅಕಾಡೆಮಿ ಆಫ್ ಡ್ರಾಮಾಟಿಕ್ ಆರ್ಟ್ಸ್ (The Royal Academy of Dramatic Arts)ನ ಪದವೀಧರರು. ಅವರು ವಿಶೇಷವಾಗಿ ಯುವಜನರನ್ನು ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನಾಗಿ ಸಂಸ್ಥೆಗೆ ತೆಗೆದುಕೊಳ್ಳುತ್ತಿದ್ದರು. ಪ್ರೊ. ಅಲ್ಕಾಜಿಯವರೊಡನೆಯ ಸಖ್ಯ - ಸಂಪರ್ಕವು ಶ್ರೀ ರಾಮಮೂರ್ತಿಯವರಲ್ಲಿ ಅದಾಗಲೇ ಅಂಕುರಿಸಿ ರೂಢಿಸಿಕೊಂಡಿದ್ದ ಶಿಸ್ತು, ಶ್ರದ್ಧೆ, ಸಂಯಮ ಮುಂತಾದ ಗುಣವಿಶೇಷಗಳನ್ನು ವೃದ್ಧಿಗೊಳಿಸಿತು. ಎನ್.ಎಸ್.ಡಿ.ಯಲ್ಲಿ ಪ್ರೊ. ಅಲ್ಕಾಜಿಯವರು ಮೊಟ್ಟ ಮೊದಲ ಬಾರಿಗೆ ನಿರ್ದೇಶನಗೈದುದು ಮೋಹನ್ ರಾಕೇಶ್‌ರ 'ಆಷಾಢ್ ಕಾ ಏಕ್‌ದಿನ್' ನಾಟಕವನ್ನು. ಇದಕ್ಕೆ ಲೈಟಿಂಗ್ ಮಾಡಿದವರು ಪ್ರೊ. ಜಿ.ಎನ್. ದಾಸಗುಪ್ತಾ ಅವರು. ಅವರಿಗೆ ಶ್ರೀ ರಾಮಮೂರ್ತಿಯವರು ಮತ್ತು ಅವರ ಹೈದರಾಬಾದ್ ಸ್ನೇಹಿತ ಮತ್ತು ಸಹಪಾಠಿ ಕೆ.ಎಸ್. ನಾರಾಯಣಸ್ವಾಮಿ (ಗೋಪಾಲ)ಯವರು ಲೈಟಿಂಗ್ ಅಸಿಸ್ಟೆಂಟ್‌ಗಳಾಗಿ ಕೆಲಸ ಮಾಡುತ್ತಿದ್ದರು. ಒಂದು ದಿವಸ ಒಬ್ಬರು ಇನ್ನೊಂದು ದಿವಸ ಇನ್ನೊಬ್ಬರು ಹೀಗೆ ಕಾರ್ಯನಿರ್ವಹಿಸುತ್ತಿದ್ದರು. ಅಲ್ಲದೆ ಶ್ರೀ ರಾಮಮೂರ್ತಿಯವರು

ಅನುನಾಸಿಕನ ಪಾತ್ರವನ್ನೂ ನಿರ್ವಹಿಸುತ್ತಿದ್ದರು. ಅಲ್ಕಾಜಿಯವರು ಆಗ ಪರ್ಮನೆಂಟಾಗಿ ದೆಹಲಿಗೆ ಬಂದು ನೆಲೆಸಿದರು. ಅವರು ಬಾಂಬೆಯಲ್ಲಿ 'Theatre Unit' ಅಂತ ಹಿಂದಿ ಮತ್ತು ಇಂಗ್ಲಿಷ್ ನಾಟಕಗಳನ್ನು ನಡೆಸುತ್ತಿದ್ದರು. ಅಲ್ಲದೆ 'Theatre Bulletin' ಎಂಬ ಸಣ್ಣ ಮಾಸಿಕ ಪತ್ರಿಕೆಯನ್ನು ಹೊರತರುತ್ತಿದ್ದರು. ಅವರು ತಮ್ಮ ಮನೆಯ ಆರನೇ ಮಹಡಿಯ ಸೂರಿನ ಮೇಲೆ 'ಮೇಘದೂತ್' ಅಂತ Open Air Theatre ಮಾಡಿಕೊಂಡಿದ್ದರು. ಅವರು ಎನ್.ಎಸ್.ಡಿ. ನಿರ್ದೇಶಕರಾಗಿ ಬಂದಾಗ (ಜುಲೈ 1962) ಕೈಲಾಶ್ ಕಾಲೋನಿಯಲ್ಲಿದ್ದ ಒಂದು ಸಣ್ಣ ಬಂಗಲೆಯಲ್ಲಿನ ಅಂತಸ್ತಿನಲ್ಲಿದ್ದರು. ಒಮ್ಮೆ ಅವರು ಸಹೋದ್ಯೋಗಿಗಳೊಂದಿಗೆ ಇತರೆ ಅಧ್ಯಾಪಕರು ಅಧ್ಯಾಪಕಿಯರ ರಜೆಯನ್ನು ಮೊಟಕುಗೊಳಿಸಿ ತಮ್ಮ ಜೊತೆಯಲ್ಲಿ ತೊಡಗಿಸಿಕೊಂಡು ಸ್ವತಃ ಇಡೀ ಕಟ್ಟಡವನ್ನು ಕ್ಲೀನ್ ಮಾಡುತ್ತಿದ್ದರು. ಅಲ್ಲಿಗೆ ತೆರಳಿದ್ದ ರಾಮಮೂರ್ತಿಯವರು ತಮ್ಮ ಪರಿಚಯವನ್ನು ತಾವೇ ಮಾಡಿಕೊಂಡು ಇತರರೊಡಗೂಡಿ ಕೈ ಜೋಡಿಸಿ ಸ್ವಚ್ಛಗೊಳಿಸಲು ಮುಂದಾದರು. ಅಲ್ಲಿಗೆ ಬಂದ ಓಂ ಶಿವಪುರಿ ಮತ್ತಿತರರು ಈ ಕೆಲಸದಲ್ಲಿ ನೆರವಾದರು.

ಶ್ರೀ ರಾಮಮೂರ್ತಿಯವರು ಎನ್.ಎಸ್.ಡಿ.ಗೆ. ಸೇರಿದ ಎರಡು ತಿಂಗಳಾದ ಮೇಲೆ ದೆಹಲಿ ಸುತ್ತಾಡಬೇಕಾದರೆ ಕಾನಾಟ್‌ಪ್ಲೇಸ್‌ನಲ್ಲಿ ಟೀಹೌಸ್ ಅಂತ ಒಂದು ಸ್ಥಳವಿತ್ತು. ಅಲ್ಲಿ ಸೇರುತ್ತಿದ್ದ ದೊಡ್ಡ ದೊಡ್ಡ ಹಿಂದಿ, ಪಂಜಾಬಿ ಕಲಾವಿದರು ಮತ್ತು ಲೇಖಕರ ಪರಿಚಯವಾಯಿತು. ಹಿಂದಿಯ ಹೆಸರಾಂತ ಲೇಖಕರಾದ ವಿಷ್ಣು ಪ್ರಭಾಕರ್, ಲಲಿತ ಸೆಹೆಗಾಲ್, ಲೆನಿನ್ ಪಂತ್, ಮೋಹನ ರಾಕೇಶ್ ಮತ್ತು ಪಂಜಾಬಿ ಪ್ರಸಿದ್ಧ ನಾಟಕಕಾರ ಬಲವಂತ್ ಗಾರ್ಗಿ ಮುಂತಾದ ಸುಮಾರು ಜನರ ಪರಿಚಯವಾಯಿತು.

ಮೊದಲನೆಯ ವರ್ಷದ ಎನ್.ಎಸ್.ಡಿ. ವಿದ್ಯಾರ್ಥಿಗಳಿಂದ ಎರಡನೆಯ ನಾಟಕ ಹೆನ್ರಿಕ್ ಇಬ್ಸೆನ್‌ನ 'ಎ ಡಾಲ್ಸ್‌ಹೌಸ್'ನ ಹಿಂದಿ ರೂಪಾಂತರವನ್ನು ಪ್ರೊ. ಅಲ್ಕಾಜಿಯವರ ನಿರ್ದೇಶನದಲ್ಲಿ ಪ್ರದರ್ಶಿಸಲಾಯಿತು. ನಿರ್ದೇಶಕ, ನಟ ಶಂಭುಮಿತ್ರರ 'ಬಹುರೂಪಿ' ತಂಡದಿಂದ ಬೆಂಗಾಲಿಯ 'ಪುತುಲ್ ಖೇಲಾ'ವಾಗಿ ಪ್ರದರ್ಶನದೊಂದಿಗೆ ಶ್ರೀ ರಾಮಮೂರ್ತಿಯವರು ನೇಪಥ್ಯ ಸಹಾಯಕರಾಗಿ ಕಾರ್ಯನಿರ್ವಹಿಸಿದರು. ಪ್ರೊ. ಶಾಂತಾಗಾಂಧೀಯವರು ಭಾಸ ಮಹಾಕವಿಯ 'ಮಧ್ಯಮ ವ್ಯಾಯೋಗ'ವನ್ನು ನಿರ್ದೇಶಿಸುತ್ತಿರುವಲ್ಲಿ ವಿ. ರಾಮಮೂರ್ತಿಯವರು ಲೈಟಿಂಗ್, ಓಂ ಶಿವಪುರಿಯವರು ರಂಗ ಉಸ್ತುವಾರಿ ಮತ್ತು ಗೋವರ್ಧನ ಪಂಚಾಲ ಅವರು ರಂಗವಿನ್ಯಾಸವನ್ನು ನೋಡಿಕೊಳ್ಳುತ್ತಿದ್ದರು. ಈ ಎರಡೂ ನಾಟಕಗಳ ರಿಹರ್ಸಲ್‌ನ್ನು ಒಟ್ಟಿಗೆ ಮಾಡುತ್ತಿದ್ದರು.

ಅಲ್ಲದೇ ಶ್ರೀ ರಾಮಮೂರ್ತಿಯವರು ಎನ್.ಎಸ್.ಡಿ.ಯ ಮೊದಲನೆಯ ವರ್ಷದಲ್ಲಿದ್ದಾಗ ವಿಶ್ವಕವಿ ರವೀಂದ್ರನಾಥ ಟ್ಯಾಗೋರ್‌ರ ಜನ್ಮಶತಮಾನೋತ್ಸವದ

ಸಂದರ್ಭದಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿಯು ಕವಿವರ್ಯರ ನಾಟಕ ರಚನೆಗಳ ಪ್ರದರ್ಶನಗಳ ಉತ್ಸವವನ್ನು ಹಮ್ಮಿಕೊಂಡಿದ್ದು ಅದರಲ್ಲಿ ಕಲ್ಕತ್ತದಿಂದ ಬಂಗಾಲಿ ನಾಟಕಗಳ ತಂಡ 'ಬಹುರೂಪಿ'ಯಿಂದ 'ಬಿಸರ್ಜನ್' ನಾಟಕವು ಪ್ರದರ್ಶನಗೊಂಡಿತು. ನಿರ್ದೇಶಕ ಶಂಭು ಮಿತ್ರರ ಮಡದಿ ಶ್ರೀಮತಿ ತೃಪ್ತಿ ಮತ್ತು ಅಮರ್ ಗಂಗೂಲಿ ಮುಂತಾದ ನಟ ನಟಿಯರು ಪಾತ್ರವಹಿಸಿದ್ದರು. ಭೋಪಾಲ್‌ನಿಂದ Little Ballet Troupe ಬಂದಿತ್ತು. ಅದು 'ಕ್ಷತಿಜೋ ಪಾಷಾಣಿ' (Angry Stone)ದ ಬ್ಯಾಲೆಯನ್ನು ಪ್ರದರ್ಶಿಸಿತು (ನಿರ್ದೇಶನ : ಪ್ರಭಾತ್ ಗಂಗೂಲಿ). ಮದರಾಸ್‌ನಿಂದ ರುಕ್ಮಿಣಿದೇವಿ ಅರುಂಡೇಲ್ ಅವರ ನಿರ್ದೇಶನದಲ್ಲಿ 'ಶ್ಯಾಮ' ಎಂಬ ಟ್ಯಾಗೋರ್‌ರವರ ಕವನದ ನೃತ್ಯನಾಟಕವಾಯಿತು. ಆ ಉತ್ಸವದಲ್ಲಿ ನೇಪಥ್ಯ ಕೆಲಸ ಮಾಡಲು ಎನ್.ಎಸ್.ಡಿ. ವಿದ್ಯಾರ್ಥಿಗಳನ್ನು ನೇಮಿಸಿದ್ದರು. ಅದರಲ್ಲಿ ವಿ. ರಾಮಮೂರ್ತಿಯವರೂ ಒಬ್ಬರಾಗಿದ್ದರು.

ಪ್ರೊ. ಅಲ್ಕಾಜಿಯವರು ಪಾಶ್ಚಾತ್ಯ ರಂಗಭೂಮಿ (Western Drama ಮತ್ತು Direction), ಪ್ರೊ. ನೇಮಿಚಂದ್ರ ಜೈನ್ ಅವರು ಪೌರ್ವಾತ್ಯ ರಂಗಭೂಮಿ (Eastern Drama), ಪ್ರೊ. ಶೀಲಾ ಭಾಟಿಯಾ ಅವರು 'ಅಭಿನಯ ಮತ್ತು ಅಭಿನಯ ಪದ್ಧತಿಗಳು.' ಪ್ರೊ. ಶಾಂತಾ ಗಾಂಧೀಯವರು ಸಂಸ್ಕೃತ ರಂಗಭೂಮಿ, ಪ್ರೊ. ಗೋವರ್ಧನ್ ಎಚ್. ಪಂಚಾಲ್ ಅವರು 'ರಂಗಭೂಮಿಯ ವಾಸ್ತುಶಿಲ್ಪ ವಿನ್ಯಾಸದ ಚರಿತ್ರೆ' (History of Theatre Architecture), ಪ್ರೊ. ದೇವ ಮಹಾಪಾತ್ರ ಅವರು ಸ್ಟೇಜ್ ಕ್ರಾಫ್ಟ್ (Stage Craft) ಪ್ರೊ. ಇಂದುಭೂಷಣ್ ಘೋಷ್ ಅವರು 'ಪ್ರಸಾಧನ'. ಪ್ರೊ. ಕೋಕಿಲಾ ಮವಾನಿ ಅವರು 'ವಸ್ತ್ರವಿನ್ಯಾಸ', ಜಿ.ಎನ್. ದಾಸಗುಪ್ತಾ ಅವರು 'ಲೈಟಿಂಗ್' ಮತ್ತು ಅಧ್ಯಾಪಕರಾದ ತಸ್ರೀಮ್‌ಲಾಲ್ ಶರ್ಮಾ ಹಾಗೂ ಅವರ ಸಹಾಯಕರಾಗಿದ್ದ ದಿಲೀಪ್‌ಚಂದ್ ಅವರು ಕಾರ್ಪೆಂಟರಿ ಬಗ್ಗೆ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಪಂಚಾನಂದ ಪಾಠಕ್ ಅವರು ಸಂಗೀತ, ಮೌನಾಭಿನಯ ಮತ್ತು ಚಲನವಲನ ವಿಷಯ ಕುರಿತಂತೆ ಬೋಧನೆಗೈಯುತ್ತಿದ್ದರು.

ಗೋವರ್ಧನ್ ಪಂಚಾಲ ಅವರು 'ಕೂತ್ತಂಬಳಂ' ಇತ್ಯಾದಿ ಪಾರಂಪರಿಕ ಭಾರತೀಯ ರಂಗಮಂದಿರಗಳ ಬಗ್ಗೆ ವಿವಿಧ ಸ್ಥಳಗಳಿಗೆ ಪ್ರವಾಸ ಕೈಗೊಂಡು ಬಹಳ ಆಳವಾದ ಅಧ್ಯಯನ ಮಾಡಿ ಚಿತ್ರಗಳ ಸಹಿತ ಪುಸ್ತಕಗಳನ್ನು ಬರೆದಿದ್ದಾರೆ. ಪ್ರೊ. ಶೀಲಾ ಭಾಟಿಯಾ ಅವರ ಯಜಮಾನರಾದ ಹಾಲಿವತ್ಸಾ (Halivatsa) ಅವರು ಪ್ರಸಿದ್ಧ Delhi Arts Theatreನ ಸದಸ್ಯರಾಗಿದ್ದರು. ಮುಂದೆ ಅದರ ಅಧ್ಯಕ್ಷರಾಗಿ ಭಾರತದ ಪ್ರಧಾನಮಂತ್ರಿಯಾದ ಐ.ಕೆ. ಗುಜ್ರಾಲ್ ಇದ್ದರು. ಹಾಲಿವತ್ಸಾ ಅವರು ಸೋವಿಯತ್

ದೇಶ (United Soviet Social Republic) ಹೊರತರುತ್ತಿದ್ದ 'Soviet Land' ಉರ್ದು ಭಾಷಾ ಮಾಸಪತ್ರಿಕೆಯ ಸಂಪಾದಕರಾಗಿದ್ದರು. ಅಲ್ಲದೆ ಅವರು ಒಳ್ಳೆಯ ನಟ ಮತ್ತು ಗಾಯಕರಾಗಿದ್ದರು. ಶ್ರೀ ರಾಮಮೂರ್ತಿಯವರು ಮೇಕಪ್ ಮಾಡುತ್ತಿದ್ದರು.

ಮೋಲಿಯೇರ್‌ನ ಫ್ರೆಂಚ್ ನಾಟಕ 'Skapine' (Scorpion) ನಾಟಕವು ಉರ್ದುವಿನಲ್ಲಿ 'ಬಿಛ್ಛು' ಎಂದಾಗಿತ್ತು. ಇದನ್ನು ಎನ್.ಎಸ್.ಡಿ. ಮೊದಲನೆಯ ವರ್ಷದ ವಿದ್ಯಾರ್ಥಿಗಳು ಪ್ರದರ್ಶಿಸಿದರು. ಇದು ಪ್ರೊ. ಅಲ್ಕಾಜಿಯವರ ನಿರ್ದೇಶನದ ಇನ್ನೊಂದು ಅದ್ಭುತ ಪ್ರೊಡಕ್ಷನ್. ಇದಕ್ಕೂ ಜಿ.ಎನ್. ದಾಸಗುಪ್ತಾ ಅವರು ಲೈಟಿಂಗ್ ಡಿಸೈನ್ ಮಾಡಿದ್ದರು. ಇಬ್ಸೆನ್‌ನ 'An Enemy of the People' ಕೃತಿಯು ಶಂಭುಮಿತ್ರರಿಂದ 'ದಶಚಕ್ರ'ವಾಗಿ ಮೂಡಿಬಂದು ಪ್ರದರ್ಶನಗೊಳ್ಳಲು ಶ್ರೀ ರಾಮಮೂರ್ತಿಯವರು ಎನ್.ಎಸ್.ಡಿ. ವಿದ್ಯಾರ್ಥಿಯಾಗಿ ನೆರವಾಗಿದ್ದರು. ಅವರು ಎನ್.ಎಸ್.ಡಿ.ಯ ಮೂರನೆಯ ವರ್ಷ ವಿದ್ಯಾರ್ಥಿಯಾಗಿದ್ದಾಗ ರೀಡ್ ಗಿಲ್ಬರ್ಟ್ (Reid Gilbert) ಎಂಬುವರು ಪ್ರೊ. ಅಲ್ಕಾಜಿಯವರ ಮಾರ್ಗದರ್ಶನದಲ್ಲಿ Indian Theatre ಥಿಯೇಟರ್ ಕುರಿತು ಪಿಹೆಚ್.ಡಿ. ಮಾಡಲು ಇಂಡಿಯಾಕ್ಕೆ ಬಂದಿದ್ದರು. ಗಿಲ್ಬರ್ಟ್ ಅವರು ಫ್ರಾನ್ಸ್ ದೇಶದ ಮೌನಾಭಿನಯಪಟುವಾಗಿದ್ದ Attainne Decroux ಅವರಲ್ಲಿ ಮೌನಾಭಿನಯವನ್ನು ಕಲಿತಿದ್ದರು. ಆದ್ದರಿಂದ ಅವರು ಎನ್.ಎಸ್.ಡಿ. ವಿದ್ಯಾರ್ಥಿಗಳಿಗೆ ಮೌನಾಭಿನಯದಲ್ಲಿ ತರಬೇತಿ ನೀಡಿದರು. ಅವರುಗಳಲ್ಲಿ ಶ್ರೀ ರಾಮಮೂರ್ತಿಯವರೂ ಒಬ್ಬರಾಗಿದ್ದರು. ಇದಕ್ಕೂ ಮುನ್ನ ಅವರು ಹಲವಾರು ಪ್ರದರ್ಶನಗಳನ್ನು ನೋಡುತ್ತಿದ್ದು ಎಂ.ಎಸ್. ಸತ್ಯು ಅವರ ಸ್ನೇಹಿತರಾದ ಹೈದರಾಬಾದ್‌ನ Irshad Panjathan ಅವರ ಮೌನಾಭಿನಯ ಪ್ರದರ್ಶನವನ್ನು ನೋಡಿದ್ದರು.

ವಿ. ರಾಮಮೂರ್ತಿಯವರು ಒಂದನೇ ವರುಷದ ಎನ್.ಎಸ್.ಡಿ. ವಿದ್ಯಾರ್ಥಿಯಾಗಿದ್ದಾಗ ಡೆಲ್ಲಿಗೆ ಶ್ರೀರಂಗರು ಬಂದಿದ್ದು, "ನ್ಯೂಯಾರ್ಕ್ ನಗರದಲ್ಲಿ Asia Foundation ಅಂತ ಒಂದು ಸಂಸ್ಥೆಯಿದೆ. ಆ ಸಂಸ್ಥೆಯ ಕಾರ್ಯದರ್ಶಿ Francisca Gobbi ಎಂಬುವರು. ಆ ಸಂಸ್ಥೆಯು ಪುಸ್ತಕಗಳು ಇತ್ಯಾದಿ ವಸ್ತುಗಳನ್ನು ದಾನವಾಗಿ ಕೊಡುತ್ತದೆ. ಅದಕ್ಕೆ ನೀನೊಂದು ಪತ್ರ ಬರೆಯುತ್ತೀಯಾ? ಎಂದು ಕೇಳಿದರು. ಅದರಂತೆ ನಾನು ಅದರ ಕಾರ್ಯದರ್ಶಿಯವರಿಗೆ ಪತ್ರ ಬರೆದೆ. ಆಗತಾನೇ ನಾನು ಎನ್.ಎಸ್.ಡಿ. ಸ್ಟೂಡೆಂಟ್ ಆಗಿ ಸೇರಿಕೊಂಡಿದ್ದೆನು. ಅದರಿಂದ 'ನನಗೆ ರಂಗಭೂಮಿಗೆ ಸಂಬಂಧಪಟ್ಟಂತಹ ಪುಸ್ತಕಗಳನ್ನು ಅನುದಾನವಾಗಿ ಕಳುಹಿಸಿಕೊಡಿ. ಒಂದು ವೇಳೆ ವ್ಯಕ್ತಿಗಳಿಗೆ ಅನುದಾನ ಕೊಡಲಾಗದಿದ್ದರೆ ಮೈಸೂರು ಸ್ಟೇಟ್ ನಾಟ್ಯಸಂಘ ಎಂಬ

ಒಂದು ಸಂಸ್ಥೆ ಬೆಂಗಳೂರಿನಲ್ಲಿದೆ. ಅದಕ್ಕೆ ಕಳುಹಿಸಿಕೊಡಿ' ಎಂದು ಬರೆದೆ. Francisca Gobbi ಅವರು, 'ನಾವು ವ್ಯಕ್ತಿಗಳಿಗೆ ಅನುದಾನವನ್ನು ಕೊಡುವುದಿಲ್ಲ. ಬದಲಾಗಿ ನೀವು ಹೇಳಿದಂತೆ ಮೈಸೂರು ಸ್ಟೇಟ್ ನಾಟ್ಯಸಂಘಕ್ಕೆ ಈ ಪುಸ್ತಕಗಳನ್ನು ಕಳುಹಿಸಿಕೊಡುತ್ತೇವೆ' ಎಂದು ಉತ್ತರ ಪತ್ರ ಬರೆದು ಅವುಗಳನ್ನು ಕಳುಹಿಸಿಕೊಟ್ಟರು. ಅದನ್ನು ಬಿಡಿಸಿಕೊಂಡವರು ಎಸ್.ಜಿ. ರಾಮಚಂದ್ರ ಅವರು. ಆ ಪುಸ್ತಕಗಳನ್ನು ಇಡುವುದಕ್ಕೆ ವಿಮಲಾ ರಂಗಾಚಾರ್ ಅವರು ಒಂದು ಮರದ ಅಲ್ಮಿರಾವನ್ನು ನಾಟ್ಯಸಂಘಕ್ಕೆ ಅನುದಾನವಾಗಿ ಕೊಟ್ಟರು. ಆಗಾಗಿ ನಾಟ್ಯಸಂಘದಲ್ಲಿ ಒಂದು ಉತ್ತಮ ಪುಸ್ತಕ ಭಂಡಾರ ಸ್ಥಾಪಿತವಾಯಿತು" ಎಂದರು.

**ಮಾರ್ಚ್ 27 ವಿಶ್ವರಂಗಭೂಮಿ ದಿನ :** 1961-62ರಲ್ಲಿ ಪ್ಯಾರಿಸ್ ಹೆಡ್‌ಕ್ವಾರ್ಟರ್ಸ್ ಆಗಿದ್ದ UNESCOವಿನ International Theatre Institute (ITI)ನಿಂದ ಎನ್.ಎಸ್.ಡಿ.ಗೆ. ಒಂದು ಜವಾಬ್ದಾರಿ ಕೆಲಸ ಬಂತು. ತತ್ಪರಿಣಾಮವೆಂದರೆ ವಿಶ್ವ ರಂಗಭೂಮಿ ದಿನಾಚರಣೆಗೆ ಭಾರತ ನೀಡಿದ ಕೊಡುಗೆಯೆಂದರೆ ಪ್ರೊ. ಅಲ್ಕಾಜಿಯವರು ನಿರ್ದೇಶಿಸಿದ ಎರಡನೇ ವರ್ಷದ ಎನ್.ಎಸ್.ಡಿ. ವಿದ್ಯಾರ್ಥಿಗಳು ಪ್ರದರ್ಶಿಸಿದ ಗ್ರೀಕ್ ನಾಟಕಕಾರ ಸೋಫೋಕ್ಲೆಸ್(496-406 B.C.)ನ ಹಿಂದಿ ಕೃತಿ 'ಅಂಟಿಗೊನೆ'. ಅದನ್ನು ಇಂಗ್ಲಿಷ್‌ನಲ್ಲಿ ಬರೆದವರು ಫ್ರೆಂಚ್ ನಾಟಕಕಾರ ಜ್ಞಾ ಆನೂವೀ (Jean-Marie-Lucien Pierre Anouilh) 'ಅಂಟಿಗೊನೆ' (1944) ಎಂದು. ಮಾರ್ಚ್ 27, 1963ರಂದು ಅದರ ಮೊದಲ ಪ್ರೊಡಕ್ಷನ್ ಆಯ್ತು. ಅದೊಂದು ಅದ್ಭುತವಾದ ಪ್ರೊಡಕ್ಷನ್. ಅದರ ಮ್ಯೂಸಿಕ್ ಮತ್ತು ಸೌಂಡ್ ಎಫೆಕ್ಟ್‌ಗಳನ್ನು ಕ್ರಮವಾಗಿ ಶ್ರೀ ಪಂಚಾನಂದ್ ಪಾಠಕ್ ಮತ್ತು ಶ್ರೀ ರಾಮಮೂರ್ತಿಯವರು ನೀಡಿದ್ದರು. ಜಿ.ಎನ್. ದಾಸಗುಪ್ತಾ ಅವರು Lighting ಮಾಡಿದ್ದರು. ಅಲ್ಲದೆ ಶ್ರೀ ರಾಮಮೂರ್ತಿಯವರು ಪಂಚಾನಂದ ಪಾಠಕ್ ಅವರಿಗೆ ಅಸಿಸ್ಟೆಂಟ್ ಆಗಿ ಕೆಲಸ ಮಾಡಿದ್ದರು. ಈ ಪ್ರದರ್ಶನದ ರಿಹರ್ಸಲ್ ನೋಡಲು ಶ್ರೀಮತಿ ಇಂದಿರಾಗಾಂಧಿಯವರು ದೇಶದ ಪ್ರಧಾನಿಯಾಗುವ ಮುಂಚೆ ಬಂದು ಹೋಗಿದ್ದರು ಹಾಗೂ ಪ್ರದರ್ಶನವನ್ನು ವೀಕ್ಷಿಸಲು ಪಂಡಿತ್ ಜವಾಹರಲಾಲ್ ನೆಹರು ಅವರೂ ಬಂದಿದ್ದರು.

ಅವರ ಮಡದಿ ಶ್ರೀಮತಿ ಜಾಯ್ ಮೈಕೆಲ್ ಅವರು 'ಯಾತ್ರಿಕ್' (1965) ರಂಗತಂಡದ ನಿರ್ದೇಶಕಿಯಾಗಿದ್ದರು. ಇದು ಇಂಗ್ಲಿಷ್ ಮತ್ತು ಹಿಂದಿ ನಾಟಕಗಳನ್ನಾಡುತ್ತಿತ್ತು. ಅವರ ಯಜಮಾನರಾಗಿದ್ದಂಥ Col. Hugh Michael ಅವರ ಸಹಾಯದಿಂದ ನಾಟಕ ನಿರ್ಮಾಣ ಮತ್ತು ನಿರ್ದೇಶನ ಮಾಡುತ್ತಿದ್ದರು. ಅವರು ಅಂಟನ್ ಚೆಕೊವ್‌ನ 'Seagull' ನಾಟಕವನ್ನು ನಿರ್ದೇಶಿಸಿದ್ದರು. ಅಲ್ಲದೆ ಜಾಯ್ ಮೈಕೆಲ್

ಅವರು ನಿರ್ದೇಶಿಸಿದ 'Fantastics' ನಾಟಕಕ್ಕೆ ಶ್ರೀ ರಾಮಮೂರ್ತಿಯವರು ಸೆಟ್‌ಡಿಸೈನ್ ಮತ್ತು ಲೈಟಿಂಗ್ ಮಾಡಿದ್ದರು. ಅದಕ್ಕೆ Folding Stepladder Patternನಲ್ಲಿ ಸೆಟ್ ಡಿಸೈನ್ ಮತ್ತು ಅದಕ್ಕೆ ತಕ್ಕನಾಗಿ ಲೈಟಿಂಗ್ ಡಿಸೈನ್ ಆಗಿತ್ತು. ದೆಹಲಿ ಮತ್ತು ಲಕ್ನೋದಲ್ಲಿ ಅದರ ಪ್ರದರ್ಶನಗಳಾದವು. ಜಾಯ್ ಮೈಕೆಲ್ ಅವರು ನಿರ್ದೇಶಿಸಿದ ಚಾರ್ಲ್ಸ್ ಡಿಕೆನ್ಸ್‌ನ ಕಾದಂಬರಿಯಾದಂಥ 'Oliver Twist' ಆಧಾರಿತ ಸಂಗೀತ ನಾಟಕ ರೂಪಾಂತರವು ಯುರೋಪ್ ಮತ್ತು ಅಮೆರಿಕದಲ್ಲಿ ನೂರಾರು ಪ್ರದರ್ಶನಗಳನ್ನು ಕಂಡಿತು. ಅದಕ್ಕೆ 'Oliver' ಎಂದು ಹೆಸರಿಡಲಾಗಿತ್ತು. ಈ ನಾಟಕವನ್ನು 'ಯಾತ್ರಿಕ್' ತಂಡಕ್ಕಾಗಿ ಡೆಲ್ಲಿಯಲ್ಲಿರುವ St. Xavier ಸ್ಕೂಲಿನ ವಿದ್ಯಾರ್ಥಿಗಳು ಮತ್ತು ಅವರ ಜೊತೆಗೆ ಯಾತ್ರಿಕ್ ತಂಡದ ಹಿರಿಯ ನಟರು ಅಭಿನಯಿಸಿದ್ದರು. ಅದಕ್ಕೆ ಶ್ರೀ ರಾಮಮೂರ್ತಿಯವರು Set Design ಮತ್ತು Lighting ಮಾಡಿದ್ದರು. ಅವರಲ್ಲಿನ ಪ್ರಮುಖ ಪಾತ್ರಧಾರಿಗಳೆಂದರೆ Marcus Murch ಅವರು ಕಳ್ಳನ ಗುರು Fagin (Jew) ಹಾಗೂ Col. Michael ಅವರು Mr. Bumbleವಾಗಿದ್ದುದು. ಅದರಲ್ಲಿ ಐವತ್ತಕ್ಕೂ ಮಿಕ್ಕು ಕಲಾವಿದರು ಅಭಿನಯಿಸಿದ್ದರು. ಅದು ಡೆಲ್ಲಿಯ ಕಮಾನಿ ಆಡಿಟೋರಿಯಂನಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲ ಸಮಯದಲ್ಲಿ ಪ್ರದರ್ಶನಗೊಳ್ಳುತ್ತಿತ್ತು. ಶ್ರೀ ರಾಮಮೂರ್ತಿಯವರು ಅದರ ಪ್ರೊಡಕ್ಷನ್‌ಗೆ ಸೆಟ್‌ಡಿಸೈನ್ ಮತ್ತು Lighting Design ಅನ್ನು ಮಾಡಿದ್ದರು. ಅದಕ್ಕೆ ಪ್ರೇಕ್ಷಕರು ಮತ್ತು ಪತ್ರಿಕೆಗಳಿಂದ ಅದ್ಭುತವಾದ ಪ್ರತಿಕ್ರಿಯೆಯು ವ್ಯಕ್ತವಾಗಿದ್ದಿತು. ಅವರು ನಿರ್ದೇಶಿಸಿದ 'Six Characters In Search of an Author' ನಾಟಕಕ್ಕೂ ಸೆಟ್‌ಡಿಸೈನ್ ಮತ್ತು ಲೈಟಿಂಗ್‌ಡಿಸೈನ್ ಮಾಡಿದ್ದರು.

ಶ್ರೀ ವಿ. ರಾಮಮೂರ್ತಿಯವರು 1963ರಲ್ಲಿ ಎನ್.ಎಸ್.ಡಿ.ಯಲ್ಲಿ ಎರಡು ವರ್ಷಗಳ ಡ್ರಾಮಾ ಡಿಪ್ಲೋಮಾ ಮುಗಿಸಿದ ನಂತರ ಇನ್ನೊಂದು ವರ್ಷ ವಿಸ್ತರಣೆಗೊಂಡು ಮೂರನೆಯ ವರ್ಷದಲ್ಲಿ ಆಯ್ಕೆಗೊಂಡು ನಿರ್ದೇಶನದಲ್ಲಿ ವಿಶೇಷ ತರಬೇತಿ ಪಡೆದರು. 15 ಜುಲೈ 1964ರಲ್ಲಿ ಎನ್.ಎಸ್.ಡಿ.ಯು ಪ್ರಾರಂಭಿಸಿದ ರಾಷ್ಟ್ರೀಯ ರೆಪರ್ಟರಿಯ ಮೊದಲ ಸ್ಟೇಜ್ ಮ್ಯಾನೇಜರ್ ಆಗಿದ್ದರು. ಅಲ್ಲಿ ಒಂದೂವರೆ ವರುಷಕ್ಕೂ ಮಿಕ್ಕು ಕೆಲಸ ಮಾಡಿದ್ದರು. ಸಿ.ಎನ್. ದಾಸಗುಪ್ತ ಅವರು administrative Officer ಆಗಿದ್ದರು. 'ರೆಪರ್ಟರಿ ಎಂದರೆ ಅರೆಹವ್ಯಾಸಿ ಎನ್ನುತ್ತಾರೆ. ಆದರೆ ಅದು ತಪ್ಪು' ಎನ್ನುವ ಶ್ರೀ ರಾಮಮೂರ್ತಿಯವರು 'ಯಾವುದೇ ಕಂಪನಿಯು 4-5 ನಾಟಕಗಳನ್ನು ತನ್ನ ಮಡಿಲಲ್ಲಿ ತಯಾರಾಗಿಟ್ಟುಕೊಂಡು ಯಾವಾಗ ಬೇಕು ಆವಾಗ ಅವುಗಳನ್ನು ಪ್ರದರ್ಶಿಸುವುದೇ ರೆಪರ್ಟರಿ' ಎಂದು ಅರ್ಥೈಸುತ್ತಾರೆ. ಅವರಿಗೆ Post

Diploma Directionನಲ್ಲಿ IIIನೇ ರ್‍ಯಾಂಕ್ ಬಂದಿದ್ದಿತು. ಮೂರನೆಯ ವರ್ಷದಲ್ಲಿ Distinction in Stage Management ಪಡೆದಿದ್ದರು.

## ದೆಹಲಿ ರಂಗಯಾನ

ದೆಹಲಿ ಎಕ್ಸಿಬಿಷನ್ ಗ್ರೌಂಡ್‌ನಲ್ಲಿನ ಡಿಫೆನ್ಸ್ ಪೆವಿಲಿಯನ್ ಡಿಪಾರ್ಟ್‌ಮೆಂಟ್ (ಈಗಿನ ಪ್ರಗತಿ ಮೈದಾನ)ನಲ್ಲಿ ಒಂದು ರಂಗಮಂದಿರವಿತ್ತು. ಅಲ್ಲಿ ಒಳ್ಳೆಯ ನಟ, ಗಾಯಕ ಕರ್ನಲ್ ಹ್ಯೂ ಮೈಕೆಲ್ (Col. Hugh Michael) ಅವರು LAMDA (London Academy of Music and Drama Arts) ಪದವೀಧರರಾಗಿದ್ದು 'ಯಾತ್ರಿಕ್' ತಂಡದಲ್ಲಿದ್ದರು. ಶ್ರೀ ರಾಮಮೂರ್ತಿಯವರು ಅದರ ರಂಗಬೆಳಕು ಮತ್ತು ವಿನ್ಯಾಸಕಾರನಾಗಿ ಹಾಗೂ ನಿರ್ದೇಶಕನಾಗಿ ನೇಮಕಗೊಂಡು ದುಡಿದರು. ಅವರ ಸಹಾಯದಿಂದ ಪ್ರತಿ ಶುಕ್ರವಾರ, ಶನಿವಾರ, ಭಾನುವಾರಗಳಂದು ನಾಟಕ ನಿರ್ಮಾಣ ಮತ್ತು ನಿರ್ದೇಶನವನ್ನು ಮಾಡುತ್ತಿದ್ದರು. ಆಗ ಇಂಗ್ಲಿಷ್ ಮತ್ತು ಹಿಂದಿ ನಾಟಕಗಳು ಹೆಚ್ಚು ಪ್ರದರ್ಶನಗಳನ್ನು ಕಾಣುತ್ತಿದ್ದವು. ಹಿಂದಿ ನಾಟಕಗಳಲ್ಲಿ ಕೇವಲ್‌ಕಪೂರ್ ಮತ್ತು ಸುಷ್ಮಸೇಟ್ ಮುಂತಾದವರಿದ್ದರು. ಸಾಂಪ್ರದಾಯಿಕ, ಪಾರಂಪರಿಕ ಭಾರತೀಯ ರಂಗಕೌಶಲ್ಯಕ್ಕಾಗಿನ 'ನಾಯಿಕಾ' (Naika) ಎಂಬ ವಿನ್ಯಾಸ ಸಂಸ್ಥೆಯಲ್ಲಿ ಲೈಟಿಂಗ್, ಸೆಟ್ ಡಿಸೈನಿಂಗ್, ಆಕ್ಟಿಂಗ್ ಮತ್ತು ಡೈರೆಕ್ಷನ್ ವಿಭಾಗಗಳಲ್ಲಿಯೂ ಕಾರ್ಯನಿರ್ವಹಿಸಿದರು. ಅವರು ವಿದೇಶಗಳಿಂದ ಭಾರತಕ್ಕೆ ಆಗಮಿಸುತ್ತಿದ್ದ ಪ್ರತಿಷ್ಠಿತ ರಂಗತಂಡಗಳ ಪ್ರದರ್ಶನಗಳಿಗಾಗಿ ಪೂರಕವಾದ ನೇಪಥ್ಯ ಸಾಧನ ಸಾಮಗ್ರಿ ಸಲಕರಣೆಗಳು ಹಾಗೂ ಸಲಹೆಗಳ ಅಗತ್ಯವನ್ನು ಪೂರೈಸಿ 'ಸೈ' ಎನಿಸಿಕೊಂಡರು. Inder Razdan ಅವರು ಅದರ ನಿರ್ದೇಶಕರಾಗಿದ್ದರು. ಬೆಂಗಳೂರಿನಲ್ಲಿ ಪ್ರಯೋಗಗೊಂಡ ಅಮೆರಿಕದ ವೇಯಿನ್ ಸ್ಟೇಟ್ ಯೂನಿವರ್ಸಿಟಿ (Wayne State University), ಇಂಗ್ಲೆಂಡಿನ ಆಕ್ಸ್‌ಫರ್ಡ್ ಪ್ಲೇಹೌಸ್ ಕಂಪನಿ (Oxford Play House Company)ಗಳ ಪ್ರದರ್ಶನಗಳಿಗೆ ತಾಂತ್ರಿಕವಾಗಿ ನೆರವಾದರು. ಯಾವುದೇ ರಂಗತಂಡವನ್ನು ಕಟ್ಟುವ ರಚನಾತ್ಮಕ ಕ್ರಿಯೆಯಲ್ಲಿ ಪರಿಣತರಾದ ಶ್ರೀ ರಾಮಮೂರ್ತಿಯವರು ತಾವು ಬೀಡುಬಿಟ್ಟೆಡೆಯಲ್ಲೆಲ್ಲಾ ಸಮಾನಮನಸ್ಕ ಸಹವರ್ತಿಗಳೊಡಗೂಡಿ ರಂಗತಂಡಗಳನ್ನು ಹುಟ್ಟುಹಾಕಿ ಅವುಗಳ ಊರ್ಜಿತಾವಸ್ಥೆಯತ್ತ ತಮ್ಮ ಚಿತ್ತವನ್ನು ಹರಿಸುತ್ತಿದ್ದುದು ಸರ್ವೇಸಾಮಾನ್ಯ ಸಂಗತಿಯಾಗಿದ್ದಿತು. ಈ ದಿಸೆಯಲ್ಲಿ ಅವರು ತಮ್ಮ ದೆಹಲಿ ವಾಸ್ತವ್ಯದ ಅವಧಿಯಲ್ಲಿ ಎನ್.ಎಸ್.ಡಿ.ಯ ಹಳೆಯ ವಿದ್ಯಾರ್ಥಿಗಳು ಹಾಗೂ ಪ್ರಸಿದ್ಧ ರಂಗಪ್ರಭೃತಿಗಳಾದ ಓಂ ಶಿವಪುರಿ, ಸುಧಾ ಶಿವಪುರಿ, ಮೋಹನ ಮಹರ್ಷಿ, ರಾಮಗೋಪಾಲ್ ಬಜಾಜ್, ಬಿ.ವಿ. ಕಾರಂತರೊಂದಿಗೆ 'ದಿಶಾಂತರ್' (Dishanthar,

ಸ್ಥಾಪನೆ : 1965) ಹಿಂದಿ ರಂಗತಂಡವನ್ನು ಕಟ್ಟಿದರು. ಲೋದಿ ಕಾಲೊನಿಯ ಕನ್ನಡ ಸ್ಕೂಲ್ ಬಳಿಯೇ ಬಿ.ವಿ. ಕಾರಂತರ ಮನೆಯಿದ್ದಿತು. ಬಿ.ವಿ. ಕಾರಂತರು ಗಿರೀಶ್ ಕಾರ್ನಾಡರ 'ಹಯವದನ'ವನ್ನು ನಿರ್ದೇಶಿಸಿದಾಗ ವಿ. ರಾಮಮೂರ್ತಿಯವರು Set Design ಮಾಡಿದ್ದರು. ಅಲ್ಲದೆ ರಂಗ ದಿಗ್ಗಜರಾದ ಎಂ.ವಿ. ನಾರಾಯಣರಾವ್, ಯು. ಪ್ರಭಾಕರರಾವ್ ಹಾಗೂ ಶಾ. ಬಾಲೂರಾವ್ ಮುಂತಾದ ಕನ್ನಡ ಗೆಳೆಯರೊಡಗೂಡಿ 'ಕನ್ನಡ ಭಾರತಿ' (Kannada Bharathi)ಯನ್ನು ಹುಟ್ಟುಹಾಕಿದರು. ಇದರ ಮೊದಲ ಪ್ರೊಡಕ್ಷನ್ ಟಿ.ಪಿ. ಕೈಲಾಸಂರವರ 'ಬಂಡ್ವಾಳ್ವಿಲ್ಲದ ಬಡಾಯಿ' (ನಿ: ಯು. ಪ್ರಭಾಕರ ರಾವ್). ಅದರಲ್ಲಿ ಶ್ರೀ ರಾಮಮೂರ್ತಿಯವರು ಮುದ್ದು ಮಣಿ ಪಾತ್ರ ಮಾಡಿದ್ದರು. ಇದು ದೆಹಲಿಯಲ್ಲಿ ಬಿ.ವಿ. ಕಾರಂತರ ನಿರ್ದೇಶನದಲ್ಲಿ ಶ್ರೀರಂಗರ 'ದಾರಿ ಯಾವುದಯ್ಯಾ ವೈಕುಂಠಕೆ?' (1965) (Set Design : ವಿ. ರಾಮಮೂರ್ತಿ) ಮತ್ತು ಗಿರೀಶ್ ಕಾರ್ನಾಡರ 'ತುಘಲಕ್' (1965) ಮುಂತಾದ ನಾಟಕಗಳನ್ನು ನೀಡಿತು. ಅಲ್ಲದೆ ಇದು ಶಾ. ಬಾಲೂರಾಯರ ಸಂಪಾದಕತ್ವದಲ್ಲಿ 'ಷೇಕ್ಸ್‌ಪಿಯರ್‌ಗೆ ನಮಸ್ಕಾರ' ಎಂಬ ಗ್ರಂಥವನ್ನು ಪ್ರಕಟಿಸಿತು.

ವಿ. ರಾಮಮೂರ್ತಿಯವರು ಸ್ವತಂತ್ರವಾಗಿ ಲೈಟಿಂಗ್ ಮಾಡಿದ್ದು ಶ್ರೀರಂಗರ 'ಕೇಳು ಜನಮೇಜಯ'ದ ಹಿಂದಿ ಅನುವಾದ 'ಸುನೋ ಜನ್ಮೇಜಯ್' ನಾಟಕಕ್ಕೆ. ಇದು ನವದೆಹಲಿಯ ಎನ್.ಎಸ್.ಡಿ.ವತಿಯಲ್ಲಿ ಮೋಹನ ಮಹರ್ಷಿಯವರಿಂದ ನಿರ್ದೇಶನಗೊಂಡಿದ್ದಿತು. ಗಿರೀಶ್ ಕಾರ್ನಾಡರ 'ತುಘಲಕ್' ನಾಟಕವನ್ನು ವಿ. ರಾಮಮೂರ್ತಿ ಮತ್ತು ಓಂ ಶಿವಪುರಿ ಅವರು ಸೇರಿಕೊಂಡು ಮೊದಲು ಬಿ.ವಿ. ಕಾರಂತರಿಗೆ ಪೂರ್ತಿ Synopsis ಓದಿದ್ದರು. ಅದನ್ನು ಬಿ.ವಿ. ಕಾರಂತರು ಹಿಂದಿಗೆ ಅನುವಾದಿಸಿದರು. ಬಿ.ವಿ. ಕಾರಂತರ ಕ್ಲಾಸ್‌ಮೇಟ್ ಜೆ.ಎನ್. ಕೌಶಲ್ ಅವರು ಅವರ ಸಹಾಯದಿಂದ ಉರ್ದು ಭಾಷೆಗೆ ಭಾಷಾಂತರ ಮಾಡಿದರು. ಜೆ.ಎನ್. ಕೌಶಲ್ ಅವರು ಸ್ಟೆನೋಗ್ರಾಫರ್ ಆಗಿ ಕೆಲಸಕ್ಕೆ ಸೇರಿಕೊಂಡು ಪ್ರೊಫೆಸರ್ ಆದವರು ಮತ್ತು ಭಾರತೀಯ ನಾಟ್ಯಸಂಘದ ಸದಸ್ಯರು ಮತ್ತು ವೈಸ್‌ಪ್ರೆಸಿಡೆಂಟ್ ಆದವರು. ಅವರ ಗುರುಗಳಾದ ಜಿ.ಎನ್. ದಾಸಗುಪ್ತಾ ಅವರು ಅದರ ಪ್ರದರ್ಶನಕ್ಕೆ ಅದ್ಭುತವಾದ ಲೈಟಿಂಗ್ ಮಾಡಿದ್ದರು. ಪ್ರೊ. ಇಬ್ರಾಹಿಂ ಅಲ್ಕಾಜಿಯವರು ಸೆಟ್‌ಡಿಸೈನ್ ಮಾಡಿದ್ದರು. 'ಲೈಟಿಂಗ್‌ನ್ನು ನಾಟಕದ ಲಯ ಮತ್ತು ತಾಳಕ್ಕೆ ತಕ್ಕನಾಗಿ ಅಂದರೆ ದೃಶ್ಯದ ಪ್ರಾರಂಭದಿಂದ ಅದು ಮುಗಿಯುವವರೆಗೂ ಸರಿಯಾಗಿ ಮಾಡಬೇಕು. ಒಂದಿನಿತೂ ತಪ್ಪುವ ಹಾಗಿಲ್ಲ. ಇದರ ಮೊದಲ ಪ್ರದರ್ಶನಕ್ಕೆ ಅವರನ್ನು ಆಹ್ವಾನಿಸಿ ವೇದಿಕೆ ಮೇಲೆ ಬೂಕೆ (ಪುಷ್ಪಗುಚ್ಛ) ನೀಡಿ ಗೌರವಿಸಲಾಯಿತು. ಹೀಗೆ ಗಿರೀಶ್ ಕಾರ್ನಾಡರು ಹಿಂದಿ ರಂಗಭೂಮಿಗೆ

ಪರಿಚಯವಾದರು. ಅದೇ ಆಗತಾನೇ ಬಿ.ವಿ. ಕಾರಂತರು ಎನ್.ಎಸ್.ಡಿ.ಯ ಮೂರನೇ ವರ್ಷದಲ್ಲಿ ನಿರ್ದೇಶನ ಪರಿಣತಿ (Directing Specialization)ಯನ್ನು ಪಡೆದು ಲೋದಿ ಕಾಲೊನಿಯ ಗುಜರಾತ್ ಹೈಸ್ಕೂಲ್‌ನಲ್ಲಿ ಡ್ರಾಮಾ ಮಾಸ್ಟರ್ ಆಗಿ ಪಾಠ ಮಾಡುತ್ತಿದ್ದರು (1963). 5-6 ವರ್ಷಗಳ ನಂತರದಲ್ಲಿ ಪ್ರೊ. ಅಲ್ಕಾಜಿ ಸಾಹೇಬರು ಡೆಲ್ಲಿಯ ಹಳೇಕೋಟೆಯನ್ನು Background ಆಗಿ ಬಳಸಿಕೊಂಡು ಪ್ರದರ್ಶಿಸಿದ್ದರು. ಆಗ ಅದು ಮೂಲ Scriptಗಿಂತ ಎಡಿಟ್ ಆಗಿತ್ತು.

ಜಿ.ಎನ್. ಕೌಶಲ್ ಅವರು 'ದೊರೆ ಈಡಿಪಸ್' ('Oedipus Rex') ನಾಟಕವನ್ನು ಇಂಗ್ಲಿಷ್‌ನಿಂದ ಉರ್ದು ಭಾಷೆಗೆ ಅದ್ಭುತವಾಗಿ ಅನುವಾದಿಸಿದರು. ಓಂ ಶಿವಪುರಿಯವರು ಮುಖ್ಯವಾದ ಈಡಿಪಸ್ ಪಾತ್ರವನ್ನು ಮಾಡಿದ್ದರು. ಜಿ.ಎನ್. ದಾಸಗುಪ್ತಾ ಅವರು Lighting ಮಾಡಿದ್ದರು. ವಿ. ರಾಮಮೂರ್ತಿಯವರು Associate Director ಆಗಿದ್ದರು. ಪ್ರತಿದಿನ ಇದರ ನಿರಂತರ ರಿಹರ್ಸಲ್ ನಡೆಯುತ್ತಿದ್ದು ಐದು ವಾರಗಳಲ್ಲಿ ನಾಟಕವು ಪ್ರದರ್ಶನಕ್ಕೆ ಸಿದ್ಧವಾಗಿತ್ತು. ಪ್ರೊ. ಅಲ್ಕಾಜಿಯವರು ಇದನ್ನು ನಿರ್ದೇಶಿಸಿದ್ದರು.

ಆಗಿನ ಕಾಲದಲ್ಲಿದ್ದ ಹಿಂದಿಯ ದೈತ್ಯ ನಾಟಕಕಾರರೆಂದರೆ ಡಾ. ಶಂಕರಶೇಷ, ಮೋಹನ ರಾಕೇಶ್, ಡಾ. ಲಕ್ಷ್ಮೀನಾರಾಯಣಲಾಲ್, ಮಣಿ ಮಧುಕರ್, ರೇವತಿ ಶರಣ್ ಶರ್ಮ ಮತ್ತು ಆಕಾಶವಾಣಿಯ ಜೆ.ಸಿ. ಮಾಥುರ್ (ಜಗದೀಶ್‌ಚಂದ್ರ ಮಾಥುರ್) ಮುಂತಾದವರು. ಜೆ.ಸಿ. ಮಾಥುರ್‌ರವರ ನಾಟಕ 'ಶಾರ್ಬಿಯಾ' (Sharbia)ವನ್ನು ಎನ್.ಎಸ್.ಡಿ.ಯ ಎರಡನೇ ವರ್ಷದ ವಿದ್ಯಾರ್ಥಿಗಳಿಗೆ ಸಂಸ್ಕೃತ ಥಿಯೇಟರ್‌ನ ಪ್ರೊಫೆಸರ್ ಆಗಿದ್ದ ಗುಜರಾತಿ ಮಹಿಳೆ ಶ್ರೀಮತಿ ಶಾಂತಾ ಗಾಂಧೀಯವರೇ ನಿರ್ದೇಶಿಸಿದ್ದರು (1961). ಬಿ.ವಿ. ಕಾರಂತರು ಡಾ. ಚಂದ್ರಶೇಖರ ಕಂಬಾರರ 'ಜೋಕುಮಾರಸ್ವಾಮಿ'ಯನ್ನು 'ತೋತಾಬೋಲಾ' ಎಂಬುದಾಗಿ ಹಿಂದಿಗೆ ಅನುವಾದಿಸಿದ್ದರು. ಅದನ್ನು ಎನ್.ಎಸ್.ಡಿ. ವತಿಯಿಂದ ಸತೀಶ್ ಆನಂದ್ ಅವರು ಗ್ವಾಲಿಯರ್‌ನಲ್ಲಿ ಕಾರ್ಯಾಗಾರವನ್ನು ಏರ್ಪಡಿಸಿ ನಿರ್ದೇಶಿಸಿದ್ದರು. ಶಿಬಿರಾರ್ಥಿಗಳಿಗೆ Realistic Style ಬೋಧನೆಯೊಂದಿಗೆ ಶ್ರೀ ರಾಮಮೂರ್ತಿಯವರು ಈ ಎರಡೂ ನಾಟಕಗಳಿಗೆ ಲೈಟಿಂಗ್ ಮಾಡಿದ್ದರು. ಹೀಗೆ ಒಮ್ಮೆ ಶ್ರೀ ರಾಮಮೂರ್ತಿಯವರ ಹಳೆಯ ಪರಿಚಯದವರೊಬ್ಬರು ತಮ್ಮ ಇನ್ನೊಬ್ಬ ಸ್ನೇಹಿತೆಗೆ ಅವರನ್ನು ಪರಿಚಯಿಸುತ್ತಾ, 'Mr. Murthy is a world famous light boy!' ಎಂದಿದ್ದರು.

ಇದಕ್ಕೂ ಮುಂಚೆ 1959-60ರಲ್ಲಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ 'ಕೀಳು ಜನಮೇಜಯ'ವು ಪ್ರದರ್ಶನಗೊಂಡಾಗ ಕೆಲವೇ ಕೆಲವು ದೀಪಗಳನ್ನು

ಬಳಸಲಾಗಿದ್ದಿತು. ಎಸ್.ಜಿ. ರಾಮಚಂದ್ರ ಅವರು ವಿದೇಶದಿಂದ ತಂದಿದ್ದ ಎರಡು ಸಣ್ಣ ಲೈಟ್‌ಗಳನ್ನು ಅಳವಡಿಸಲಾಗಿತ್ತು. 'ಕೇಳು ಜನಮೇಜಯ' ನಾಟಕದಲ್ಲಿ ಮಾನವ ಜೀವಿತಕ್ಕೆ ಸಂಬಂಧಪಟ್ಟ ಮೂಲಭೂತ ಪ್ರಶ್ನೆ - ಜೀವನಾಂತರಂಗದ ದ್ವಂದ್ವ ತುಮುಲಗಳನ್ನು ಪರಿಣಾಮಕಾರಿಯಾಗಿ ಸಂವಹಿಸಬಲ್ಲ ಹೊಸ ಹೊಸ ತಾಂತ್ರಿಕತೆಗಾಗಿ ಶ್ರೀರಂಗರು ದುಡಿಯುತ್ತಿದ್ದುದು ತಿಳಿದುಬರುತ್ತದೆ. ಪ್ರೊ. ಅಲ್ಕಾಜಿಯವರು ಎನ್.ಎಸ್.ಡಿ.ಯಲ್ಲಿ ನಿರ್ದೇಶಿಸಿದ ಮೊಟ್ಟಮೊದಲ ನಾಟಕ ಮೋಹನ ರಾಕೇಶ್‌ರ ಹಿಂದಿಯ 'ಆಷಾಢ್ ಕಾ ಏಕ್‌ದಿನ್' ಮತ್ತು 'ಅಂಧಯುಗ' ನಾಟಕಗಳಿಗೆ ಲೈಟಿಂಗ್ ಒದಗಿಸಿದ ಜಿ.ಎನ್. ದಾಸಗುಪ್ತಾ ಅವರಿಗೆ ಶ್ರೀ ರಾಮಮೂರ್ತಿಯವರು ಅಸಿಸ್ಟೆಂಟ್ ಆಗಿಯೂ ಅವರು ಕಾರ್ಯನಿಮಿತ್ತ ಇತರೆಡೆಗಳಿಗೆ ತೆರಳಿದಾಗ ಸ್ವತಂತ್ರವಾಗಿಯೂ ಬೆಳಕು ವಿನ್ಯಾಸಗೈಯುತ್ತಿದ್ದರು. ಅನಂತರ ಪ್ರೊ. ಅಲ್ಕಾಜಿಯವರ ಸೆಟ್‌ಡಿಸೈನ್ ಮತ್ತು ನಿರ್ದೇಶನದ 'ಕಿಂಗ್ ಲಿಯರ್' ಉರ್ದು ಭಾಷೆಯ ನಾಟಕ ಪ್ರದರ್ಶನದಲ್ಲಿ ಶ್ರೀ ರಾಮಮೂರ್ತಿಯವರು ಬೆಳಕು ವಿನ್ಯಾಸಕಾರನಾಗಿ ಭಾಗಿಯಾಗಿದ್ದರು. Interdisciplinary Laboratory of Ideas (IDLI) ಸಂಘಟನೆಯೊಂದಿಗೆ ಶ್ರೀ ರಾಮಮೂರ್ತಿಯವರ ಸಂಪರ್ಕವಿದ್ದಿತು. ಅದರ ಸೆಕ್ರೆಟರಿಯಾಗಿ Economist ಸರೋಜಿನಿ ಅಬ್ರಾಹಂ, Design Co-ordinator ಆಗಿ ರಾಜೀವ್ ಸೇಟಿ ಹಾಗೂ ರೀಟಾ ಕಪೂರ್ ಇದ್ದರು. ವಿ. ರಾಮಮೂರ್ತಿಯವರು Lighting Designer ಆಗಿದ್ದರು. ಈ ತಂಡದ ಎಕ್ಸಿಬಿಷನ್‌ನಲ್ಲಿ ಅದ್ಭುತವಾದ Family Planning Pavilion ಇತ್ತು. ಅದರ ಹೆಸರು 'ಏಕಯಾತ್ರಾ'. ಅದರಲ್ಲಿ 25 ಜನ ಕೆಲಸಗಾರರಿದ್ದರು. ಅದೊಂದು Multimedia Presentation ಆಗಿತ್ತು. ಅದರಲ್ಲಿ Lighting ಮಾಡಿದಾಗ ಶ್ರೀ ರಾಮಮೂರ್ತಿಯವರಿಗೆ Philips Companyಯವರು Commendation Award ಕೊಟ್ಟರು. ಆಗ ಇಂದಿರಾಗಾಂಧಿ ಪ್ರಧಾನಮಂತ್ರಿಯಾಗಿದ್ದರು. ಈ ಕೈಂಕರ್ಯಗಳು ಶ್ರೀಯುತರಲ್ಲಿ ಹುದುಗಿದ್ದ ಸೃಜನಶೀಲ ಪ್ರತಿಭೆಯು ಹೊರಹೊಮ್ಮುವಲ್ಲಿ ನೆರವಾದವು ಹಾಗೂ ಆತ್ಮವಿಶ್ವಾಸವನ್ನು ಮೂಡಿಸಿದವು. ಅಂತೆಯೇ ಅವರು ಪ್ರೊ. ಅಲ್ಕಾಜಿಯವರ ಕುರಿತು ಅತ್ಯಭಿಮಾನ ಮತ್ತು ಗೌರವವನ್ನು ಸೂಚಿಸುತ್ತಾ, 'ಪ್ರೊ. ಅಲ್ಕಾಜಿಯವರು ಎನ್.ಎಸ್.ಡಿ. ಪ್ರಗತಿಯನ್ನು ಹೊಂದುವುದಕ್ಕೆ ಕಾರಣಕರ್ತರು. ಅವರು ಪ್ರಪಂಚದ ಚಿತ್ರಕಲೆಯ ಬಗ್ಗೆಯೂ ಆಳವಾದ ಪರಿಣತಿಯನ್ನು ಹೊಂದಿದ್ದರು. He expects very much from the artists and technicians. He is a combination of everything - sculptor, painter, set designer, costume designer and director of all in one' ಎಂದಿರುವರು. ಲೈಟಿಂಗ್ ವಿನ್ಯಾಸತಜ್ಞತೆಯಲ್ಲಿ ತಮಗೆ ಬಹಳ ಪ್ರೋತ್ಸಾಹ ಕೊಟ್ಟವರಾದ ಚಮನ್‌ಲಾಲ್, ಮೋಹನ ಮಹರ್ಷಿ ಮತ್ತು

ಆರ್.ಕೆ. ಡಿಂಗ್ರಾ ಅವರನ್ನು ನೀಡಿದ ಸದವಕಾಶ ಮತ್ತು ಬೀರಿದ ಗಾಢವಾದ ಪ್ರಭಾವವನ್ನು ಶ್ರೀ ರಾಮಮೂರ್ತಿಯವರು ಆಗಾಗ್ಗೆ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಿರುತ್ತಾರೆ.

## ವಿದೇಶದತ್ತ ರಂಗಪಯಣ

ನವದೆಹಲಿಯ ಎನ್.ಎಸ್.ಡಿ.ಯು ಶ್ರೀ ರಾಮಮೂರ್ತಿಯವರ ಅಂದು ಎಂದು ಮುಂದಿನ ರಂಗಕಾಯಕಕ್ಕೆ take off point ಆಯಿತು. ಅವರು ಅಮೆರಿಕ ಮತ್ತಿತರ ಹತ್ತಾರು ಯುರೋಪ್‌ನ ವಿವಿಧ ದೇಶವಿದೇಶಗಳಿಗೆ ಭೇಟಿಯಿತ್ತು ರಂಗಬೆಳಕಿನ ಜ್ಞಾನವನ್ನು ಆರ್ಜಿಸಿ, ವಿನಿಯೋಗಿಸಿ ರಂಗಕ್ಷಿತಿಜದ ಬೆಳಕನ್ನು ವಿಸ್ತರಿಸಿದರು. ಹಲವಾರು ನಿರ್ದೇಶಕರು ಮತ್ತು ಇತರೆ ನೇಪಥ್ಯ ರಂಗತಂತ್ರಜ್ಞರು ಹಾಗೂ ಸಾಮಾನ್ಯಜನರೊಡನಾಡಿದರು; ನಾನಾ ರಂಗಭಾಷೆಗಳನ್ನು ಆಲಿಸಿ, ಪೋಷಿಸಿ ಚಿಂತನಮಂಥನಗೈದರು.

ಅದೊಂದು ದಿನ ಅಮೆರಿಕದಿಂದ ಎನ್.ಎಸ್.ಡಿ.ಗೆ ಪತ್ರವೊಂದು ಬಂದುಸೇರಿತು. ಆಗಷ್ಟೇ ಅಲ್ಕಾಜಿಯವರು ಅದರಲ್ಲಿ, "In the order of merit ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆಮಾಡಿ ಅಮೆರಿಕ ಸರಕಾರವು ಯೂನಿವರ್ಸಿಟಿ ಆಫ್ ಹವಾಯ್‌ನಲ್ಲಿ Theatre Technique ಕುರಿತಂತೆ ಒಂದು ಟ್ರೈನಿಂಗ್ ನಡೆಯುತ್ತೆ. Centre for cultural Exchange Between East and West (East West)ನವರು ಅಮೆರಿಕ ಸರಕಾರದಿಂದ ಒಂದು ಸ್ಕಾಲರ್‌ಶಿಪ್ ಕೊಡ್ತಾರೆ. ನೀನು ಹೋಗುವುದಕ್ಕೆ ಸಿದ್ಧವಿದ್ದಿಯಾ?' ಎಂದು ನನಗೂ ಮತ್ತು ಇತರೆ ಪದವೀಧರರಿಗೂ ಸುತ್ತೋಲೆಯೊಂದಿಗೆ ಪತ್ರ ಬರೆದಿದ್ದರು. ಅದಕ್ಕೆ ಹದಿನಾಲ್ಕು ಜನರು apply ಮಾಡಿದ್ದರು. ಒಂದು ತಿಂಗಳ ನಂತರದಲ್ಲಿ ಇನ್ನೊಂದು ಪತ್ರ ಬಂತು. ಅದರಲ್ಲಿ ಎರಡನೆಯವನಾಗಿ ಶ್ರೀ ರಾಮಮೂರ್ತಿಯವರ ಆಯ್ಕೆಯಾಗಿದೆ ಎಂದಿತ್ತು." ಅಂದಿನ ಸ್ಥಿತಿಗತಿ ಪರಿಸ್ಥಿತಿಯನ್ನು ಶ್ರೀ ರಾಮಮೂರ್ತಿಯವರು ಹೀಗೆ ವಿವರಿಸಿದರು :"ನನಗೆ ಇತರೆ ಖರ್ಚುವೆಚ್ಚಗಳಿಗೆ ತಗುಲುವ ದುಡ್ಡಿನ ತೊಂದರೆಯಾಯ್ತು. ಆದರೂ ಭಂಡ ಧೈರ್ಯದಿಂದ ಅಮೆರಿಕಕ್ಕೆ ಹೋಗಲು ಸಿದ್ಧನಿದ್ದೇನೆ ಎಂದು ಎನ್.ಎಸ್.ಡಿ.ಗೆ ಪತ್ರ ಬರೆದೆ. ಅದೃಷ್ಟವಶಾತ್ 'ಯಾತ್ರಿಕ್' ರಂಗಸಂಸ್ಥೆಯ ನಿರ್ದೇಶಕಿಯಾಗಿ ಶ್ರೀಮತಿ ಜಾಯ್ ಮೈಕೇಲ್ ನನಗೆ Suretyಯಾಗಲು ಒಪ್ಪಿಕೊಂಡು Air Franceಗೆ ಕೊಡಬೇಕಾದ ಅಪ್ಲಿಕೇಷನ್‌ಗೆ ಸಹಿ ಮಾಡಿಸಿಕೊಂಡರು. ಪಡೆದ ಹಣವನ್ನು 20 ತಿಂಗಳುಗಳ ಕಂತುಗಳಲ್ಲಿ ತೀರಿಸಿದೆ. ಅದರ ಪ್ರಕಾರ Air Franceನಿಂದ ಟಿಕೆಟ್ ಪಡೆದುಕೊಂಡು ಜಪಾನ್ ಮೂಲಕ ಹೊನಲೂಲು ತಲುಪಿದೆ. ವಾಸ್ತವವಾಗಿ ಅವರಿಗೂ ನನಗೂ ಐದು ವರ್ಷಗಳ

ಪರಿಚಯ ಕೂಡ ಇರಲಿಲ್ಲ. ಆದರೂ ಇದೆಲ್ಲ ನಂಬಿಕೆ ಮೇಲೆ ನಡೆದದ್ದು. ನಾನು ಇಲ್ಲಿಯವರೆವಿಗೂ ಆ ನಂಬಿಕೆಯನ್ನು ಜಾಯ್ ಮೈಕೇಲ್ ಮತ್ತು ಇತರರೊಡನೆ ಉಳಿಸಿಕೊಂಡು ಬಂದಿದ್ದೇನೆ."

"ನಾನು ಹೊನಲೊಲು ತಲುಪಲು ಅಲ್ಲಿಯ ಕಸ್ಟಮ್ಸ್ ಇನ್ಸ್‌ಪೆಕ್ಟರ್‌ರವರು, 'ಇಲ್ಲಿ ನಿಮಗೆ ಯಾರಾದರೂ ಗೊತ್ತೆ' ಎಂದರು. ಆಗ ನಾನು, 'You are the first friend and I am personally meeting you here!' ಎಂದೆ. ಅಲ್ಲಿ ನನ್ನನ್ನು ಬರಮಾಡಿಕೊಳ್ಳಲು ಪ್ರೊ. ರಿಚರ್ಡ್ ಮ್ಯಾಸನ್ ಅವರು ಏರ್‌ಪೋರ್ಟ್‌ಗೆ ಬಂದಿದ್ದರು. ಅವರು ನನ್ನನ್ನು ಹಾಸ್ಟೆಲ್‌ಗೆ ಕರೆದುಕೊಂಡು ಹೋಗಿ ಎಲ್ಲರನ್ನೂ ಪರಿಚಯ ಮಾಡಿಸಿದರು. ಅನಂತರ East Westನ ವೈಸ್‌ಛಾನ್ಸಲರ್ ಆಗಿದ್ದ Dr. Baron Gotoo ಅವರು ಒಂದು ಕವರ್‌ನಲ್ಲಿ ಮೊಟ್ಟಮೊದಲನೆಯ ತಿಂಗಳ 150 ಡಾಲರುಗಳ ಸ್ಕಾಲರ್‌ಷಿಪ್ ಹಣದ ಚೆಕ್‌ಅನ್ನು ಕೊಟ್ಟರು. ಅದರ ಜೊತೆಗೆ ಪುಸ್ತಕಗಳನ್ನು ಕೊಟ್ಟರು. ಅವರೊಡನೆ ಪರ್ಸನಲ್ ಅಸಿಸ್ಟೆಂಟ್ Mrs. Lee Kai ಮತ್ತು ಸೆಕ್ರೆಟರಿಯಾಗಿದ್ದವರು Lindo Lee ಎಂಬುವರು. ಅವರು ಮತ್ತು ಇತರರು ನನ್ನನ್ನು ಕಂಡವರೆ, 'Welcome to Hawaii. We hope you will have a nice time' ಎಂದರು. ನನ್ನ ಹಾಗೇನೆ ಹಾಗೂ ನನಗಿಂತ ಕೆಲವು ದಿನಗಳ ಹಿಂದೆಯೇ ದಕ್ಷಿಣ ಕೋರಿಯಾದ Jean Hyun Yawg ಎಂಬುವರು ಬಂದಿದ್ದರು. ನಾವೀರ್ವರೂ ಒಂದೇ ರೂಂನಲ್ಲಿದ್ದೆವು ಹಾಗೂ ಕ್ಲಾಸ್‌ಮೇಟ್‌ಗಳಾದವು.

ಅಲ್ಲಿನದು ಅತ್ಯಂತ ವ್ಯವಸ್ಥಿತ - ಸುಸಜ್ಜಿತವಾದಂಥ ಜೆ.ಎಸ್. ಥಿಯೇಟರ್ ಡಿಪಾರ್ಟ್‌ಮೆಂಟ್ ಆಗಿತ್ತು. ಅಲ್ಲಿನ ಪ್ರೊಫೆಸರ್ ಮತ್ತು ಇಲಾಖೆಯ ಮುಖ್ಯಸ್ಥರಾಗಿದ್ದ ಡಾ. ಅರ್ಲ್ ಅರ್ನೆಸ್ಟ್ (Dr. Earl Ernest) ಅವರು Direction and History of Eastern Theatre ಕುರಿತು ಪಾಠ ಮಾಡುತ್ತಿದ್ದರು. ನಾನು ಅಲ್ಲಿನ ಕಲಿಕೆಯ ಅವಧಿಯಲ್ಲಿ ಅವರ ಪ್ರತಿಯೊಂದು ಕ್ಲಾಸಿಗೂ ಹಾಜರಾಗುತ್ತಿದ್ದೆ. ಅವರು ಜಪಾನಿನ ಒಂದು ಜನಪ್ರಿಯ ಶಾಸ್ತ್ರೀಯ ನಾಟಕವಾದ 'ಕಬೂಕಿ' (Kabuki - Ka Singing, Bu Dancing, Ki Acting) ಎಂಬ ಹೆಸರಿನ ಅದ್ಭುತವಾದ ಒಂದು ಒಳ್ಳೆಯ ಪುಸ್ತಕವನ್ನು ಬರೆದಿದ್ದಾರೆ. ಅವರು ಇಲಾಖೆಯ ಕಾರ್ಯದರ್ಶಿ, ಆಡಳಿತಗಾರ್ತಿ Nancy Tackei ಅವರ ಪರಿಚಯಮಾಡಿಕೊಟ್ಟರು. Dr. (Mrs) Evelyn Mcqueen ಅವರು ನಿರ್ದೇಶನ ಮತ್ತು ಅಭಿನಯ, Prof. Richard Mason ಅವರು ಸೆಟ್‌ಡಿಸೈನ್ ಮತ್ತು ವಸ್ತ್ರವಿನ್ಯಾಸ Joel Trapiodo ಅವರು ಲೈಟಿಂಗ್, Prof. Robert Soller ಅವರು ಸ್ಟೇಜ್ ಕ್ರಾಫ್ಟ್ ಮತ್ತು ಥಿಯೇಟರ್ ಟೆಕ್ನಿಕ್, ಕ್ಯಾಲಿಫೋರ್ನಿಯಾದಿಂದ ವಿಸಿಟಿಂಗ್

ಪ್ರೊಫೆಸರ್ ಆಗಿ ಬಂದಿದ್ದ Dr. Mantle Hood ಅವರು Western Classical Music and Orchestral Conducting ಬಗ್ಗೆ ರಂಗ ಕಮ್ಮಟ ಮತ್ತು Carl Woltz ಅವರು Classical and Modren Western Dance ಕುರಿತು ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಡಾ. ಮ್ಯಾಂಟಿಲ್ ಹುಡ್ ಅವರು ಹಲವಾರು ವಾದ್ಯಗಳನ್ನು ಅದ್ಭುತವಾಗಿ ನುಡಿಸುತ್ತಿದ್ದರು. ಅವರು Hazel Chung ಎಂಬ ಇಂಡೋನೇಷಿಯನ್ ಮಹಿಳೆಯನ್ನು ಮದುವೆಯಾಗಿದ್ದರು. Hazel chung ಅವರು ಇಂಡೋನೇಷಿಯನ್ ನೃತ್ಯದ ಬಗ್ಗೆ ಒಂದು ತಿಂಗಳ ವರ್ಕ್‌ಷಾಪ್ ನಡೆಸಿದ್ದರು. ಅದೊಂದು ಅದ್ಭುತವಾದ ವರ್ಕ್‌ಷಾಪ್. ನಾನು ಎರಡೂ ವರ್ಕ್‌ಷಾಪ್‌ಗಳಲ್ಲಿ ಭಾಗವಹಿಸಿ ವೆಸ್ಟರ್ನ್ ಆರ್ಕೆಸ್ಟ್ರಾ ಕಂಡಕ್ಟ್ ಮಾಡುವುದನ್ನು ಕಲಿತುಕೊಂಡೆ."

ಶ್ರೀ ರಾಮಮೂರ್ತಿಯವರು ಡಾ. ಎವೆಲಿನ್ ಮ್ಯಾಕ್ವೀನ್ ಅವರು ನಿರ್ದೇಶಿಸಿದ್ದ 'Twelfth Night' ಮತ್ತು 'Good woman of setzuwan' ಮುಂತಾದ ನಾಟಕಗಳಲ್ಲಿ ಪಾತ್ರವಹಿಸಿದ್ದರು.

ಯೂನಿವರ್ಸಿಟಿ ಆಫ್ ಅಲಾಸ್ಕಾದಲ್ಲಿ Lee salisbury ಅವರು ನೃತ್ಯ, ನಾಟಕ, ಸಂಗೀತ, ರಂಗಭೂಮಿ, ಫಿಲ್ಮ್ ಮತ್ತು ಟೆಲಿವಿಷನ್ ವಿಭಾಗದ ಮುಖ್ಯಸ್ಥರಾಗಿದ್ದರು. ಅವರು Makeup ಬಗ್ಗೆ workshop ಮಾಡಿದರು. ನ್ಯೂಯಾರ್ಕ್ ಯೂನಿವರ್ಸಿಟಿಯಲ್ಲಿ ಪ್ರೊಫೆಸರ್ ಆಗಿದ್ದು, ಯೂನಿವರ್ಸಿಟಿ ಆಫ್ ಅಲಾಸ್ಕಾದ ವಿಸಿಟಿಂಗ್ ಪ್ರೊಫೆಸರ್ ಆಗಿ ಆಗಮಿಸಿದ್ದ Mrs. Gladis Bailin ಅವರು Modern Dance ಬಗ್ಗೆ ವರ್ಕ್‌ಷಾಪ್ ಮಾಡಿದ್ದರು; ಹಲವಾರು ನೃತ್ಯ, ಸಂಗೀತ ಕಾರ್ಯಕ್ರಮಗಳನ್ನು ಕೊಟ್ಟಿದ್ದರು. ಎಲ್ಲಾ Workshopಗಳಲ್ಲೂ ಶ್ರೀ ರಾಮಮೂರ್ತಿಯವರು ಭಾಗವಹಿಸಿ ವಿವಿಧ ವಿಷಯಗಳನ್ನು ಕಲಿತುಕೊಂಡರು. ಅವರು ಒಂದು ವರುಷದ ಸ್ಕಾಲರ್‌ಷಿಪ್ (ಅನುದಾನ)ದಲ್ಲಿ ಹೊನಲೂಲುವಿನ ಹವಾಯ್ ವಿಶ್ವವಿದ್ಯಾಲಯದ ರಂಗಭೂಮಿ ವಿಭಾಗದಲ್ಲಿ ರಂಗತಂತ್ರಗಳ ಕುರಿತು ಉನ್ನತ ತರಬೇತಿಯನ್ನು ಪಡೆದರು, ಹೊನಲಿನ ಸಿರಿಯನ್ನು ಪಸರಿಸಿದರು. ಈ ತರಬೇತಿಯ ನಂತರದಲ್ಲಿ ನ್ಯೂಯಾರ್ಕ್‌ನ Kliegl Brothers ಕಂಪನಿಯ ಕ್ಯಾಲಿಫೋರ್ನಿಯಾ ವಲಯದ ವೈಸ್‌ಪ್ರೆಸಿಡೆಂಡ್ ಆಗಿದ್ದ George Howard ಎಂಬುವರ ಪರಿಚಯವಾಗಿ ಅವರ ಆಗ್ರಹದ ಮೇರೆಗೆ ವಿದ್ಯಾರ್ಥಿವೇತನ ಪಡೆದು ನ್ಯೂಯಾರ್ಕ್ ನಗರಕ್ಕೆ ತೆರಳಿದರು. ಅವರು ಶ್ರೀ ರಾಮಮೂರ್ತಿಯವರ ವೀಸಾ ಎಕ್ಸ್‌ಟೆನ್ಷನ್ ಮತ್ತು ಪೇಪರ್ ವರ್ಕ್‌ಗಳನ್ನು ನೋಡಿಕೊಂಡಿದ್ದರು. ನ್ಯೂಯಾರ್ಕ್‌ನ United States Institute for Theatre Technology (USITT)ನಲ್ಲಿ ರಂಗತಂತ್ರ

ಜ್ಞಾನಾಧ್ಯಯನವನ್ನು ನಡೆಸಿದರು (1968). ಈ ಸಂಸ್ಥೆಯಲ್ಲಿ ಮೂರು ವರುಷಗಳ ಕಾಲ 'ಬೆಳಕು ಮತ್ತು ರಂಗವಿನ್ಯಾಸ ಜ್ಞಾನ' ವಿಷಯ ಕುರಿತಂತೆ ಸಂಸ್ಥೆಯ ಎಕ್ಸಿಕ್ಯುಟಿವ್ ವೈಸ್‌ಪ್ರೆಸಿಡೆಂಟ್‌ರಾಗಿದ್ದ Jole E Rubin ಮತ್ತು ನ್ಯೂಯಾರ್ಕ್‌ನ ಹೆಸರಾಂತ ಅಂತಾರಾಷ್ಟ್ರೀಯ ಖ್ಯಾತಿ ಲೈಟಿಂಗ್ ಕಂಪನಿ ಕ್ಲೀಗ್ಸ್ ಬ್ರದರ್ಸ್ (Kliegle Bros. Universal Electric Stage Lighting Corporation) ದಕ್ಷ ಮಾರ್ಗದರ್ಶನದಲ್ಲಿ ಬೆಳಕು ವಿನ್ಯಾಸ ಮತ್ತು ಸ್ಥಾಪನೆ ಕುರಿತು ತರಬೇತಿ ಪಡೆದರು (1968-71). ಇವರಿಗೆ USITT ವತಿಯಿಂದ ವಿದ್ಯಾಭ್ಯಾಸಕ್ಕೆ ಸಲಹೆಗಾರರಾಗಿದ್ದವರು Dr. Tom De' Guittamani, Dr. Donald Swinny (Hofstra Universityಯಲ್ಲಿ ಥಿಯೇಟರ್ ಡಿಪಾರ್ಟ್‌ಮೆಂಟ್ ಪ್ರಾಧ್ಯಾಪಕ) ಮತ್ತು Raysmith ('Stage Craft' ಎಂಬ ಹೆಸರಿನ ಸ್ಕೂಲ್ ವಿದ್ಯಾರ್ಥಿಗಳಿಗಾಗಿನ ಪ್ರಕಟಣೆಯ ಸಂಪಾದಕರು) ಮುಂತಾದವರು. ಅವರು ಜೋಲ್ ಇ ರುಬಿನ್ ಅವರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಪ್ರಸಿದ್ಧ ಯೂನಿವರ್ಸಲ್ ಎಲೆಕ್ಟ್ರಿಕ್ ಸ್ಟೇಜ್ ಲೈಟಿಂಗ್ ಕಂಪನಿಯು ರಂಗ ಲೈಂಟಿಂಗ್ ಪ್ರಗತಿಯತ್ತ ಗಮನವಿತ್ತು ರಂಗಭೂಮಿ, ಸಿನಿಮಾ ಮತ್ತು ದೂರದರ್ಶನ ನಿರ್ಮಾಣಗಳಿಗೆ ಅಗತ್ಯಪೂರಕವಾದ ಬೆಳಕಿನ ಉಪಕರಣ / ಪರಿಕರಗಳನ್ನು ಉತ್ಪಾದಿಸುವಲ್ಲಿ ಹಾಗೂ ಪ್ರತಿಷ್ಠಾಪಿಸುವಲ್ಲಿ ನೆರವಾದರು. John Kligl - II ಅವರು ಅದರ ಅಧ್ಯಕ್ಷರಾಗಿದ್ದರು.

ಶ್ರೀ ರಾಮಮೂರ್ತಿಯವರು ನ್ಯೂಯಾರ್ಕ್‌ನಲ್ಲಿದ್ದಾಗ ಶ್ರೀರಂಗರಿಗೆ ಒಂದು ಪತ್ರ ಬರೆದು, 'ನನಗೆ ನ್ಯೂಯಾರ್ಕ್ ನಗರದಲ್ಲಿರುವ USITTನಲ್ಲಿ Theatre Lighting Technology ಬಗ್ಗೆ ಅಧ್ಯಯನ ಮಾಡಲು 3 ವರ್ಷಗಳ ಸ್ಕಾಲರ್‌ಷಿಪ್ ಸಿಕ್ಕಿದೆ. ಜೊತೆಗೆ Clevele Bros.ನಲ್ಲಿ ಕೆಲಸ ಸಿಕ್ಕಿದೆ' ಎಂದು ತಿಳಿಸಿದರು. ಅದಕ್ಕೆ ಶ್ರೀರಂಗರು ಬಹಳ ಸಂತೋಷಪಟ್ಟು ಹೀಗೆ ಉತ್ತರಿಸಿದ್ದರು : "You are going too fast. You may become useless to yourself when you comeback to India!"

ಶ್ರೀ ರಾಮಮೂರ್ತಿಯವರು ತಮ್ಮ ಮೂರು ವರುಷಗಳ ಅವಧಿಯ ಒಡನಾಟದಲ್ಲಿ ನ್ಯೂಯಾರ್ಕ್ ನಗರದ ಒಳ ಮತ್ತು ಹೊರವಲಯಗಳಲ್ಲಿನ ಅನೇಕ ರಂಗಪ್ರದರ್ಶನಗಳನ್ನು ನಿರ್ದೇಶಿಸಿದುದಲ್ಲದೆ ಅವುಗಳ ರಂಗವಿನ್ಯಾಸ, ಬೆಳಕು ವಿನ್ಯಾಸ, ವರ್ಣಾಲಂಕಾರ ಮತ್ತು ಪ್ರಸಾಧನ ಪ್ರಕ್ರಿಯಾ ಕಾರ್ಯವಿಧಾನಗಳಲ್ಲಿ ಪೂರ್ಣ ಪ್ರಮಾಣದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು ತಮ್ಮ ಸೃಜನಶೀಲತೆಯನ್ನು ಮೆರೆದುದಲ್ಲದೆ ಮೌನಾಭಿನಯ ಮತ್ತು ಪೂರ್ಣಾಭಿನಯಗಳಲ್ಲಿ ತಮ್ಮ ಪ್ರತಿಭೆಯನ್ನು ತೋರಿ ಜನಮೆಚ್ಚುಗೆಯನ್ನು ಗಳಿಸಿದರು. ತಮ್ಮ ಅನೇಕ ರಂಗತಜ್ಞರೊಡನೆಯ ಒಡನಾಟದಿಂದ ವಿಚಾರವಿನಿಮಯ ನಡೆಸಿದರು. ಅವರಿಗೆ ನೇಪಥ್ಯತಜ್ಞ ಡಾ. ರಿಚರ್ಡ್

ಶೆಕ್ನರ್ ಅವರು ನ್ಯೂಯಾರ್ಕ್‌ನಲ್ಲಿಯೇ ಪರಿಚಯವಾಗಿದ್ದರು. ಅವರು Tulane Universityಯಲ್ಲಿ ರಂಗಭೂಮಿ ಪ್ರೊಫೆಸರ್ ಆಗಿದ್ದು 'Tulane Drama Review' ಎಂಬ ಮಾಸಪತ್ರಿಕೆಯ ಸಂಪಾದಕರಾಗಿದ್ದರು. ಅನಂತರ Newyork universityಯಲ್ಲಿ ಪ್ರೊಫೆಸರ್ ಆದರು. ಅವರು Full Bright Grant ವತಿಯಿಂದ ತಮ್ಮ ವೃತ್ತಿಪರ ಕಂಪನಿಯ Performing Group ಸಂಚಾರಿ ತಂಡದೊಡನೆ (1898-1956) ಭಾರತಕ್ಕೆ ಬಂದಿದ್ದರು. ಅವರು ಬರ್ಟೋಲ್ಟ್ ಫ್ರೆಡೆರಿಕ್ ಬ್ರೆಕ್ಟ್‌ನ 'Mother Courage' ಜರ್ಮನ್ ನಾಟಕವನ್ನು ಇಂಗ್ಲಿಷ್ ಭಾಷೆಯಲ್ಲಿ ನಿರ್ದೇಶಿಸಿದ್ದರು. ಶ್ರೀ ರಾಮಮೂರ್ತಿಯವರು ಅದರ Indian Technical Director ಆಗಿದ್ದರು. ಅದು ಒಂದು ಟೂರಿಂಗ್ ತಂಡವಾಗಿ 1975ರ ದಿನ ತುರ್ತು ಪರಿಸ್ಥಿತಿ ಕಾಲದಲ್ಲಿ ಸುಮಾರು ಎರಡು ತಿಂಗಳುಗಳ ಕಾಲ ದೇಶದಾದ್ಯಂತ ಸಂಚರಿಸಿತು. ಅದು ಡೆಲ್ಲಿ, ಲಕ್ನೋ, ಕಲ್ಕತ್ತ, ಭೂಪಾಲ್ ಮತ್ತು ಮುಂಬೈ ನಗರಗಳಲ್ಲಿ ಪ್ರದರ್ಶನಗಳನ್ನು ನೀಡಿತು. ಅದರ ಸೆಟ್ ಅನ್ನು ಡೆಲ್ಲಿಯಲ್ಲಿ ದೊರೆತ ಸಾಮಾನು ಸರಂಜಾಮುಗಳಿಂದ ಸೃಷ್ಟಿ ಮಾಡಲಾಗಿತ್ತು. ಅವರು ಸೆಟ್ ಅನ್ನು Environment ಎಂದು ಕರೆಯುತ್ತಾರೆ. ಪ್ರೇಕ್ಷಕಾಂಗಣವನ್ನು ಅಟ್ಟದ ಮೂರು ಅಂತಸ್ತುಗಳ (Shelves) ರೀತಿಯಲ್ಲಿ ನಿರ್ಮಾಣ ಮಾಡಲಾಗುತ್ತಿದ್ದಿತು. ಪ್ರೇಕ್ಷಕರು ನಾಲ್ಕೂ ಕಡೆಗಳಲ್ಲಿ ಕುಳಿತುಕೊಳ್ಳುತ್ತಿದ್ದರು. ಅದೊಂದು Environmental Theatreನಂತಾಗಿದ್ದಿತು. ನಿಜಕ್ಕೂ ಅದೊಂದು ಅದ್ಭುತವಾದ Production, ದೊಡ್ಡ ಸಾಹಸ. ಶ್ರೀ ರಾಮಮೂರ್ತಿಯವರು ಡಾ. ರಿಚರ್ಡ್ ಶೆಕ್ನರ್‌ರೊಡನೆ ಕಾರ್ಯನಿರ್ವಹಿಸಲೊದಗಿದ ಸದಾವಕಾಶವನ್ನು ಆಗಾಗ್ಗೆ ಮೆಲುಕುಹಾಕುತ್ತಿರುತ್ತಾರೆ.

ನ್ಯೂಯಾರ್ಕ್‌ನ ಆಫ್ - ಆಫ್ ಬ್ರಾಡ್ವೆ (Off-Off Broadway) (Off-Broadway) ಥಿಯೇಟರ್‌ಗಳಲ್ಲಿ ಪ್ರದರ್ಶನಗೊಳ್ಳುತ್ತಿದ್ದ ನೃತ್ಯ, ಸಂಗೀತ, ನಾಟಕ ಇತ್ಯಾದಿಗಳಿಗೆ ಬೆಳಕು ವಿನ್ಯಾಸಕ, ರಂಗವಿನ್ಯಾಸಕ ಹಾಗೂ ನಿರ್ದೇಶಕನಾಗಿ ಕೆಲಸಮಾಡಿದ ಕೆಲವೇ ಕೆಲವು ಭಾರತೀಯರಲ್ಲಿ ಶ್ರೀ ರಾಮಮೂರ್ತಿಯವರೂ ಒಬ್ಬರು ಎಂಬ ಹೆಗ್ಗಳಿಕೆಯನ್ನು ಪಡೆದಿದ್ದಾರೆ. ಅಲ್ಲದೆ ನ್ಯೂಯಾರ್ಕ್‌ನ ಪಶ್ಚಿಮ 58ನೇ ರಸ್ತೆಯಲ್ಲಿನ ಸಂಚಾರಿ ನ್ಯಾಷನಲ್ ಷೇಕ್ಸ್‌ಪಿಯರ್ ಕಂಪನಿಯ ಪ್ರಾಯೋಗಿಕ ಅಂಗವಾಗಿದ್ದ 'ಕ್ಯುಟಿಕುಲೋ' (Cuticulo)ಗಾಗಿ ರಂಗದ ಮೇಲೆ ಮತ್ತು ರಂಗದ ಹಿಂಬದಿಯಲ್ಲಿ ವಿನ್ಯಾಸಗೈದಿರುವರು. ಇದನ್ನು Showcase Theatre ಎಂದು ಕರೆಯುತ್ತಿದ್ದರು. ನ್ಯಾಷನಲ್ ಷೇಕ್ಸ್‌ಪಿಯರ್ ಕಂಪನಿಯು ನಾಲ್ಕು ಅಂತಸ್ತುಗಳನ್ನುಳ್ಳ ಕಲಾತ್ಮಕ ಕಟ್ಟಡವಾಗಿದ್ದು ಅದರ ಬೇಸ್‌ಮೆಂಟ್‌ನಲ್ಲಿ ಕ್ಯುಬಿಕುಲೋ ಆಪರೇಟ್ ಮಾಡುತ್ತಿತ್ತು. ಅದರಲ್ಲಿ ಸುಮಾರು ನೂರು ಜನರು ಕುಳಿತುಕೊಳ್ಳಬಹುದಿತ್ತು. ಅಂತದ್ದು 200-

300ರಷ್ಟು ಥಿಯೇಟರ್‌ಗಳಿದ್ದವು. ಅಲ್ಲಿನ ರಂಗಕರ್ಮಿಗಳಲ್ಲಿ ಹವ್ಯಾಸಿತನವೆಂಬುದಿರಲಿಲ್ಲ, Professionalism ಇತ್ತು. ಯುರಿಪೆಡಿಸ್ (Euripedus)ನ 'ಟ್ರೋಜನ್ ವುಮೆನ್' ಒಂದು ಮಲ್ಟಿಮೀಡಿಯಾ ಪ್ರೊಡಕ್ಷನ್ ಆಗಿದ್ದು ಅದರ ನಿರ್ದೇಶನ ಮತ್ತು ವಿನ್ಯಾಸವನ್ನು ನಿರ್ವಹಿಸಿದ್ದರು. ಬ್ರಾಡ್ವೆಯ ಮಹತ್ವದ ಕೊಡುಗೆಯಾದ 'ಗ್ರಾಮರ್ಸಿಗೋಸ್ಟ್' (Gramercie Ghost) ಒಂದು ದೆವ್ವದ ಕಥಾನಕವನ್ನು ಹೊಂದಿದ್ದಿತು. 'ಗ್ರೊಟೆಸ್ಕರಿ' (Grotesquerie) ಪ್ರದರ್ಶನದ ನಿರ್ಮಾಣದಲ್ಲಿಯೂ ಶ್ರೀ ರಾಮಮೂರ್ತಿಯವರು ತಮ್ಮ ಛಾಪನ್ನು ಒತ್ತಿದ್ದರು. 'ಗ್ರೊಟೆಸ್ಕರಿ'ಯವನ್ನು ಬರೆದವರು ಕಾನ್ಸಸ್ (Cansas) ರಾಜ್ಯದ Hays ಎಂಬ ಊರಿನ ರಾಜ್ಯದ ಪ್ರಾಧ್ಯಾಪಕಿಯಾಗಿದ್ದ Harriet Ketchen ಅವರು. ಇದು ವೃದ್ಧಾಶ್ರಮದಲ್ಲಿರತಕ್ಕಂಥ ವೃದ್ಧರ ಕುರಿತ ನಾಟಕ. ಇದನ್ನು Produce ಮಾಡಿದ ಸಂಸ್ಥೆಯ ಹೆಸರು 'The Drama Tree'; ನಿರ್ಮಾಪಕ : Tenny Potenz). ಅವರು ಹೊನಲೂಲುವಿನ ಏಷ್ಯನ್ ಥಿಯೇಟರ್ ಫೆಸ್ಟಿವಲ್‌ಗಾಗಿ ಮತ್ತು ನ್ಯೂಯಾರ್ಕ್‌ನ ಕ್ಯುಬಿಕುಲೋಗಾಗಿ ಶ್ರೀರಂಗರ 'ಸ್ವಗತ ಸಂಭಾಷಣೆ' ಏಕಾಂಕವನ್ನು 'Inside out' ಎಂಬುದಾಗಿ ಅನುವಾದಿಸಿ ರಂಗಕ್ಕೂ ತಂದು ಬೆಳಕು ವಿನ್ಯಾಸದೊಂದಿಗೆ ನಿರ್ದೇಶಿಸಿದ್ದರು. ಶ್ರೀ ರಾಮಮೂರ್ತಿಯವರು ಅಮೆರಿಕದಲ್ಲಿದ್ದಂದು ಶ್ರೀರಂಗ - ಕೈಲಾಸಂರವರನ್ನು ಅಲ್ಲಿಯ ಜನರಿಗೆ ಪರಿಚಯಿಸಿದ್ದರು.

ಗ್ರೀಕ್ ನ್ಯಾಷನಲ್ ಥಿಯೇಟರ್‌ನ ನಟ, ನಿರ್ದೇಶಕರಾಗಿದ್ದಂಥ ನಟ ಅಲೆಕ್ಸಿಸ್ ಮಿನೊಟಿಸ್ (Alexis Minotis) ಮತ್ತು ಅವರ ಮಡದಿ, ಗ್ರೀಕ್ ಮಹಿಳೆ ಕಟೀನಾ ಪಾಕ್ಸಿನೋವ್ (Katina Pauxinou 1900-73) ಅವರು ಅತ್ಯುತ್ತಮ ನಟ-ನಟಿಯರಾಗಿದ್ದು ಅವರೊಡನೆ ಶ್ರೀ ರಾಮಮೂರ್ತಿಯವರ ಒಡನಾಟವಿದ್ದಿತು. ಅಲೆಕ್ಸಿ ಕಟೀನಾ ಅವರು ವಿಲಿಯಂ ಷೇಕ್ಸ್‌ಪಿಯರ್‌ನ 'ಮರ್ಚೆಂಟ್ ಆಫ್ ವೆನಿಸ್' ನಾಟಕದ ಗ್ರೀಕ್ ಭಾಷೆಯ ಪ್ರದರ್ಶನದಲ್ಲಿ ಶೈಲಾಕ್ ಪಾತ್ರವನ್ನು ನಿರ್ವಹಿಸುತ್ತಿದ್ದರು. ಅವರು ಗ್ರೀಸ್ ದೇಶದ ಸರಕಾರವು ನಡೆಸುತ್ತಿದ್ದ 'The Greek National Theatre' ಸಂಸ್ಥೆಯ ನಿರ್ದೇಶಕರಾಗಿದ್ದರು. ಈ ದಂಪತಿಗಳು ಪ್ರಾಚೀನ ಗ್ರೀಕ್ ನಾಟಕಗಳನ್ನು ನಿರ್ದೇಶಿಸಿ, ಅಭಿನಯಿಸಿ ಪ್ರದರ್ಶಿಸುತ್ತಿದ್ದರು.

ಶ್ರೀ ರಾಮಮೂರ್ತಿಯವರು ತಮ್ಮ ವ್ಯಾಪಕ ವಿದೇಶ ವಾಸ ಪ್ರವಾಸದ ಅವಧಿಯಲ್ಲಿ ಅಮೆರಿಕ (ನ್ಯೂಯಾರ್ಕ್‌ನಲ್ಲಿ 1968-71) ಹಾಗೂ ಯುರೋಪ್ ಖಂಡದ ಪ್ರಮುಖ ಸ್ಥಳಗಳಾದ ಲಂಡನ್, ಪ್ಯಾರಿಸ್, ರೋಂ, ಡಬ್ಲಿನ್, ವೆನಿಸ್ ಮತ್ತು ಅಥೆನ್ಸ್ ಮುಂತಾದೆಡೆಗಳಲ್ಲಿನ ಪ್ರಮುಖ ರಂಗಕೇಂದ್ರಗಳಿಗೆ ಭೇಟಿಯಿತ್ತು ಬಹಳ ದೀರ್ಘ ಹಾಗೂ

ಆಳವಾದ ರಂಗಾಧ್ಯಯನವನ್ನು ಕೈಗೊಂಡು ನಿಷ್ಣಾವಂತ ಹಾಗೂ ನಿಷ್ಣಾತರಾಗಿರುವರು. ಅಲ್ಲದೆ ರಷ್ಯಾ, ಸ್ವೀಡನ್, ಫ್ರಾನ್ಸ್ ದೇಶಗಳಲ್ಲಿ ಭಾರತ ಸರಕಾರದ ಸ್ವಾಯತ್ತ ಸಂಸ್ಥೆ Indian Council for Cultural Relations (ICCR) ಆಯೋಜಿಸಿದ್ದ Festival of India ಹಾಗೂ ಅದೇ ಸಂಸ್ಥೆ ಆಯೋಜಿಸಿದ್ದ (1984-85) ರಷ್ಯನ್ Festivalಗಳಲ್ಲಿ ರಂಗ ಹಿನ್ನೆಲೆಯ ತಾಂತ್ರಿಕ ನಿರ್ದೇಶಕನಾಗಿ (ಬೆಳಕು ಮತ್ತು ಶಬ್ದವಿನ್ಯಾಸ) ಕಾರ್ಯವೆಸಗಿದ್ದಾರೆ. ಇದೊಂದು ದೊಡ್ಡ ಜವಾಬ್ದಾರಿ ಕೆಲಸ. ಅವರು ಇಂಡಿಯಾಕ್ಕೆ ಹಿಂದಿರುಗಿ ಬರುತ್ತಿದ್ದಾಗ (ನವೆಂಬರ್ 1971) ಬೆಂಗಳೂರಿನವರೇ ಆಗಿದ್ದು, ಲಂಡನ್‌ನಲ್ಲಿ ವಾಸ್ತವ್ಯವನ್ನು ಹೂಡಿದ್ದ ಸುಪ್ರಸಿದ್ದ ನೃತ್ಯ ಕಲಾವಿದ ರಾಂಗೋಪಾಲ್ ಅವರು ಪ್ಯಾರಿಸ್ ನಗರದಲ್ಲಿರುವ ಸುಮಾರು 3000 ಪ್ರೇಕ್ಷಕರು ಕುಳಿತುಕೊಳ್ಳಬಹುದಾಗಿದ್ದಂತಹ ಹಳೇಕಾಲದ ರಂಗಮಂದಿರ Theatre Champs Elyscsನಲ್ಲಿ ನೃತ್ಯ ಪ್ರದರ್ಶನವನ್ನು ನೀಡಲು ಪ್ರಾರಂಭಿಸಿದರು. ಅವರ ಜೊತೆಯಲ್ಲಿ ಭರತನಾಟ್ಯ ಕಲಾವಿದೆ ಸರೋಜಾ ಖೋಕರ್ ಮತ್ತು ಕೂಚುಪುಡಿ ನೃತ್ಯ ಕಲಾವಿದೆ. ರತ್ನ ಪಾಪ ಅವರು ನೃತ್ಯಾಭಿನಯ ನೀಡಿದರು. ಶ್ರೀ ರಾಮಮೂರ್ತಿಯವರು ಈ ನೃತ್ಯೋತ್ಸವಕ್ಕೆ ಬೆಳಕು ವಿನ್ಯಾಸ ಮಾಡಿದ್ದರು.

### ಸ್ವದೇಶದತ್ತ ರಂಗಚಿತ್ತ

1-1-1972ರಂದು ಭಾರತಕ್ಕೆ ಮರಳಿಬಂದ ಶ್ರೀ ರಾಮಮೂರ್ತಿಯವರು ತಾವು ಗಳಿಸಿದ ವಿಶೇಷ ವಿದೇಶಿ ರಂಗತರಬೇತಿ ಕಾರ್ಯವಿಧಾನ ಮತ್ತು ಅನುಭವದ ಜ್ಞಾನವನ್ನು ಸ್ವದೇಶಿ ರಂಗಭೂಮಿಯ ಪುರೋಭಿವೃದ್ಧಿ ಅಭಿಯಾನಕ್ಕಾಗಿ ವಿನಿಯೋಗಿಸಲು ದೃಢ ಸಂಕಲ್ಪತೊಟ್ಟರು. ರಂಗಭೂಮಿಯ ನೇಪಥ್ಯರಂಗದ ಎಲ್ಲ ವಿಧಗಳ ಆಯಾಮಗಳು, ಮಗ್ಗುಲು ಮಜಲುಗಳಲ್ಲಿ ತೀವ್ರವಾದ ಅನುಭವವನ್ನು ಹೊಂದಿದವರಾಗಿ ಭಾರತೀಯ ಅರ್ಥಾತ್ ಕನ್ನಡ ರಂಗಭೂಮಿಯ ಉತ್ಕರ್ಷದಲ್ಲಿ ತಮ್ಮನ್ನು ಕಾಯಾ ವಾಚಾ ಮನಸಾ ತೊಡಗಿಸಿಕೊಂಡರು. ಅವರು ಸಂಗೀತ ಸಂಯೋಜನೆ, ಬೆಳಕು ವಿನ್ಯಾಸ, ರಂಗಸಜ್ಜಿಕೆ, ಉಡುಪು ವಿನ್ಯಾಸ, ಪ್ರಸಾಧನ, ಗಾಯನ, ನಿರ್ದೇಶನ ಹೀಗೆ ನಾಟಕ ನಿರ್ಮಾಣದ ಹಾಗೂ ಪ್ರದರ್ಶನಕ್ಕೆ ಅಗತ್ಯವಾಗಿ ಬೇಕಾಗಿರುವ ಎಲ್ಲಾ ಪೂರಕ ಅಭ್ಯಾಸ - ಅಧ್ಯಯನಗೈದು ರಂಗಭೂಮಿಯ ಸರ್ವಾಂಗೀಣ ಬೆಳವಣಿಗೆಗೆ ನೀಡಿರುವ ಕೊಡುಗೆ ಅತ್ಯಂತ ಮಹತ್ವದ್ದು. ನಟನೆ, ನೃತ್ಯ, ಧ್ವನಿ ವಿನ್ಯಾಸ ಹಾಗೂ ಹಾಡುಗಾರಿಕೆಯತ್ತಲೂ ವಿಶೇಷ ಆಸ್ಥೆ - ಪರಿಣತಿಯನ್ನು ಹೊಂದಿರುವ ಬಹುಮುಖ ವ್ಯಕ್ತಿತ್ವದ ರಂಗಸಂಪನ್ನ ಮತ್ತು ರಂಗಸಖನಾಗಿದ್ದರೂ ಮಾಗಿದ ಮನಸ್ಸಿನ ವಿನಯ ಸಂಪನ್ನತೆ ಮತ್ತು ಮುತ್ಸದ್ದಿತನವನ್ನು ಸದಾ ಕಾಪಿಟ್ಟುಕೊಂಡು ಬಂದವರು ಶ್ರೀ ರಾಮಮೂರ್ತಿಯವರು.

ಅವರು 2-1-1972ರಂದೇ ಬೆಂಗಳೂರಿಗೆ ಆಗಮಿಸಿದರು. ಅಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ಮತ್ತು ಅದರ ಕಕ್ಷೆಯ ಸುತ್ತಮುತ್ತಲಿನಲ್ಲಿ ರಿಪೇರಿ ಕೆಲಸ ಕಾರ್ಯಗಳಾಗುತ್ತಿದ್ದ ಕಾರಣ ಪರ್ಯಾಯವಾಗಿ ಅದರ ಹಿಂಬದಿಯಲ್ಲಿ ಬಯಲು ರಂಗಭೂಮಿಯನ್ನು ನಿರ್ಮಿಸುವ ಕಲ್ಪನೆ ಆಲೋಚನೆಗಳು ಒಡಮೂಡಿದವು. ಅದು ಅವರ ಅನುಭವ ಮತ್ತು ಲಭ್ಯವಿದ್ದ ಅನುಕೂಲಗಳ ಸಾಧ್ಯಾಸಾಧ್ಯತೆಗಳ ಇತಿಮಿತಿ ಪರಿಮಿತಿಗಳ ಅಂತರ ನಂತರದಲ್ಲಿ ಸ್ಪಷ್ಟ ರೂಪರೇಷೆಗಳನ್ನು ತಾಳಿತು. 'ಪ್ರತಿಮಾ ನಾಟಕ ರಂಗ' ಸಂಘಟಿಸಿದ್ದ ನಾಟಕೋತ್ಸವದಲ್ಲಿ 11, 12 ಫೆಬ್ರವರಿ 1972ರಂದು ಬಿ.ವಿ. ಕಾರಂತರ ನಿರ್ದೇಶನದಲ್ಲಿ ಡಾ. ಚಂದ್ರಶೇಖರ ಕಂಬಾರರ 'ಜೋಕುಮಾರಸ್ವಾಮಿ', ಪಿ. ಲಂಕೇಶರ 'ಸಂಕ್ರಾಂತಿ' ಮತ್ತು ಸಾಫೋಕ್ಲೀಸ್‌ನ 'ಈಡಿಪಸ್ ರೆಕ್ಸ್' (ಅನುವಾದ : ಪಿ. ಲಂಕೇಶ್) ನಾಟಕಗಳು ಪ್ರದರ್ಶನಕಂಡವು. ಅವುಗಳಿಗೆ ಶ್ರೀ ರಾಮಮೂರ್ತಿಯವರು ನೀಡಿದ ಬೆಳಕು ವಿನ್ಯಾಸವು ಹೊಸ ಆಯಾಮವಾಗಿ ಒಂದು ಮೈಲಿಗಲ್ಲಾಗಿ ಪರಿಣಮಿಸಿತು. ಅಲ್ಲದೆ ಅದು ದಕ್ಷಿಣ ಭಾರತದ ಹಾಗೂ ವಿಶೇಷವಾಗಿ ಕರ್ನಾಟಕ ರಂಗಭೂಮಿಗೆ ನೀಡಿದ ಹೊಸ ತಿರುವು ಮತ್ತು ಮೂಡಿಸಿದ ಹೊಸ ಅರಿವು ನವಮನ್ವಂತರಕ್ಕೆ ಕಾರಣೀಭೂತವಾಯಿತು. 'ಜೋಕುಮಾರಸ್ವಾಮಿ' ನಾಟಕದಲ್ಲಿ ಹಳ್ಳಿಯ ವಾತಾವರಣವನ್ನು ನಿರ್ಮಾಣ ಮಾಡಲು ಮರದ ಪ್ಲಾಟ್‌ಫಾರಂಗಳನ್ನು ಬಳಸಿ ದಿಣ್ಣೆಯನ್ನು ನಿರ್ಮಿಸಲಾಗಿದ್ದಿತು. ಪಂಜನ್ನು ಮತ್ತು ಎಲೆಕ್ಟ್ರಿಕ್ ದೀಪಗಳನ್ನು ಇಡಲು ಕಂಬಗಳನ್ನು ನಿಲ್ಲಿಸಿ ಲಭ್ಯವಿದ್ದ ಹಳೆಯ ಹಾಗೂ ಹೊಸ ಪರಿಕರಗಳನ್ನು ಕ್ರೋಢೀಕರಿಸಿಕೊಂಡು ನಾಟಕದ ಸೆಟ್ ಅನ್ನು ಕಟ್ಟಲಾಗಿದ್ದಿತು. ಪಂಜನ್ನು ಎರಡು ಸಾರಿ ಬಳಸಲಾಗಿದ್ದಿತು. ಮೂರೂ ಕಡೆಗಳಲ್ಲಿ ಪ್ರೇಕ್ಷಕರು ಕುಳಿತುಕೊಳ್ಳಲು ಅಂಕಣವನ್ನು ಸಂಯೋಜಿಸಲಾಗಿದ್ದಿತು. ಇದರ ಪ್ರದರ್ಶನದಲ್ಲಿ ಬಯಲಾಟದ ಆಗತ್ಯಪೂರ್ಣ ಅಂಶಗಳನ್ನು ಉಳಿಸಿಕೊಂಡು ರಂಗಸಂಪಹನ ಲಕ್ಷಣಗಳನ್ನು ಕಾಯ್ದುಕೊಳ್ಳಲಾಗಿದ್ದಿತು. ಪಾತ್ರಗಳ ನಡುವೆಯ ಸಂಭಾಷಣಾ ಭಾಷೆ ಬಳಕೆಯಾದರೂ ನಾಟಕೀಯವಾಗಿದ್ದು ಅನಗತ್ಯ ವ್ಯಾಕರಣ ಲಕ್ಷಣಗಳಿಂದ ದೂರವಾಗಿದ್ದಿತು. ಈ ನಾಟಕದಲ್ಲಿ ಚಂದ್ರಶೇಖರ ಕಂಬಾರ ಮತ್ತು ಬಿ.ವಿ. ಕಾರಂತರು ಸೂತ್ರಧಾರರ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಗಿರೀಶ್ ಕಾರ್ನಾಡ್ ಗೌಡನಾಗಿ ಅಭಿನಯಿಸಿದ್ದರು. ಅವರೊಂದಿಗೆ ಉಮೇಶ್ ರುದ್ರ, ಶಾರದಾ ರುದ್ರ, ಟಿ.ಎಸ್. ನಾಗಾಭರಣ ಮತ್ತು ಟಿ.ಎಸ್. ರಂಗಾ ಮುಂತಾದವರು ನೇಪಥ್ಯ ಕೆಲಸವನ್ನು ಸಮರ್ಥವಾಗಿ ನಿರ್ವಹಿಸುವುದರೊಂದಿಗೆ ಅಭಿನಯಿಸಿದ್ದರು ಕೂಡಾ. 'ಸಂಕ್ರಾಂತಿ' ನಾಟಕದಲ್ಲಿ ರವೀಂದ್ರ ಕಲಾಕ್ಷೇತ್ರದ ಉತ್ತರ ಭಾಗದ ಹೊರಾಂಗಣವನ್ನು ಕೂಡ ವೇದಿಕೆಯನ್ನಾಗಿ ಬಳಸಿಕೊಳ್ಳಲಾಗಿತ್ತು. ಅದರ ಮೆಟ್ಟಿಲುಗಳ ಮುಂಭಾಗವನ್ನು

ಪ್ರದರ್ಶನಕ್ಕಾಗಿ ಬಳಸಿಕೊಳ್ಳಲಾಗಿತ್ತು. ಈ ನಾಟಕದಲ್ಲಿ ಪ್ರೊ. ಕಾಂತರಾಜು, ಬಿ.ವಿ. ಕಾರಂತ (ಉಜ್ಜ) ಮತ್ತು ಯು.ಕೆ. ಜಯದೇವ್ (ಕೆಮಿಸ್ಟ್ರಿ ಪ್ರೊ. ಯು.ಎಸ್. ಕೃಷ್ಣರಾವ್ ಮತ್ತು ಚಂದ್ರಭಾಗಾದೇವಿಯವರ ಮಗ) ಅವರು ಪಾತ್ರ ನಿರ್ವಹಿಸಿದ್ದರು. 'ಈಡಿಪಸ್' ನಾಟಕದಲ್ಲಿ ರವೀಂದ್ರ ಕಲಾಕ್ಷೇತ್ರ ಕಟ್ಟಡದ ಕಂಭಗಳ ಮುಂಭಾಗದಲ್ಲಿ ಪ್ರದರ್ಶಿಸಿ ಕಡಿಮೆ ಕಲರ್ ಲೈಟನ್ನು ಬಳಸಿದುದು ಅರ್ಥವತ್ತಾಗಿ ಸಾಂಕೇತಿಕವಾಗಿದ್ದಿತು. ನೆರಳು ಬೃಹತ್ ಆಗುವುದನ್ನು ನಾಟಕದ ವಸ್ತುವಿನಲ್ಲಿನ, 'ತಾನು ಮಾಡಿದ ಪಾಪಗಳು ತನ್ನನ್ನೇ ಬೆನ್ನುಹತ್ತಿ ಬರುತ್ತವೆ'ಯೆಂಬುದನ್ನು ಸೂಚಕವಾಗಿ ಬಳಸಲಾಗಿದ್ದಿತು. ಅಲ್ಲಿನ ರೋಲಿಂಗ್ ಶಟರ್ ಭಾಗವನ್ನು ಸೈಕ್ಲೋರಮಾವಾಗಿ ಬಳಸಲಾಗಿತ್ತು. ಯಾವಾಗಲೂ ದೃಶ್ಯಕ್ಕೆ ತಕ್ಕ ಹಾಗೆ ಲೈಟಿಂಗ್ ಮಾಡಬೇಕು ಎಂಬುದು ಶ್ರೀ ರಾಮಮೂರ್ತಿಯವರ ಹೆಬ್ಬಯಕೆ. ಸಂಗೀತದಲ್ಲಿ ತಾಳ ಮತ್ತು ಲಯ ಸುಬದ್ಧವಾಗಿರಬೇಕು. ಅದನ್ನು ಡಿಕ್ಟೇಟ್ ಮಾಡುವವರು ನಿರ್ದೇಶಕರು ಮತ್ತು ಶಬ್ದ ಪರಿಣಾಮ (sound effect)ವನ್ನುಂಟುಮಾಡುವವರು ನೇಪಥ್ಯಗಾರರು. ಈ ನಾಟಕದಲ್ಲಿ ಗಿರೀಶ್ ಕಾರ್ನಾಡ್ ಅವರು ಈಡಿಪಸ್ ಪಾತ್ರದಲ್ಲಿದ್ದರು. ಯೊಕಾಸ್ತಾ ಪಾತ್ರವನ್ನು ಸರೋಜ, ಕ್ರೆಯಾನ್ ಪಾತ್ರವನ್ನು ಲೋಕನಾಥ್, ತ್ರಿಕಾಲಜ್ಞಾನಿ ಕುರುಡ ಟೈರೀಷಿಯಸ್ ಪಾತ್ರವನ್ನು ಬಿ.ಸಿ.ಯವರು ನಿರ್ವಹಿಸಿದ್ದರು. ಆರ್. ನಾಗೇಶ್‌ರವರು ಕುಂಟನ ಸಣ್ಣ ಪಾತ್ರವನ್ನು ಮಾಡಿದ್ದರು. ಎಲ್ಲ ನಾಟಕಗಳಿಗೂ ಬಿ.ವಿ. ಕಾರಂತರು ಸಂಗೀತ ನಿರ್ದೇಶನ ಮಾಡಿದ್ದರು. ಈ ಮೂರು ನಾಟಕಗಳ ಧ್ವನಿವಿನ್ಯಾಸ ವ್ಯವಸ್ಥೆಗೆ ಎ.ಟಿ. ಪದ್ಮನಾಭರಾವ್ (ಪದ್ದಣ್ಣ) ಮತ್ತು ಅಬ್ಬೂರು ಜಯತೀರ್ಥ ಮುಂತಾದವರು ನೆರವಾಗಿದ್ದರು. ಗಿರೀಶ್ ಕಾರ್ನಾಡ್, ಟಿ.ಎಸ್. ರಂಗಾ, ಟಿ.ಎಸ್. ನಾಗಾಭರಣ, ಜೆ. ಲೋಕೇಶ್ ಮತ್ತು ಎಲ್. ಕೃಷ್ಣಪ್ಪ ಮುಂತಾದವರೊಡಗೂಡಲು ಬಯಲು ರಂಗಭೂಮಿಯು ಸಾಕಾರಗೊಂಡಿತು. 1972ರ ಬೇಸಿಗೆ ಸಂಜೆ ದಿನಗಳಂದು ಸಾಮಾನ್ಯರಿಂದ ಅಸಾಮಾನ್ಯರವರೆಗಿನ ಅಸಂಖ್ಯಾತ ಅಮಿತ ಆಸಕ್ತಿಯ ರಂಗಾಭಿಮಾನಿಗಳು ಪ್ರತಿದಿನದ ಎರಡೂ ಪ್ರಯೋಗಗಳಿಗೆ ಮೂರೂ ದಿನಗಳು ರವೀಂದ್ರ ಕಲಾಕ್ಷೇತ್ರ ಮತ್ತು ಪುರಭವನದ ನಡುವೆ ನೆಟ್ಟ ತಡಿಕೆಗಳ ನಡುವೆ ಸಾಲುಗಟ್ಟಿ ನಿಂತು ಟಿಕೆಟ್ ಪಡೆದು ನಾಟಕ ಪ್ರದರ್ಶನಗಳನ್ನು ವೀಕ್ಷಿಸಿದರು. ಅದು ಕಲಾವಿದರ ಅಭಿನಯ ಮತ್ತು ಅನುಭವ ಮೇಳೈಸಿದ್ದ ಅಪೂರ್ವ ಐತಿಹಾಸಿಕ ರಂಗಸಂಘಟನೆ. ಈ ಪ್ರದರ್ಶನಗಳು ಒಂದು ತಿಂಗಳ ನಂತರ ಪುನರ್‌ಪ್ರಯೋಗಗೊಂಡವು.

ಶ್ರೀ ರಾಮಮೂರ್ತಿಯವರ ಕಾರ್ಯಪಟುತ್ವದಿಂದ ಯಾವುದೇ ಒಂದು ಉತ್ತಮ ರಂಗಪ್ರಯೋಗಕ್ಕೆ ನೇಪಥ್ಯಗಾರನ ಕೊಡುಗೆಯೂ ಬಹುಮುಖ್ಯವಾದುದೆಂಬುದರ ಅರಿವು ನಿರ್ಮಾಪಕರಲ್ಲಲ್ಲದೆ ಪ್ರೇಕ್ಷಕ - ವೀಕ್ಷಕ - ಸಮೀಕ್ಷಕ - ಸಂದರ್ಶಕ

ಮಹಾಶಯರಾದಿಯಾಗಿ ಎಲ್ಲರಲ್ಲಿಯೂ ಇರಬೇಕೆಂಬುದು ಸುವ್ಯಕ್ತವಾಯಿತು. ಬಯಲು ರಂಗಭೂಮಿಯ ಕಲ್ಪನೆ, ಪರಿಕಲ್ಪನೆ ಪ್ರಯೋಗಶೀಲತೆಯಿಂದಾಗಿ ಯಶಸ್ವೀ ರಂಗಪ್ರದರ್ಶನದ ಪೂರಕ ಅಂಶಗಳು ಸ್ಪಷ್ಟಗೊಂಡವು. ಅವರ ಅಂದಿನ ಸಂದರ್ಭದ ಉದ್ಗಾರವು ಇಂತಿದೆ : 'I Worked in the worst conditions as well as in the best conditions of theatres in the world.' ಅವರು ಸ್ವಯಂ ಪಟ್ಟ ಪಡಿಪಾಟಲು ಮತ್ತು ಮೆಟ್ಟಿದ ಯಶಸ್ಸಿನ ಮೆಟ್ಟಿಲ ಹಾದಿಯು ರಂಗಭೂಮಿಯ ನೈಜ ಚಿತ್ರಣವನ್ನು ನೀಡಿತೆನ್ನಬಹುದು.

ಬಯಲು ರಂಗಭೂಮಿಯು ಮೈತಾಳಿದ ಸ್ಫೂರ್ತಿಯ ಪರಿಣಾಮವಾಗಿ 'ಬೆನಕ', 'ರಂಗಸಂಪದ' ಮತ್ತು 'ನಟರಂಗ'ದಂಥ ಹೆಸರಾಂತ ಕ್ರಿಯಾಶೀಲ ರಂಗತಂಡಗಳು ಜನ್ಮತಾಳಿದವು.

**ರಂಗಬೆಳಕು = ರಾಮಮೂರ್ತಿ**

ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ನೇಪಥ್ಯತಜ್ಞ ಶ್ರೀ ರಾಮಮೂರ್ತಿಯವರು ರಂಗಭೂಮಿಯಲ್ಲಿ ಪ್ರಮುಖವಾಗಿ ಖ್ಯಾತ ಬೆಳಕುವಿನ್ಯಾಸ ತಜ್ಞರೆಂದೇ ಗುರುತಿಸಲ್ಪಟ್ಟವರು. ದೀಪ ದೀಪಗಳ ರಾಶಿಯ ಮಹಾಮೇಳದಲ್ಲಿ ನೆರಳನ್ನು ತೊಡೆದುಹಾಕಿ ಬೆಳಕನ್ನು ಎಲ್ಲೆಡೆ ಬೀರುವಲ್ಲಿ ಸಂತೃಪ್ತಿಯನ್ನು ಕಂಡವರು, ಜ್ಯೋತಿಸ್ವರೂಪರು. ಅವರು ಇಂಡಿಯಾದ ತುಂಬೆಲ್ಲಾ ಸುಮಾರು ಐವತ್ತಕ್ಕೂ ಮಿಕ್ಕ ರಂಗಮಂದಿರಗಳು, ಕಲಾಕ್ಷೇತ್ರಗಳಿಗೆ ಹಾಗೂ ಬೆಂಗಳೂರಿನಲ್ಲಿಯೇ ಸುಮಾರು ಇಪ್ಪತ್ತಕ್ಕೂ ಮಿಕ್ಕ ಥಿಯೇಟರುಗಳಿಗೆ ಬೆಳಕು ವ್ಯವಸ್ಥೆ ಮತ್ತು ಸಮಗ್ರ ರಂಗಾನುಕೂಲಗಳ ತಾಂತ್ರಿಕ ವಾಸ್ತುವಿನ್ಯಾಸರಚನೆಗೈದಿರುವರು, ಸುಸಜ್ಜಿತಗೊಳಿಸಿರುವರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಪ್ರಾರಂಭಿಕ ಹಂತದಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ, ಹೆಚ್.ಎನ್. ಕಲಾಕ್ಷೇತ್ರ, ಡಾ. ಅಂಬೇಡ್ಕರ್ ಭವನ, ಗುರುನಾನಕ್ ಭವನ, ಯವನಿಕಾ, ಶ್ರೀ ಜಗದ್ಗುರು ರೇಣುಕಾಚಾರ್ಯ (ಎಸ್.ಜಿ.ಆರ್.) ಕಾಲೇಜು ಸಭಾಂಗಣ, ತೆಲುಗು ವಿಜ್ಞಾನ ಸಮಿತಿ ಸಭಾಂಗಣ (ಭಾಗಶಃ), ಶ್ರೀ ಕೃಷ್ಣದೇವರಾಯ ಕಲಾಕ್ಷೇತ್ರಮು, ಗಾಯನ ಸಮಾಜ, ಗವಿಪುರ ಗುಟ್ಟಹಳ್ಳಿ ರಂಗಮಂದಿರ, ಚೌಡಯ್ಯ ಸ್ಮಾರಕ ಭವನ, ಎ.ಡಿ.ಎ. ರಂಗಮಂದಿರ, ಯಲಹಂಕ ಕಾರ್ಪೋರೇಷನ್ ರಂಗಮಂದಿರ, ಡಾ. ಗುಬ್ಬಿ ವೀರಣ್ಣ ಥಿಯೇಟರ್, ಎಂ.ಇ.ಎಸ್. ಕಿಶೋರ ಕ್ರೇಂದ್ರ, ತರಳಬಾಳು ಕೇಂದ್ರ, ಕನ್ನಡ ಭವನದ ನಯನ ಗ್ಯಾಲರಿಯಲ್ಲದೆ ನೆರೆಯ ಆಂಧ್ರ ರಾಜ್ಯದ ವಿಶಾಖಪಟ್ಟಣಂ ನೃತ್ಯ ಮತ್ತು ಸಂಗೀತ ನಾಟಕ ಅಕಾಡೆಮಿ ಸಭಾಂಗಣ, ವಿಶಾಖಪಟ್ಟಣಂ ಪೋರ್ಟ್ ಟ್ರಸ್ಟ್

ಸಭಾಂಗಣ, ವಿಜಯವಾಡದ ತುಮ್ಮಲಪಲ್ಲಿವಾರಿ ಕ್ಷೇತ್ರಯ್ಯ ಕಲಾಕೇಂದ್ರಮು ಮತ್ತು ಹೈದರಾಬಾದ್‌ನ ಸುಂದರಯ್ಯ ವಿಜ್ಞಾನ ಕೇಂದ್ರಮು ಮುಂತಾದವು. ಅಲ್ಲದೆ ಅವರು ಮದರಾಸ್ ಅಡ್ಯಾರ್, ವುಮೆನ್ಸ್ ಕ್ರಿಶ್ಚಿಯನ್ ಕಾಲೇಜು, ಮದರಾಸ್ ಮ್ಯೂಸಿಕ್ ಅಕಾಡೆಮಿ ಥಿಯೇಟರ್, ಉತ್ತರ ಪ್ರದೇಶ ಮಥುರಾ ಜಿಲ್ಲೆಯ ಬೃಂದಾವನದಲ್ಲಿನ ರಾಂಜೀವಿ ಸತ್ಸಂಗ್ ಮಂದಿರ್, ದೆಹಲಿಯ ಬಾಲಭಾರತಿ ಪಬ್ಲಿಕ್ ಸ್ಕೂಲ್ ವೇದಿಕೆಗೆ ಬೆಳಕು ವಿನ್ಯಾಸಗೈದಿರುವರು. ತಮಗೆ ಹಣಬರಲಿ ಬರದಿರಲಿ ಹಿಡಿದ ರಂಗಭೂಮಿಯ ಕೆಲಸವು ನಿಲ್ಲದೆ ಮುಗಿಯಲೇಬೇಕೆಂದು ಪಣತೊಟ್ಟು ಮುಂದುವರೆದಿದ್ದಾರೆ. ಇನ್ನು ಕೆಲವು ಕಡೆ ಹಣದ ತೊಂದರೆಯಿಂದ ಕೆಲಸ ಮಾಡದಿರುವುದೂ ಉಂಟು. ಕೆಲವು ಕಡೆ ಅವರ ಪ್ರಕಾರದಂತೆ ಹಾಗೂ ಮತ್ತೆ ಕೆಲವು ಕಡೆಗಳಲ್ಲಿ ತದ್ವಿರುದ್ಧವಾಗಿ ಮಾಡಿರುವುದೂ ಉಂಟು.

ಮಧ್ಯಪ್ರದೇಶದ ಸುಲ್ತಾನ್‌ಪುರದಲ್ಲಿ ಹಳೆಯ ಪುರಾತನ ವಾಸ್ತುಶಿಲ್ಪಾನ್ವಯ ಪ್ಯಾಲೇಸ್‌ಗಳಿಗೆ ಮತ್ತು ಖಜುರಾಹೋದಲ್ಲಿ 5 ನೃತ್ಯೋತ್ಸವಗಳು ಹಾಗೂ ಪುರಾತನ ಸ್ಮಾರಕಗಳಿಗೆ, ವೇದಿಕೆಗಳಿಗೆ, ಶಾಸ್ತ್ರೀಯ ನೃತ್ಯೋತ್ಸವಗಳಿಗೆ ಗ್ವಾಲಿಯರ್‌ನ 6 ವಾಣಿಜ್ಯೋದ್ಯಮ ಜಾತ್ರೆಮೇಳ (Trade Fairs)ಗಳಿಗೆ ಹಾಗೂ ಐತಿಹಾಸಿಕ ಸ್ಮಾರಕ ಕಟ್ಟಡಗಳಿಗೆ ಬೆಳಕು ವಿನ್ಯಾಸ ಮಾಡಿರುವರು. ಅವರು ಗ್ವಾಲಿಯರ್‌ನ Gauhar Mahalನಲ್ಲಿ ಮಧ್ಯಪ್ರದೇಶ ಸರಕಾರದ ಕುಶಲ ಕೈಗಾರಿಕೆಗಳ ಮಳಿಗೆಗಳಿಗಾಗಿ ಲೈಟಿಂಗ್ ವ್ಯವಸ್ಥೆ ಮಾಡಿರುವರು. ಲಕ್ನೋದಲ್ಲಿರುವ ಉತ್ತರಪ್ರದೇಶ ಸರಕಾರದ ಭಾರತೇಂದು ನಾಟಕ ಅಕಾಡೆಮಿಯಲ್ಲಿರುವ ಬಿ.ಎಂ. ಶಾ ರಂಗಮಂದಿರಕ್ಕೆ ಅಪೇಕ್ಷಿತ ಪ್ರಕಾರದಂತೆಯೇ ಬೆಳಕು ವ್ಯವಸ್ಥೆ ವಿನ್ಯಾಸ ಮಾಡಿರುವರು. ಶ್ರೀಯುತರು ಸಾಗರೋತ್ತರವಾಗಿ ICCR ವತಿಯಿಂದ ಸ್ವೀಡನ್ (Scandinavia), ಫ್ರಾನ್ಸ್, ಜರ್ಮನಿ ಮುಂತಾದ ಯುರೋಪ್ ದೇಶಗಳು ಹಾಗೂ ಅಮೆರಿಕದೆಡೆಗಳಲ್ಲಿ ನೆರವೇರಿದ ಕಲಾಮಹೋತ್ಸವಗಳ ರಂಗಪ್ರದರ್ಶನಗಳಿಗೆ ತಾಂತ್ರಿಕ ರಂಗವಿನ್ಯಾಸ ನಿರ್ದೇಶಕರಾಗಿದ್ದರು. ಅವರು ಓರ್ವ ಅಸೀಮ ಬೆಳಕು ತಜ್ಞನಾಗಿ ಮಹಾನ್ ನೃತ್ಯಪಟುಗಳಾದ ಪಂಡನಲ್ಲೂರು ಮೀನಾಕ್ಷಿ ಸುಂದರಂ ಶಿಷ್ಯರಾದ ಬೆಂಗಳೂರಿನ ರಾಂಗೋಪಾಲ್, ತಿರುವಾಂಕೂರು ಸಹೋದರಿಯರೆಂದು ವಿಖ್ಯಾತರಾದ ಭರತನಾಟ್ಯ ಕಲಾವಿದೆಯರಾದ ಲಲಿತ, ರಾಗಿಣಿ ಮತ್ತು ಪದ್ಮಿನಿ ರಾಮಚಂದ್ರನ್, ನ್ಯೂಯಾರ್ಕ್‌ನ ಅಪೇರಾದಲ್ಲಿ ಮಾಯಾ ಕುಲಕರ್ಣಿ, ಪಾಶ್ಚಿಮಾತ್ಯ ನೃತ್ಯಪಟುಗಳಾದ ಡೇನಿಯಲ್ ಕಾರ್ಡೋಬಾ (ಅಮೆರಿಕ), ವಿಯಾ ಪೆಟ್ರಾ, ಕಥಕ್ ನೃತ್ಯ ಖ್ಯಾತಿ ಯು.ಎಸ್. ಕೃಷ್ಣರಾವ್ ಮತ್ತು ಚಂದ್ರಭಾಗಾದೇವಿ, ಮಾಯಾರಾವ್, ಸೋನಾ ಮಾನಸಿಂಗ್, ಕೇಂದ್ರ ಸಂಗೀತ ಅಕಾಡೆಮಿಯ ಅಧ್ಯಕ್ಷರಾಗಿದ್ದ

ನೃತ್ಯಪಟು ಲೀಲಾ ಸ್ಯಾಮ್ಸನ್ ಮುಂತಾದವರು ನೀಡಿದ ನೃತ್ಯ ಪ್ರದರ್ಶನಗಳಿಗೆ ಬೆಳಕು ವಿನ್ಯಾಸಗೈದಿರುವುದಲ್ಲದೆ ಭಾರತಕ್ಕೆ ಭೇಟಿಯಿತ್ತು ಕಲಾಪ್ರವಾಸ ಕೈಗೊಂಡು ಅಮೆರಿಕದ ಪಾಲ್ ಟೇಲರ್ ಡ್ಯಾನ್ಸ್ ಕಂಪನಿಯ ಬೆಳಕು ಜೆನ್ನಿಫರ್ ಟಿಪ್‌ಟಾನ್ (Jennifer Tipton), ಜೊನೆಲ್ ಪೊಲಾನ್ಸ್ಕಿ (Jonel Polanski), ಜ್ಯೂಲಿಸ್ ಫಿಶರ್ (Jules Fischer), ಸಹಪಾಠಿಗಳಾಗಿ ಪ್ರೊ. ರಾಬರ್ಟ್ ಡೆನ್ಸನ್ (Prof. Robert Denson) ಹಾಗೂ ಮಾರ್ಗರೇಟ್ ಹೆಯ್‌ಮನ್ (Margaret Heyman) ಮುಂತಾದ ಅದ್ಭುತ ರಂಗಪರಿಣತರುಗಳಿಗಲ್ಲದೆ ಮರ್ಸ್ ಕನ್ನಿಂಗ್‌ಹ್ಯಾಮ್ ಡ್ಯಾನ್ಸ್ ಕಂಪನಿ, ಮಿನಿಸೋಟಾ ಅಪೇರಾ ಕಂಪನಿ ಮುಂತಾದವುಗಳಿಗೆ ಸಹಾಯಕರಾಗಿಯೂ ಹಾಗೂ ತಾಂತ್ರಿಕ ನಿರ್ದೇಶಕರಾಗಿಯೂ ನೆರವಾಗಿದ್ದಾರೆ.

ಬೆಂಗಳೂರಿನ ಮಲ್ಲೇಶ್ವರದಲ್ಲಿರುವ 'ಕೇಶವಕಲ್ಪ'ದಲ್ಲಿ ಪ್ರತಿ ತಿಂಗಳು ಮೂರನೆಯ ಭಾನುವಾರ ನೃತ್ಯ, ಸಂಗೀತ, ಗಾಯನ ಇತ್ಯಾದಿ ಯಾವುದಾದರೂ ಒಂದು ಸಾಂಸ್ಕೃತಿಕ ಕಾರ್ಯಕ್ರಮವು ಏರ್ಪಡಾಗುತ್ತಿತ್ತು. ಬಿ.ಕೆ. ರವಿಶಂಕರ ಮತ್ತು ಅವರ ಪತ್ನಿ ನೃತ್ಯಗಾರ್ತಿ ಡಾ. ಮಾಲಿನಿ ಶಂಕರ್ ಅವರು ಈ ಕೈಂಕರ್ಯದಲ್ಲಿ ಭಾಗಿಯಾಗಿದ್ದರು. ಇದನ್ನು ಸೃಷ್ಟಿ ಮಾಡಿಸಿದವರು ಬಿ.ಕೆ. ರವಿಶಂಕರ್ ಅವರು. ಡಾ. ಮಾಲಿನಿಶಂಕರ್ ಅವರು ದಾಸ ಸಾಹಿತ್ಯದ ಬಗ್ಗೆ ಪಿಹೆಚ್.ಡಿ. ಮಾಡಿದ್ದರು. ಬೆಂಗಳೂರಿನ ಮೊಟ್ಟಮೊದಲ ನೃತ್ಯ ಶಾಲೆಯನ್ನು ಪ್ರಾರಂಭಿಸಿದವರು ಹೆಚ್.ಆರ್. ಕೇಶವಮೂರ್ತಿಯವರು. ಅವರ ಕಡೆಯ ಮಗ ಬಿ.ಕೆ. ರವಿಶಂಕರ್‌ರವರ ನೃತ್ಯಶಾಲೆಯಲ್ಲಿ ವಿ. ರಾಮಮೂರ್ತಿಯವರು ಲೈಟಿಂಗ್ ತರಗತಿಯನ್ನು ನಡೆಸುತ್ತಿದ್ದರು. ರವಿಶಂಕರ್‌ರವರ ದೊಡ್ಡ ಅಕ್ಕನವರಾದಂಥ ಬಿ.ಕೆ. ವಸಂತಲಕ್ಷ್ಮಿ ಮತ್ತು ಅಣ್ಣನವರಾದ ಶ್ಯಾಮ್ ಪ್ರಕಾಶ್ ಅವರು ಕೇಶವ ನೃತ್ಯಶಾಲೆಯನ್ನು ಮುಂದುವರೆಸುತ್ತಿದ್ದಾರೆ.

ಪ್ರತಿಷ್ಠಿತ ಭಾರತೀಯ ನೃತ್ಯ ಸಂಸ್ಥೆಗಳಾದ ಬೆಂಗಳೂರಿನ 'ನೂಪುರ' (ಲೈಟಿಂಗ್, ಸೆಟ್ ಡಿಸೈನಿಂಗ್), ಮಾಯಾರಾವ್‌ರವರ ನಾಟ್ಯ ಇನ್ಸ್ಟಿಟ್ಯೂಟ್ ಫಾರ್ ಕಥಕ್ ಅಂಡ್ ಕೋರಿಯೋಗ್ರಾಫಿ (ಸ್ಥಾಪನೆ : 12 ಜುಲೈ 1981) (ಸೆಟ್ ಡಿಸೈನಿಂಗ್, ಲೈಟಿಂಗ್) ಮತ್ತು ದೆಹಲಿಯ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಒಂದು ಅಂಗವಾದ ಕಥಕ್ ಕೇಂದ್ರ ಮುಂತಾದವುಗಳು ನೀಡಿದ ಪ್ರದರ್ಶನಗಳಿಗೆ ರಂಗವಿನ್ಯಾಸ, ಬೆಳಕು ವಿನ್ಯಾಸ, ನೇಪಥ್ಯ ಕಾರ್ಯನಿರ್ವಹಿಸಿರುವರು. ಮುಂಬೈ ನ್ಯಾಷನಲ್ ಸೆಂಟರ್ ಫಾರ್ ಪರ್‌ಫಾರ್ಮಿಂಗ್ ಆರ್ಟ್ಸ್ (Mumbai National Centre For The Performing Arts - TATA Centre)ನಲ್ಲಿ ಹತ್ತು ದಿವಸಗಳ ಕಾರ್ಯಾಗಾರವೇರ್ಪಟ್ಟು ಎಂ.ಎಸ್. ಸತ್ಯು ಅವರು ಸೆಟ್‌ಡಿಸೈನ್ ಮತ್ತು ವಿ. ರಾಮಮೂರ್ತಿಯವರು ಅದರ ನಿರ್ದೇಶನವನ್ನು

ವಹಿಸಿಕೊಂಡು ಬೆಳಕು ವಿನ್ಯಾಸದ ಬಗ್ಗೆ ಬೆಳಕು ಚೆಲ್ಲಿರುವರು. ಈ ರಂಗಕಮ್ಮಟಿಕ್ಕೆ ಸುಪ್ರಸಿದ್ಧ ನೇಪಥ್ಯಪಟುಗಳಾದಂಥ Derick Jefries (ಲೈಟಿಂಗ್) ಹಾಗೂ ಇತರರು ಸಂದರ್ಶಕ ಪ್ರಾಧ್ಯಾಪಕರಾಗಿ ಆಗಮಿಸಿದ್ದರು. ಪು.ಲ. ದೇಶಪಾಂಡೆಯವರು ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದರು. ಪ್ರಸನ್ನರವರು ನಿರ್ದೇಶಿಸಿದ 'ತಾಯಿ' ನಾಟಕಕ್ಕೆ ಲೈಟಿಂಗ್ ಮಾಡಿದ್ದರು. ಬಿ.ವಿ. ಕಾರಂತರು ನಿರ್ದೇಶಿಸಿದ 'ಇಸ್ಪೀಟ್ ರಾಜಾ'ಕ್ಕಾಗಿನ ಸೆಟ್‌ಡಿಸೈನ್ ಮತ್ತು ಲೈಟಿಂಗನ್ನು ಪ್ರಶಂಸಿಸುತ್ತಾ 'ಪ್ರಜಾವಾಣಿ'ಯು 'ಕಾರಂತ - ರಾಮಮೂರ್ತಿಯವರ ಜಾದು' ಎಂದು ಕರೆದಿತ್ತು.

ಎನ್.ಎಸ್.ಡಿ. ರಿಪರ್ಟರಿಯ ಮೊದಲನೆಯ ಮ್ಯಾನೇಜರ್ ಆಗಿದ್ದಾಗ ಶ್ರೀ ರಾಮಮೂರ್ತಿಯವರು ಅದರ 'ಕಿಂಗ್ ಲಿಯರ್' ನಾಟಕಕ್ಕೆ ಬೆಳಕು ವಿನ್ಯಾಸಗೈದಿದ್ದರು. ಮಹಾನ್ ನಾಟಕಕಾರ ಷೇಕ್ಸ್‌ಪಿಯರನ 400ನೇ ವರ್ಧಂತಿ ಸಂದರ್ಭ (1964)ದಲ್ಲಿ ಈ ನಾಟಕವನ್ನು ಪ್ರದರ್ಶಿಸಲಾಗಿದ್ದು ಪ್ರೊ. ಅಲ್ಕಾಜಿಯವರು ನಿರ್ದೇಶನ, ಸಂಗೀತ ಮತ್ತು ಸೌಂಡನ್ನು ಒದಗಿಸಿದ್ದರು; ಜೆ.ಎನ್. ಕೌಶಲ್ ಅವರು ಶಬ್ದ ಸಂಯೋಜನೆಯನ್ನು ಒದಗಿಸಿದ್ದರು. ಈ ಪ್ರದರ್ಶನವು ಉರ್ದು ಭಾಷೆಯಲ್ಲಿ ನೆರವೇರಿದುದು ಒಂದು ವಿಶೇಷವಾಗಿದ್ದಿತು. ಅಂತೆಯೇ ಮಹಾಕವಿಯ ವರ್ಧಂತಿಗೆ ಭಾರತದ ಕೊಡುಗೆಯಾಗಿದ್ದಿತು. ವಾರಾಣಸಿ (ಕಾಶಿ)ಯಲ್ಲಿ 'ಚಂದ್ರಗುಪ್ತ' (ನಿ: ಬಿ.ವಿ. ಕಾರಂತ) ಪ್ರದರ್ಶನಕ್ಕೆ ಲೈಟಿಂಗ್ ಮಾಡಿದ್ದರು. ದೆಹಲಿಯಲ್ಲಿ ಬ್ರಿಜುಮಹಾರಾಜ್ ಅವರ 'ಮಾಲವಿಕಾಗ್ನಿ ಮಿತ್ರ' ಬ್ಯಾಲೆ (Floor Dancing) ಪ್ರದರ್ಶನಕ್ಕೆ ಶ್ರೀ ರಾಮಮೂರ್ತಿಯವರು ಸೆಟ್‌ಡಿಸೈನ್ ಮತ್ತು ಶ್ರೀ ರಾಜಕುಮಾರ್ ಅವರು ಲೈಟಿಂಗ್ ಮಾಡಿದ್ದರು.

ಸಿ. ಬಸವಲಿಂಗಯ್ಯನವರು ಮೈಸೂರು 'ರಂಗಾಯಣ'ಕ್ಕಾಗಿ ನಿರ್ದೇಶಿಸಿದ ಗಿರೀಶ ಕಾರ್ನಾಡರ 'ಟಿಪ್ಪುವಿನ ಕನಸುಗಳು' ಪ್ರದರ್ಶನಗಳಿಗೆ ಲೈಟಿಂಗ್ ಮಾಡಿದ್ದರು (ಸೆಟ್ ಡಿಸೈನ್ : ಶಶಿಧರ ಅಡಪ, ಸಂಗೀತ : ಚೀನಿ).

**ಕಂಪನಿ ನಾಟಕಗಳಲ್ಲಿ ಬೆಳಕಿನ ಪಾತ್ರ :** "ಕಂಪನಿ ನಾಟಕದವರಿಗೆ ಸಾಮಾನ್ಯವಾಗಿ ಬೆಳಕಿನ ವ್ಯವಸ್ಥೆಯ ಬಗ್ಗೆ ಅಷ್ಟಾಗಿ ತಿಳುವಳಿಕೆಯನ್ನೋದು ಇದ್ದಿರಲಿಲ್ಲ. ನಾನು ನೋಡಿದ ಹಾಗೆ ಲೈಟ್ ಸ್ವಿಚ್ ಅನ್ನು ಸುಮ್ಮನೆ On and Off ಮಾಡುತ್ತಿದ್ದರು. ಇದು ಎಲ್ಲಾ ದೇಶಗಳಲ್ಲಿಯೂ ಆಗ್ತಾ ಇತ್ತು. ಆದರೆ ಇದು ಕ್ರಮೇಣ ತಿಳುವಳಿಕೆ ಬೆಳೆಯುತ್ತಾ ಬಂದಿದ್ದು ಯುರೋಪ್ ಮತ್ತು ಅಮೆರಿಕದಲ್ಲಿ. ಅದನ್ನು ಅರ್ಥವತ್ತಾಗಿ ಬಳಸುತ್ತಿದ್ದವರೆಂದರೆ ಅಮೆರಿಕನ್ Theodre suchs, ನಟ Jolmielzninger ಅವರು. ಲಂಡನ್ನಿನ ಕಲಾತ್ಮಕವಾಗಿ ಬೆಳಕನ್ನು ಬಳಸುತ್ತಿದ್ದ great lighting designer

ಎಂದರೆ ಅರ್ಬರ್ಟ್ ರೀಡ್ (Herbert Reid) ಮತ್ತು ರಿಚರ್ಡ್ ಪಿಲ್‌ಡ್ರೊವ್ (Richard pilldrow) ಅವರು. ಈ ದಿಸೆಯಲ್ಲಿ ಹೊಸ ತಿರುವು ಕೊಟ್ಟವರೆಂದರೆ ಸ್ಕಾಟ್ಲೆಂಡ್‌ನ ಆಧುನಿಕ ರಂಗಭೂಮಿಯ ಪ್ರಮುಖ ಇಂಗ್ಲಿಷ್ ನಿರ್ದೇಶಕ, ನಟರಾಗಿದ್ದ ಎಡ್ವರ್ಡ್ ಹೆನ್ರಿ ಗೋಲ್ಡನ್ ಕ್ರೈಗ್ (Edward Henry Gorden Craig, 1872-1966) ಎಂಬುವರು. ಅವರು 'ಹ್ಯಾಮ್ಲೆಟ್' ನಾಟಕದಿಂದ ಬಹಳ ಪ್ರಸಿದ್ಧರಾಗಿದ್ದರಂತೆ. ಅವರ ತಂದೆ architect ಮತ್ತು ತಾಯಿ actress ಆಗಿದ್ದರು. ಅವರ 'ಸ್ವಗತ' ('To be or Not to be')ವನ್ನು ಕೇಳುವುದಕ್ಕೆ ಪ್ರೇಕ್ಷಕರು ದುಂಬಾಲು ಬೀಳುತ್ತಿದ್ದರಂತೆ; ಅಷ್ಟು ಚೆನ್ನಾಗಿ ಮಾತುಗಳನ್ನು ಹೇಳಿಕೊಂಡು ಅಭಿನಯಿಸುತ್ತಿದ್ದರು. ಆದರೆ ಅವರಿಗೆ ಒಮ್ಮೆ Mental thought block ಆಯಿತು. ಸ್ಟೇಜ್ ಮ್ಯಾನೇಜರ್ ಅವರು ಪ್ರಾಬ್ಲೆಮ್ ಆಗಿದೆಯೆಂದು ಬಗೆದು, 'ಇನ್ನು ಸ್ವಲ್ಪ ಹೊತ್ತಿನಲ್ಲಿ ಪ್ರಯೋಗ ಶುರುವಾಗುತ್ತದೆ. ಅದು ಮುಂದುವರೆಯುತ್ತದೆ' ಎಂದರು. ಪ್ರೇಕ್ಷಕರು ಚಪ್ಪಾಳೆ ತಟ್ಟಿದರು. ಆದರೆ ಬೈಯಲಿಲ್ಲ. ಇದು ಏನನ್ನು ತೋರಿಸುತ್ತದೆಯೆಂದರೆ ಒಂದನೆಯದು ಕ್ರೈಗ್ ಅವರ ಅಭಿನಯ ಪರಿಣತಿ, ಭಾವಾಭಿನಯ ತನ್ಮಯತೆ ಮತ್ತು ಪ್ರೇಕ್ಷಕರ ಸೌಜನ್ಯ"ವೆಂಬುದಾಗಿ ಪ್ರಸಂಗವೊಂದನ್ನು ಶ್ರೀ ರಾಮಮೂರ್ತಿಯವರು ಉಲ್ಲೇಖಿಸಿದರು. ಅವರು ಭೇಟಿಯಾದ ಸ್ಮರಿಸುವ ಇನ್ನೋರ್ವ ಪ್ರಮುಖ ರಂಗತಜ್ಞರೆಂದರೆ ಆಧುನಿಕ ರಂಗಭೂಮಿಯ Dr. Tyrone Guthre.

ಕನ್ನಡ ರಂಗಭೂಮಿಯಲ್ಲಿ ಗುಬ್ಬಿ ವೀರಣ್ಣನವರ ಕಂಪನಿ ಮತ್ತು ಎಂ.ವಿ. ಸುಬ್ಬಯ್ಯನಾಯ್ಡು ಮತ್ತು ಆರ್. ನಾಗೇಂದ್ರರಾವ್‌ರವರ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯಲ್ಲಿ ಅರ್ಥವತ್ತಾಗಿ ಬೆಳಕನ್ನು ಬಳಸುತ್ತಿದ್ದರು.

ಉಸ್ಮಾನಿಯಾ ಯೂನಿವರ್ಸಿಟಿ ಪ್ರಾರಂಭವಾದಾಗ ನಾಟಕ ವಿಭಾಗದಲ್ಲಿ ಮೂರು ಜನರಿದ್ದರು. ನಾಟಕಕಾರ, ನಿರ್ದೇಶಕ ಮತ್ತು ಅಮೆರಿಕದಲ್ಲಿನ MFA (Master of Fine Arts) ಪದವೀಧರ ಡಾ. ನಾಗಭೂಷಣ ಶರ್ಮಾ ಅವರು ಪ್ರೊಫೆಸರ್ ಮತ್ತು ಇಲಾಖಾ ಮುಖ್ಯಸ್ಥರಾಗಿಯೂ ಹಾಗೂ ಚಾಟ್ಲಾ ಶ್ರೀರಾಮುಲು ಮತ್ತು ಪುಟ್ರೇವಿ ರಾಜಾ ರಾಮದಾಸು ಅವರು ರೀಡರ್‌ಗಳಾಗಿ ಕಾರ್ಯನಿರ್ವಹಿಸುತ್ತಿದ್ದರು. ಅಮೆರಿಕದ ನಾಟಕಕಾರ ಗ್ಲಾಡ್‌ಸ್ಟೋನ್ ಯೂಜಿನ್ ಓನೆಲ್ (1888-1953)ನ 'Emperor Jones' ಸಣ್ಣ ನಾಟಕವನ್ನು ತೆಲುಗಿನಲ್ಲಿ 'ದೊರಾನೀತಾವು ಮೂಡಿಂದಿ' ಎಂದು ಪೂರ್ಣಾವಧಿ ನಾಟಕವನ್ನಾಗಿ ವಿಸ್ತರಿಸಿ, ಸಂಗೀತವನ್ನು ಸೇರಿಸಿ ಬುರ್ರಕಥಾದ ಅಂಶಗಳನ್ನು ಅಳವಡಿಸಿಕೊಂಡು ಬಯಲು ನಾಟಕವನ್ನಾಗಿ ಆಡಿದ್ದರು. ಅದಕ್ಕೆ ಪಿ.ಎಸ್. ರಾಮರಾವ್ ಅವರು ಸೆಟ್‌ಡಿಸೈನ್ ಮತ್ತು ಶ್ರೀ ರಾಮಮೂರ್ತಿಯವರು ಬೆಳಕು ವಿನ್ಯಾಸಗೈದಿದ್ದರು.

ಬಟ್ರೋಲ್ಟ್ ಬ್ರೆಕ್ಟ್‌ನ 'The Exception And The Rule' ನಾಟಕವನ್ನು ತೆಲುಗಿನಲ್ಲಿ 'ಲಾ ಒಕ್ಕಿಂತಯೂಲೇದು' (ನಿ : ಚಾಟ್ಲಾ ಶ್ರೀರಾಮುಲು) ಎಂದು ಪ್ರದರ್ಶಿಸಲಾಯಿತು. ಅದಕ್ಕೆ ಶ್ರೀ ರಾಮಮೂರ್ತಿಯವರು ಲೈಟಿಂಗ್ ಹಾಗೂ ಸ್ಲೈಡ್ಸ್ ಪ್ರೊಜೆಕ್ಷನನ್ನು ಮಾಡಿದ್ದರು. ಡಾ. ನಾಗಭೂಷಣ ಶರ್ಮಾರವರು 'ಈಡಿಪಸ್ ರೆಕ್ಸ್' ನಾಟಕವನ್ನು ತೆಲುಗಿಗೆ ಅನುವಾದಿಸಿ ಬಯಲು ನಾಟಕ ಮಾಡಿದ್ದರು. ಅದಕ್ಕೂ ಶ್ರೀ ರಾಮಮೂರ್ತಿಯವರು ಬೆಳಕು ವಿನ್ಯಾಸಗೈದಿದ್ದರು.

ಜಿ.ಎನ್. ದಾಸಗುಪ್ತಾ ಮತ್ತು ಶ್ರೀ ರಾಮಮೂರ್ತಿಯವರು ದೆಹಲಿಯ ಮಾಡರ್ನ್ ಸರ್ವೀಸ್ ಸ್ಟೇಜ್ ಸಂಸ್ಥೆಗೆ ಬೆಳಕಿನ ಉಪಕರಣ - ಸಲಕರಣೆ, ಪರಿಕರಗಳ ತಯಾರಿಕೆಗಳ ಸಲಹೆಗಾರನಾಗಿ ನೆರವಾದ ದಿಸೆಯಲ್ಲಿ ಅವರ ನಿರಂತರ ತಾಂತ್ರಿಕ ಅನುಭವದ ಸೂಕ್ತ ಬಳಕೆಯಿಂದಾಗಿ ಪ್ರಯೋಗಗಳ ರಂಗವಸ್ತುವಿಧಾನ ಮತ್ತು ವಿನ್ಯಾಸಗಳಲ್ಲಿನ ಗುಣಮಟ್ಟದಲ್ಲಿ ಮಹತ್ತರವಾದ ಪ್ರಗತಿಯಾಗಿದೆ.

ಅವರು ಕಳೆದ ಶತಮಾನದ 8-9ರ ದಶಕಗಳಲ್ಲಿನ ಪ್ರಸಿದ್ಧ ರಂಗಪ್ರದರ್ಶನಗಳಾದ ಚೆನ್ನಣ್ಣ ವಾಲೀಕರ್ ಕೃತ 'ಸೋಮರಾಯ ಭೀಮರಾಯ ದಪ್ಪಿನಾಟ' (ನಿ: ಅಶೋಕ ಬಾದರದಿನ್ನಿ), 'ಗುಳ್ಳೇನರಿ' (ಷೇಕ್ಸ್‌ಪಿಯರ್‌ನ ಸಮಕಾಲೀನ ನಾಟಕಕಾರನಾಗಿದ್ದಂಥ ಬೆನ್‌ಜಮಿನ್ ಜಾನ್ಸನ್ (1537-1637)ನ 'Valpone' ನಾಟಕದ ರೂಪಾಂತರ : ಶ್ರೀನಿವಾಸ ಪ್ರಭು), 'ಮಂಡೂಕ ರಾಜ್ಯ', 'ಖದೀಮನ ಡೈರಿ' (ನಿ : ಶ್ರೀನಿವಾಸ ಪ್ರಭು), ಭಿಷಮ್‌ಸಾಹನಿಯವರ 'ಸಂತೆಯಲ್ಲಿ ನಿಂತ ಕಬೀರ' (ನಿ : ವಾಲ್ಟೇರ್ ಡಿಸೋಜಾ) ನಾಟಕಗಳಿಗೆ ಸಂಗೀತ ಮತ್ತು ಬೆಳಕು ವಿನ್ಯಾಸಗೈದಿದ್ದರು.*

ಅವರು ಬೆಳಕು ಹರಿಸದ ತಾಣಗಳಿಲ್ಲ. ಹಳ್ಳಿಯಿಂದ ಡೆಲ್ಲಿಗೆ ಎಂಬಂತೆ ಜಾತ್ರೆ, ಮೇಳ, ದೇಗುಲ, ಸಂಗೀತ, ನೃತ್ಯ, ನಾಟಕ ಹಾಗೂ ವಿವಿಧ ಕಲಾಪ್ರದರ್ಶನಗಳಿಗೆ ತಮ್ಮ ತಾಂತ್ರಿಕ ಪರಿಣತಿಯಿಂದ ಬೆಳಕು ಚೆಲ್ಲಿದ್ದಾರೆ, ಕವಿದಿದ್ದ ಕಾವಳವನ್ನು ನೀಗಿದ್ದಾರೆ; ಅವುಗಳ ಯಶಸ್ಸಿನ ಬಹುಪಾಲನ್ನು ತಮ್ಮದಾಗಿಸಿಕೊಂಡಿದ್ದಾರೆ. ಹೀಗಾಗಿ ಅವರ ಯಾವುದೇ ಪ್ರಯೋಗವು ರಂಗಯೋಗವಾಗಿ ಪರಿಣಮಿಸಿದೆ. He has gained mastery over all aspects of the backstage of theatre for a successful production. ರಂಗಭೂಮಿಯಲ್ಲಿನ ಯಶಸ್ವೀ ರಂಗಪ್ರದರ್ಶನದ ಹಿನ್ನೆಲೆಯಲ್ಲಿ ಬೆಳಕಿನ ಪಾತ್ರವನ್ನು ವಿಶ್ಲೇಷಿಸುತ್ತ, "Lighting is the heart of the show. It is also an important part of acting performance. ಬೆಳಕು ಒಂದು ಕಲೆ ಮತ್ತು ವಿಜ್ಞಾನವು ಹೌದು. ಅದನ್ನು ಕಲಾತ್ಮಕವಾಗಿ ಬಳಸಿಕೊಳ್ಳಬೇಕು. ಬೆಳಕಿನ ಸ್ವಿಚ್ಚನ್ನು On and Off ಮಾಡುವುದೂ ಒಂದು ಕಲೆ. ವಿಜ್ಞಾನ ಮತ್ತು

ತಾಂತ್ರಿಕತೆ ಒಂದಕ್ಕೊಂದು ಪೂರಕವಾಗಿ ಬೆಸೆದಾಗ ಮೂಡುವ ಕಲಾತ್ಮಕತೆಯನ್ನು ಸೂಕ್ತವಾಗಿ ಬಳಸಿಕೊಳ್ಳಬೇಕು. ಅಭಿನಯದಲ್ಲಿ ವಿಜ್ಞಾನವಿದೆ ವಿಜ್ಞಾನದಲ್ಲಿ ಅಭಿನಯವಿದೆ. ಇದಕ್ಕೆ ಬೆಳಕು ಹೊಸ ಆಯಾಮವನ್ನು ನೀಡಬಲ್ಲದು" ಎಂದಿರುವರು. ಮುಂದುವರೆದು, ಕಲಾತ್ಮಕ ರಂಗಸಜ್ಜಿಕೆ ಮತ್ತು ದೀಪ ಸಂಯೋಜನೆ ನಡುವೆಯ ಹೊಂದಾಣಿಕೆ ಮತ್ತು ಸಂಬಂಧ ನಿರ್ಮಿತಿ, ತಾವು ಅನುಸರಿಸುವ ಕಾಯಕ ಕಾರ್ಯವಿಧಾನ ಮತ್ತು ಯೋಜನೆ ಕುರಿತು ಹೀಗೆ ವಿವರಿಸಿದ್ದಾರೆ : "ಮೊದಲು ನಾನು ನಾಟಕವನ್ನು ಓದುತ್ತೇನೆ, ನಿರ್ದೇಶಕರ ಜೊತೆ ಚರ್ಚಿಸುತ್ತೇನೆ, ಬ್ಲಾಕಿಂಗ್‌ನ್ನು ಗಮನಿಸುತ್ತೇನೆ. ಬೆಳಕಿನ ದೃಷ್ಟಿಯಿಂದ ಚೆನ್ನಾಗಿ ಅಭ್ಯಾಸ ಮಾಡುತ್ತೇನೆ. ನೀಲನಕ್ಷೆಗಳನ್ನು ವರದಿಗಳನ್ನು ಟೆಂಡರ್ ಡಾಕ್ಯುಮೆಂಟೇಷನ್ ತರಹ ತಯಾರಿಸುತ್ತೇನೆ. ಅದು ಹೊಂದಿಕೊಳ್ಳುವಂತೆ ಸೃಜನಾತ್ಮಕವಾಗಿರಬೇಕು. ಕೊನೆಗೆ ನಾಟಕದ ಒಟ್ಟಾರೆ ಬಾಹ್ಯ ಮತ್ತು ಆಂತರಿಕ ಕಲಾತ್ಮಕ ಗುಣಗಳಿಗನುಸಾರವಾಗಿ ದೀಪ ಸಂಯೋಜನೆ ಮತ್ತು ರಂಗಸಜ್ಜಿಕೆಯನ್ನು ಕಲ್ಪಿಸುತ್ತೇನೆ. ಲೈಟಿಂಗ್ ನಾಟಕದ ಸನ್ನಿವೇಶವನ್ನು ಸೃಷ್ಟಿಸಬೇಕು. ಇದು ನಿಜವಾದ ಕ್ರಮ, ಪದ್ಧತಿ."

ಸಿ.ಜಿ. ಕೃಷ್ಣಸ್ವಾಮಿಯವರ ನಿರ್ದೇಶಿತ ಬಟ್ರೋಲ್ಟ್ ಬ್ರೆಕ್ಟ್‌ನ 'ಮದರ್ ಕರೇಜ್'ಗೆ ಲೈಟಿಂಗ್ ಮಾಡಿದ್ದರು ಮತ್ತು ಎಲ್. ಹನುಮಂತಯ್ಯ ವಿರಚಿತ 'ಅಂಬೇಡ್ಕರ್' ಗೆ ಸಂಗೀತ ನೀಡಿದ್ದರು. Acoustic System ಅನ್ನು ಕಂಡು ಹಿಡಿದವನು Sabien ಎಂಬುವನು. ಇದರ ರೀತ್ಯ microphone, amplifier ಧ್ವನಿವರ್ಧಕಗಳ ಸಹಾಯವಿಲ್ಲದೆ ರಂಗಮಂದಿರಗಳಲ್ಲಿ ಮಾಡತಕ್ಕಂತಹ ವ್ಯವಸ್ಥೆಯಾಗಿದೆ. Acoustic Sound, Electroacoustic system ಅನ್ನು ದಿವಂಗತ ಶ್ರೀ ಬಿ.ಎಸ್. ರಾಮಕೃಷ್ಣ (Acoustic Consultant) ಮತ್ತು ವಿ. ರಾಮಮೂರ್ತಿ (Lighting consultant) ಅವರು ಜೊತೆಯಾಗಿ ಹಾಗೂ ಇಂಡಿಪೆಂಡೆಂಟ್ ಆಗಿ ಬಳಸುತ್ತಿದ್ದರು. ರಂಗಮಂದಿರವು ಬರೀ ಕಲೆ ಅಷ್ಟೇ ಅಲ್ಲ. ಅದು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತಿರುವ ಮಾಧ್ಯಮ. It is both scientific research technology and art of creation" ಎನ್ನುತ್ತಲೇ 'Eyes are the windows of my soul' ಎಂದಿರುವರು.

## ರಂಗಸಂಗೀತ, ರಂಗವಿನ್ಯಾಸ, ಧ್ವನಿ ಸಂಯೋಜನೆ

ನಾಟಕವು ದೃಶ್ಯ ಮತ್ತು ಶ್ರವ್ಯಕಾವ್ಯ ಮಾಧ್ಯಮವಾದುದರಿಂದ ಅದನ್ನು ಆಸ್ವಾದಿಸಲು ಕಣ್ಣು ಕಿವಿಗಳೆಂಬ ಎರಡು ಪ್ರಮುಖ ಇಂದ್ರಿಯಗಳಿಗೂ ಇಲ್ಲಿ ಪ್ರಾಧಾನ್ಯ. ದೃಶ್ಯಕ್ಕೆ ಬೆಳಕು ಮತ್ತು ಶ್ರವಣಕ್ಕೆ ಸಂಗೀತ. ಇವುಗಳನ್ನು ಅಗತ್ಯ ರಂಗಪರಿಕರಗಳು ಮತ್ತು ಸಂಗೀತ ವಾದ್ಯಗಳಿಂದ ಪೂರೈಸಬೇಕೆಂದಿರುವರು. ಅಂತೆಯೇ ಉತ್ತಮ ರಂಗಸಂಗೀತ

ಸಂಯೋಜಕರೂ ಆದ ಶ್ರೀ ರಾಮಮೂರ್ತಿಯವರು ಬೆಳಕಿನೊಡನೆ ಸಂಗೀತವನ್ನೂ ಸಂಯುಕ್ತವಾಗಿ ಒಸೆದು ಬೆಸೆದವರು; ಬಿಡಿ ಬಿಡಿಯಾಗಿ ಅಭ್ಯಸಿಸಿ ಇಡಿ ಇಡಿಯಾಗಿ ಕಾರ್ಯರೂಪಕ್ಕೆ ತಂದವರು. ಅವರು ಪ್ರತಿಪಾದಿಸುವುದೆಂದರೆ ರಂಗಪ್ರದರ್ಶನದಲ್ಲಿ ಪ್ರತಿಯೊಂದು ಅಂಶವೂ Mood ಅನ್ನು create ಮಾಡುತ್ತದೆ. ಈ Mood ಎಲ್ಲಿಂದ ಬರುತ್ತದೆಯೆಂಬುದನ್ನು ಪ್ರಶ್ನಿಸಿದರೆ ನಾಟಕದ ಸ್ಕ್ರಿಪ್ಟ್‌ನಿಂದ ಮೊದಲ್ಗೊಂಡು ಅದು ಸೂರ್ಯನ ಹುಟ್ಟಿನಿಂದ ಹಿಡಿದು ಅಸ್ತಮಾನದವರೆಗೆಯೆನ್ನುವರು.

ಶ್ರೀ ರಾಮಮೂರ್ತಿಯವರು ಹತ್ತು ಹಲವು ನಾಟಕಗಳಿಗೆ ಮತ್ತೆ ಮತ್ತೆ ಮೆಲುಕು ಹಾಕುವಂತಹ ಸಂಗೀತ ನಿರ್ದೇಶನ ಮಾಡಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ 'ಸಂತೆಯಲ್ಲಿ ನಿಂತ ಕಬೀರ', 'ಸಿರಿ ಪುರಂದರ' (ರ : ಶ್ರೀರಂಗ); 'ಟೋಪಿಯಾಟವಯ್ಯಾ' (ರ : ಎ.ಎಸ್. ಮೂರ್ತಿ), 'ಗುಳ್ಳೇನರಿ' ಮುಂತಾದವು. 'ಕಾಗೆ ಬಂತು ಕಾಗೆ' ಹಾಡಿಗೆ ಸಂಗೀತ ನೀಡಿದ್ದರು. ಅವರು ಭೀಷ್ಮ ಸಾಹನಿಯವರ 'ಸಂತೆಯಲ್ಲಿ ನಿಂತ ಕಬೀರ' (ಕನ್ನಡಕ್ಕೆ : ಲೋಹಿತಾಶ್ವ) ನಾಟಕದ 'ಎಲ್ಲೆಲ್ಲಿ ಹುಡುಕುವೆ ನಿನ್ನ', 'ಅವನೇ ಬ್ರಹ್ಮ' ಮತ್ತು 'ಕಾವಿಧಾರಿ ಜೋಗಿಯಾ ನೋಡಿರೋ' ಮುಂತಾದ ಹಾಡುಗಳಿಗೆ ನೀಡಿದ ಸಂಗೀತವನ್ನು ಆಗಾಗ್ಗೆ ಮೆಲುಕುಹಾಕಿಕೊಳ್ಳುತ್ತಾರೆ. ಬೆಂಗಳೂರಿನಲ್ಲಿ ನೆರವೇರಿದ 'ರಂಗನಿರಂತರ'ದ ಸತತ ರಂಗಪ್ರಯೋಗಗಳಲ್ಲಿ 29-4-1987 ಮತ್ತು 5-5-1987ರಂದು 'ಟೋಪಿಯಾಟವಯ್ಯಾ'ವು ಪ್ರದರ್ಶನಗೊಂಡಿತು. ಇದರ ರಂಗವಿನ್ಯಾಸ, ಹಿನ್ನೆಲೆ, ಸಂಗೀತ ಮತ್ತು ನಿರ್ದೇಶನದ ಕಾರ್ಯನಿರ್ವಹಿಸಿದ್ದರು. ಇದರ ಒಂದು ವಿಶೇಷವೆಂದರೆ ಮೊಟ್ಟಮೊದಲ ಬಾರಿಗೆ ಮರಗಳನ್ನು acting areaವನ್ನಾಗಿ ಮಾಡಿಕೊಳ್ಳಲಾಗಿದ್ದುದು. 'ಕೈಗೊಂಬೆಯಾಡಿಸುವ ವ್ಯಕ್ತಿ ಹೇಗೆ ವ್ಯವಸ್ಥೆಯಲ್ಲಿ ಹಲವು ಮಂದಿಗಳ ಗೊಂಬೆಯಾಗುತ್ತಾನೆಂಬುದನ್ನು ದೃಶ್ಯೀಕರಿಸುತ್ತಾ ಮೂಢನಂಬಿಕೆಗಳು ಮನುಷ್ಯರನ್ನು ಆಳುತ್ತಾ ಹೋಗುತ್ತವೆಯೆಂಬುದನ್ನು ಟೋಪಿ ಮಾರುವವರು ಮತ್ತು ಕೋತಿಯ ಸಂವಾದದಿಂದ ಮನುಷ್ಯನ ಮೂಲಭೂತ ಸಮಸ್ಯೆಗಳನ್ನು ಕೆದಕುತ್ತಾ ಹೋಗುವುದೇ ಈ ನಾಟಕದ ಉದ್ದೇಶ'ವೆಂದು ಪ್ರಚುರಪಡಿಸಲಾಗಿದ್ದಿತು. 23-26 ಮಾರ್ಚ್ 1985ರಂದು ರವೀಂದ್ರ ಕಲಾಕ್ಷೇತ್ರದಲ್ಲಿನ 'ರಂಗಸಂಪದ'ದ ಹೆಚ್.ಎಸ್. ಶಿವಪ್ರಕಾಶರ 'ಮಹಾಚೈತ್ರ' (ನಿ : ಸಿ.ಜಿ.ಕೆ., ಸಂಗೀತ : ರಾಜೀವ್ ತಾರಾನಾಥ್) ಪ್ರದರ್ಶನಕ್ಕೆ ವಿ.ಎಂ. ನಾಗೇಶ್‌ರೊಡನೆ ಧ್ವನಿ ಸಂಯೋಜಿಸಿದ್ದರು.

ಮಧ್ಯಪ್ರದೇಶದ ಕಲಾಪರಿಷತ್ ಏರ್ಪಡಿಸಿದ್ದ ಜಾನಪದ ಶೈಲಿಯ ನಾಟಕವನ್ನು ಹೋಲುವ ಷೇಕ್ಸ್‌ಪಿಯರ್‌ನ 'ಕಿಂಗ್ ಲಿಯರ್' ನಾಟಕವನ್ನು ಬಯಲಿನಲ್ಲಿ ನಿರ್ದೇಶಿಸಿ ಸಂಗೀತ ಸಂಯೋಜನೆ ಮಾಡಿದ್ದರು. ಅದರಲ್ಲಿ ವಿದ್ಯುತ್ ದೀಪಗಳ ಜೊತೆಗೆ ಸುಮಾರು

50 ದೀವಟಿಗೆಗಳನ್ನು ಕೂಡಿಸಿ ಸಂದರ್ಭಾನುಕೂಲವಾಗಿ ಬಳಸಿದ್ದರು. ಅವರಿಗೆ ಸಹಾಯ ಮಾಡಿದವರು ಶ್ರೀ ಹಮೀದ್ ಅವರು.

ಪ್ರೊ. ಅಲ್ಕಾಜಿ ಸಾಹೇಬರು ಮತ್ತು ಪೀಟರ್ ಬ್ರೂಕ್ ಅವರು 'ಕಿಂಗ್ ಲಿಯರ್'ನ್ನು ತಮ್ಮ ತಮ್ಮ ರೀತಿಯಲ್ಲಿ ಪ್ರದರ್ಶಿಸಿರುವರು. ಅವರ ಮೇಲೆ ಪ್ರಭಾವ ಬೀರಿದವರು ಪೋಲೆಂಡಿನ ರಂಗಭೂಮಿ ಬರಹಗಾರರಾಗಿದ್ದಂಥ Jan kott ಅವರು. Jan kott ಅವರ 'Shakeshpeare Our Contemporary' (1964) ಪುಸ್ತಕದಲ್ಲಿನ ಅಭಿಪ್ರಾಯದಂತೆ ನಾಟಕವನ್ನು ನಿರ್ದೇಶಿಸಲಾಗಿತ್ತು. ಶ್ರೀ ರಾಮಮೂರ್ತಿಯವರು Jan kott ಅವರನ್ನು ಅಮೆರಿಕದ ಬೋಸ್ಟನ್‌ನಲ್ಲಿರುವ Yale Drama Schoolನಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಬಂದಿದ್ದಾಗ ಭೇಟಿಯಾಗಿ ಗ್ರಂಥದ ಬಗ್ಗೆ ಚರ್ಚಿಸಿದ್ದರು.

ಉಜ್ಜಯಿನಿಯಲ್ಲಿ ಕಾಳಿದಾಸನ 'ಅಭಿಜ್ಞಾನ ಶಾಕುಂತಲ'ವನ್ನು ಕಣ್ವನ ಪಾತ್ರದೊಂದಿಗೆ ನಿರ್ದೇಶಿಸಿದ್ದ ಶ್ರೀರಂಗರ ಪ್ರದರ್ಶನಕ್ಕೆ ಬಿ.ವಿ. ಕಾರಂತರು ಸಂಗೀತವನ್ನು ನಿರ್ದೇಶಿಸಿದ್ದರೆ ಶ್ರೀ ರಾಮಮೂರ್ತಿಯವರು ಪ್ರಸಾಧನ, ರಂಗವಿನ್ಯಾಸ ಮತ್ತು ರಂಗಬೆಳಕು ಕಾರ್ಯಗಳನ್ನು ನಿರ್ವಹಿಸಿದ್ದರು. ಅಲ್ಲಿನ ಕಾಳಿದಾಸ ಅಕಾಡೆಮಿ ವತಿಯಿಂದ ಪ್ರದರ್ಶನಗೊಂಡ 'ಚಂದ್ರಗುಪ್ತ' ನಾಟಕಕ್ಕೆ ಬೆಳಕು ವಿನ್ಯಾಸ ಮಾಡಿದ್ದರು, Follow Spot effect, 8 ಸ್ಪಾಟ್ Light ಬಳಸಿ Fade in & Face Out effect ತಂದಿದ್ದರು.

ಅವರು 'ಕದಡಿದ ನೀರು' ನಾಟಕಕ್ಕೆ ಮಾಡಿದ ಸೆಟ್‌ಡಿಸೈನ್ Skeleton ತರಹ Transperant ಆಗಿತ್ತು. ಬೊಂಬುಗಳನ್ನು ಬಳಸಲು ಲೈಟಿಂಗ್‌ನಲ್ಲಿ ಬೇಕಾದಷ್ಟು ನೆರಳು ಬೆಳಕಿನ ಆಟಕ್ಕೆ ಅವಕಾಶವಿತ್ತು.

ಮೇ 1977ರಂದು ಬೆಂಗಳೂರಿನ 'ರಂಗಸಂಪದ' ನಿರ್ಮಾಣದ ಫ್ರೆಂಚ್ ನಾಟಕಕಾರ ಯೂಜಿನ್ ಅಯಾನೆಸ್ಕೊನ 'ಮಹಾಪ್ರಸ್ಥಾನ' ಕನ್ನಡಕ್ಕೆ (ಎಂ.ಎಸ್.ಕೆ. ಪ್ರಭು) ನಾಟಕದ ಪ್ರದರ್ಶನಕ್ಕೆ ಶ್ರೀ ರಾಮಮೂರ್ತಿಯವರು ಸೆಟ್‌ಡಿಸೈನ್ ಮಾಡಿದ್ದರು (ನಿರ್ದೇಶನ : ಹೆಚ್.ವಿ. ವೆಂಕಟಸುಬ್ಬಯ್ಯ).

ರಾಬರ್ಟ್ ಎಡ್ಮಂಡ್ ಜೋನ್ಸ್ (1887-1954) ಮತ್ತು ಲೀ ಸೈಮನ್ಸ್‌ನ್ (1888-1967) ಅವರು ಆಧುನಿಕ ರಂಗಭೂಮಿಯ ಅದ್ಭುತವಾದ ಸೆಟ್ ಡಿಸೈನರ್ಸ್ ಎಂದು ಹೆಸರಾಗಿದ್ದವರು. ಅಮೆರಿಕದ ದೃಶ್ಯ ವಿನ್ಯಾಸಕ Jo Mielziner (1901-76) ಅವರಲ್ಲಿ ಶ್ರೀ ರಾಮಮೂರ್ತಿಯವರು ಅಪ್ರೆಂಟೈಸ್‌ಷಿಪ್ (Apprenticeship) ಮಾಡಿದ್ದರು. ಒಳ್ಳೆಯ ನಟ ಮತ್ತು ಮೇಕಪ್ ಕಲಾವಿದರಾದ ಹೆಚ್.ವಿ. ಕೃಷ್ಣಮೂರ್ತಿಯವರು ಪೋಸ್ಟಲ್ ಡಿಪಾರ್ಟ್‌ಮೆಂಟ್‌ನಲ್ಲಿದ್ದು ಬೆಂಗಳೂರು

ವಿಶ್ವವಿದ್ಯಾಲಯದಲ್ಲಿ ಡ್ಯಾನ್ಸ್, ಡ್ರಾಮಾ, ಮ್ಯೂಸಿಕ್ (DDM) ಪದವಿ ಪಡೆದಿದ್ದರು. ಅನಂತರ ಭಾರತ ಸರಕಾರದ ಇನ್‌ಫರ್‌ಮೇಷನ್ ಅಂಡ್ ಬ್ರಾಡ್ ಕ್ಯಾಸ್ಟಿಂಗ್ ಇಲಾಖೆಯ ಸಾಂಗ್ ಅಂಡ್ ಡ್ರಾಮಾ ಡಿವಿಜನ್‌ನಲ್ಲಿ ಡೆಪ್ಯೂಟಿ ಡೈರೆಕ್ಟರ್ ಆಗಿ ಕರ್ನಾಟಕದಲ್ಲಿದ್ದರು. ಆಗ ಹೆಚ್.ಕೆ. ರಂಗನಾಥ್ ಅವರು ಬರೆದಿದ್ದಂತಹ 'ಕರ್ನಾಟಕ ವೈಭವ'ವೆಂಬ ಒಂದು ರೂಪಕವನ್ನು ಹೆಚ್.ವಿ. ಕೃಷ್ಣಮೂರ್ತಿಯವರು ನಿರ್ದೇಶಿಸಿದ್ದರು. ಅದರ ಒಂದು ಪ್ರದರ್ಶನವು ಮಂಗಳೂರು ಸ್ಟೇಡಿಯಂನಲ್ಲಿ ಪ್ರದರ್ಶನಗೊಂಡಿತ್ತು. ಡಾ. ಗೋವಿಂದಸ್ವಾಮಿ ಅವರು ಸಾಂಗ್ ಅಂಡ್ ಡ್ರಾಮಾ ಡಿವಿಜನ್ನಿನ ರಂಗ ನಿರ್ವಾಹಕರಾಗಿದ್ದರು ಮತ್ತು ಈ ರೂಪಕದ ಸ್ಟೇಜ್ ಮ್ಯಾನೇಜರ್ ಆಗಿದ್ದರು. ಅದರಲ್ಲಿ ಬೇರೆ ಹನ್ನೊಂದು ಲೊಕೇಶನ್‌ಗಳಿದ್ದವು. ಸುತ್ತಲೂ ಪ್ರೇಕ್ಷಕರು ಕುಳಿತುಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು. ಇವರು ನಂದಕಿಶೋರ್ ಮತ್ತು ಸಾಂಗ್ ಅಂಡ್ ಡ್ರಾಮಾ ಡಿವಿಜನ್‌ನ ಮನೋಹರ್‌ರವರ ಸಹಕಾರದಿಂದ ಲೈಟಿಂಗನ್ನು ಮಾಡಿದ್ದರು. ಶ್ರೀಮತಿ ವೈಜಯಂತಿ ಕಾಶಿಯವರು ನೃತ್ಯ ಸಂಯೋಜನೆಗೈದಿದ್ದರು. ಮಂಗಳೂರಿನ ಮಂಗಳಾದೇವಿ ಸ್ಟೇಡಿಯಂನಲ್ಲಿ ಕರ್ನಾಟಕ ವೈಭವ ಪ್ರದರ್ಶನದಲ್ಲಿ ಸುಮಾರು ಜನ ಕಲಾವಿದರಿದ್ದರು. ಅದರಲ್ಲಿ ಇಡೀ Show Opening ಅನ್ನು ಡ್ಯಾನ್ಸರ್ಸ್ ಸ್ಟೇಡಿಯಂನಲ್ಲಿ ಮಾಡಿದರು. ಸ್ಟೇಡಿಯಂನಲ್ಲಿ ಗ್ಯಾಲರಿ ಸೇರಿ ಒಟ್ಟು 12 ಸ್ಟೇಜ್‌ಗಳಿದ್ದವು. ಅದರಲ್ಲಿ ಒಂದು Main Stage ಅಲ್ಲದೆ ನಾಲ್ಕು ಮಿನಿಸ್ಟೇಜ್‌ಗಳಿದ್ದವು. ವಿ. ರಾಮಮೂರ್ತಿಯವರ Brilliance ಎಂದರೆ ಭರತ - ಬಾಹುಬಲಿ ಜಲಯುದ್ಧ ಸನ್ನಿವೇಶದಲ್ಲಿ Water Effect Projector ಬಳಸಿಕೊಂಡು Blue Lightನಲ್ಲಿ Underwater Effect ತಂದಿದ್ದರು. ಅದನ್ನು ನೋಡಿ ಪ್ರೇಕ್ಷಕರು ದೀರ್ಘ ಚಪ್ಪಾಳೆ ತಟ್ಟಿದ್ದರು. ಅವರು ಬಾದಲ್ ಸರ್ಕಾರ್‌ರವರ 'ಏವಂ ಇಂದ್ರಜಿತ್' ನಾಟಕಕ್ಕೆ ಧ್ವನಿ ವಿನ್ಯಾಸ ಮಾಡಿದ್ದರು (ನಿ : ಮೋಹನ ಮಹರ್ಷಿ). ಪ್ರೇಮಕಾರಂತ ನಿರ್ದೇಶನದ 'ಅಲಿಬಾಬಾ ಮತ್ತು 40 ಕಳ್ಳರು' (ರ : ಚಂದ್ರಶೇಖರ ಕಂಬಾರ) ಪ್ರದರ್ಶನಕ್ಕೆ ಅದ್ಭುತ Stage Setting ಮಾಡಿದ್ದರು. ಅಲ್ಲದೆ ಅವರು ನಿರ್ದೇಶಿಸಿದ 'ಬೆನಕ' ಮಕ್ಕಳ ನಾಟಕಗಳಿಗೆ ತರಗತಿಗಳನ್ನು ತೆಗೆದುಕೊಂಡಿದ್ದರು. ಹೆಚ್.ವಿ. ವೆಂಕಟಸುಬ್ಬಯ್ಯನವರು ನಿರ್ದೇಶಿಸಿದ 'ಗುಲಾಮನ ಸ್ವಾತಂತ್ರ್ಯ ಯಾತ್ರೆ'ಗೂ ಸೆಟ್‌ಡಿಸೈನ್ ಮಾಡಿದ್ದರು. ಅವರು ತುಮಕೂರಿನ 'ನಾಟಕ ಮನೆ' ಕಟ್ಟಡದ ವಿನ್ಯಾಸವನ್ನು ಮಾಡಿದ್ದರು. ಗಿರೀಶ ಕಾರ್ನಾಡರ 'ಅಂಜುಮಲ್ಲಿಗೆ' ನಾಟಕಕ್ಕೆ ರಂಗವಿನ್ಯಾಸ ಮಾಡಿದ್ದರು (ನಿ : ಶಂಕರ್‌ನಾಗ್). ಶ್ರೀ ರಾಮಮೂರ್ತಿಯವರು ಕಾಕಿನಾಡದಲ್ಲಿ ನಿರ್ಮಿಸುತ್ತಿರುವ 'Youngmen's Happy club' ರಂಗಮಂದಿರಕ್ಕೆ ಬೆಳಕು ವಿನ್ಯಾಸ ಮಾಡಿದಾಗ ಅದರ ವ್ಯವಸ್ಥೆಗೆ ಸಂಬಂಧಪಟ್ಟ ನಕ್ಷೆಗಳನ್ನು ಅವರ ನಿರ್ದೇಶನದಲ್ಲಿ ತುಮಕೂರಿನ 'ನಾಟಕಮನೆ'

ಎಂ.ಎಸ್. ಉಮೇಶ್ ಅವರು ತಯಾರಿಸಿಕೊಟ್ಟರು.

19-8-1985ರಂದು ಎ.ಎಸ್. ಮೂರ್ತಿಯವರು 'ಚಿತ್ರಾ - ಅಭಿನಯ ತರಂಗ'ದ ಲಾಂಛನದಲ್ಲಿ ಪ್ರಸಿದ್ಧ ದೂರದರ್ಶನ ಡೈರೆಕ್ಟರ್‌ರಾಗಿರುವ ಬಿ. ಸುರೇಶ್ ಅವರು ಎಂ.ಎಸ್. ಪುಟ್ಟಣ್ಣನವರು ಷೇಕ್ಸ್‌ಪಿಯರ್‌ನ 'ಕಿಂಗ್ ಲಿಯರ್' ನಾಟಕವನ್ನು ಕನ್ನಡಕ್ಕೆ ರೂಪಾಂತರಿಸಿದ 'ಹೇಮಚಂದ್ರ ವಿಲಾಸ' ಎಂಬ ನಾಟಕಕ್ಕೆ ಶ್ರೀ ರಾಮಮೂರ್ತಿಯವರು ವಸ್ತ್ರವಿನ್ಯಾಸ, ಸಂಗೀತ ಮತ್ತು ರಂಗಸಜ್ಜಿಕೆಯನ್ನು ಮಾಡಿದ್ದರು. ವಿಶೇಷವೆಂದರೆ ನಿರ್ದೇಶಕರ ವಿಶ್ಲೇಷಣೆಯಂತೆ ನಾಟಕದಲ್ಲಿನ ಕ್ರೌರ್ಯ ಸನ್ನಿವೇಶದಲ್ಲಿ ಗೋಣಿಚೀಲಗಳಿಂದ ವಸ್ತು - ವಸ್ತ್ರವಿನ್ಯಾಸ ರಂಗವಿನ್ಯಾಸ ಮಾಡಿದ್ದರು. ಅದರಲ್ಲಿ ಕಥಾನಾಯಕ ಹೇಮಚಂದ್ರನ ಪಾತ್ರವನ್ನು ಎ.ಎಸ್. ಮೂರ್ತಿಯವರು ವಹಿಸಿದ್ದರು. ಅದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ಮತ್ತು ಮೈಸೂರಿನಲ್ಲಿ 15, 16, 17 ಡಿಸೆಂಬರ್ 1985ರಂದು ನೇರವೇರಿದ ವಿಶ್ವಕನ್ನಡ ಸಮ್ಮೇಳನದಲ್ಲಿ ಪ್ರದರ್ಶನಗೊಂಡಿತು.

ಜಾನಪದ ಸಂಗೀತ ಕುರಿತು ಮಾತನಾಡುತ್ತಾ, 'Most of the time in the name of folk music we are urbanizing the folk art. Music is an organized sound' ಎಂದಿರುವರು. ನ್ಯೂಯಾರ್ಕ್‌ನಲ್ಲಿ ಒಂದು ಅಪೇರಾ ನಡೆಯಿತು. ಹೀಗೆ ಪಾಶ್ಚಾತ್ಯ ರಂಗಸಂಗೀತ ವಿಧಾನವನ್ನು ನೆನಪಿಸಿಕೊಳ್ಳುತ್ತಾ, 'ಇಟಲಿಯು ಅಪೇರಾಗೆ ಬಹಳ ಪ್ರಸಿದ್ಧವಾದುದು. ಇಟಾಲಿಯನ್‌ನಲ್ಲಿ ಅಪೇರಾ (ಸಂಗೀತ)ವನ್ನು ಈಸ್ಟ್ (East) ಎಂದು ಕರೆಯುತ್ತಾರೆ. ತೆಲುಗು ಭಾಷೆಯನ್ನು Italian of the east ಎನ್ನುತ್ತಿದ್ದುದುಂಟು. ಏಕೆಂದರೆ ಇಟಾಲಿಯನ್ ಭಾಷೆಯ ತರಹ ಸಂಗೀತ ಸಂಯೋಜನೆಗೆ ತೆಲುಗು ಭಾಷೆ ಬಹಳ ಚೆನ್ನಾಗಿ ಹೊಂದಿಕೊಳ್ಳುತ್ತದೆ ಅಂತ. ಅದೇ ರೀತಿ ಉರ್ದು ಭಾಷೆ ಕೂಡ ಸಂಗೀತಕ್ಕೆ ಅದ್ಭುತವಾಗಿ ಹೊಂದುತ್ತದೆ. ಲಕ್ನೋದಲ್ಲಿ ನೈಜವಾದ ಉರ್ದುವನ್ನು ಅದ್ಭುತವಾಗಿ ಮಾತನಾಡುತ್ತಾರೆ. ಉರ್ದು ಸಿನಿಮಾ ಹಾಡುಗಳನ್ನು ಮತ್ತು ಶಾಸ್ತ್ರೀಯ ಸಂಗೀತವನ್ನು ಹಾಗೂ ಮಹಮ್ಮದ್ ರಫಿಯವರ ಹಾಡುಗಾರಿಕೆಯನ್ನು ಗಮನಿಸಿ. ಅಮೆರಿಕದಲ್ಲಿ ಅಪೇರಾ ರೀತಿಯನ್ನು Musical (ಸಂಗೀತಮಯ) ಎಂದು ಕರೆಯುತ್ತಾರೆ' ಎಂದು ಅರುಹಿದರು.

ತಮ್ಮ ಅನುಭವದ ಎಳೆ ತೊಳೆಗಳನ್ನು ಬಿಡಿಸಿಡುತ್ತಾ ಹೀಗೆ ನುಡಿದರು : "ನಾನು ನಾಟಕ ಪ್ರದರ್ಶನಕ್ಕೆ ಒಂದು ವಿನ್ಯಾಸವನ್ನು ಮಾಡುವಾಗ ಎಲ್ಲ ನಕ್ಷೆಗಳನ್ನು ಇತರರಿಗೆ ಕೊಡುತ್ತೇನೆ. ನಾನು ಶಿಸ್ತುಬದ್ಧತೆಯನ್ನು ಇಷ್ಟಪಟ್ಟು ಇಷ್ಟು ಆಳವಾಗಿ ಹೇಗೆ ಕಲಿತಿದ್ದೆಂದರೆ ಮೊದಲನೆಯದಾಗಿ ಅದು ಸ್ಕೂಲು, ಕಾಲೇಜು ಮತ್ತು ಎನ್.ಎಸ್.ಡಿ.ಯಲ್ಲಿನ ಪಠ್ಯ ಹಾಗೂ ಪ್ರಾಕ್ಟಿಕಲ್ ಕ್ರಮದಿಂದಾಗಿ. ಎರಡನೆಯದಾಗಿ

ಸುತ್ತಮುತ್ತಲಿನ ಪ್ರಪಂಚ ಜ್ಞಾನದ ಅನುಭವದ ಮೂಲಕ ರಂಗಭೂಮಿಯೆಂದರೆ ಬರೀ ನಟನಟಿಯರ ಅಭಿನಯ ಕೇಂದ್ರಿತ ಮಾತ್ರವಾಗಿರುವುದು ಮುಖ್ಯವಲ್ಲ. ರಂಗಭೂಮಿಯ ಬೆಳವಣಿಗೆಗೆ ಪ್ರದರ್ಶನಕ್ಕೆ ಪೂರಕವಾಗುವಂತೆ ನೇಪಥ್ಯದಲ್ಲಿ ನಡೆಯುವ ಪೂರ್ವಭಾವಿ ಸಿದ್ಧತೆ, ರಂಗ ವಾಸ್ತುಶಿಲ್ಪ ಮುಂತಾದವೂ ರಂಗಭೂಮಿಗೆ ಸೇರಿದ, ಸಂಬಂಧಿಸಿದ ಅವಿಭಾಜ್ಯ ವಿಷಯಗಳು. ಅವುಗಳ ಬಗ್ಗೆಯೂ ತಿಳಿಯುವುದು ಅಗತ್ಯ. ಇದನ್ನೇ 'ಕಾವ್ಯೇಷು ನಾಟಕಂ ರಮ್ಯಂ' ಎಂದು ಕವಿ ಕಾಳಿದಾಸ ಹೇಳಿದುದು."

ತಮ್ಮ ಮಿತ್ರರು, ಹಿತೈಷಿಗಳನ್ನು ಒಬ್ಬರನ್ನೊಬ್ಬರು ಭೇಟಿಯಾಗಿ ಸಂಬೋಧನೆ ಮಾಡುವಾಗ ಸ್ವಯಂ ಸಂಗೀತ ಪ್ರೇಮಿಯಾದ ಶ್ರೀ ರಾಮಮೂರ್ತಿಯವರು ಕರ್ನಾಟಿಕ ಶಾಸ್ತ್ರೀಯ ಸಂಗೀತದ ದಿಗ್ಗಜರಲ್ಲೋರ್ವರಾದ ವಾಗ್ಗೇಯಕಾರ ಮೈಸೂರು ವಾಸುದೇವಾಚಾರ್ಯ ವಿರಚಿತ ಸುನಾದ ವಿನೋದಿನಿ ರಾಗದ 'ದೇವಾದಿದೇವ..."ವನ್ನು ಕರ್ಣಾನಂದಕರವಾಗಿ ಸದಾ ಗುನುಗುನುಗುತ್ತಿರುತ್ತಾರೆ.

## ರಂಗಕಾರ್ಯಾಗಾರಗಳು

ವಿ. ರಾಮಮೂರ್ತಿಯವರು ಓರ್ವ ನಿಷ್ಠಾವಂತ ಮುಕ್ತ ಸಶಕ್ತ ರಂಗಕರ್ಮಿಯಾಗಿ ರಾಜ್ಯದ ಒಳ ಹಾಗೂ ಹೊರ ಸ್ಥಳಗಳಲ್ಲಿ ಸರ್ಕಾರಿ, ಅರೆಸರ್ಕಾರಿ ಹಾಗೂ ಖಾಸಗಿ ಸಂಘ ಸಂಸ್ಥೆಗಳಿಂದ ಪ್ರಾಯೋಜಿತಗೊಂಡ ಅನೇಕ ರಂಗಶಿಬಿರಗಳನ್ನು ಯಶಸ್ವೀಯಾಗಿ ನಡೆಸಿಕೊಟ್ಟಿದ್ದಾರೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿ, ಕರ್ನಾಟಕ ನಾಟಕ ಅಕಾಡೆಮಿ, ರಾಜಸ್ಥಾನ್ ಸಂಗೀತ ನಾಟಕ ಅಕಾಡೆಮಿ, ಕೇರಳ ಸಂಗೀತ ನಾಟಕ ಅಕಾಡೆಮಿ, ಆಂಧ್ರ ಪ್ರದೇಶ ಸಂಗೀತ ನಾಟಕ ಅಕಾಡೆಮಿ, ಉತ್ತರ ಪ್ರದೇಶ ಸಂಗೀತ ನಾಟಕ ಅಕಾಡೆಮಿ, ಮಧ್ಯಪ್ರದೇಶ ಕಲಾ ಪರಿಷತ್ ಹಾಗೂ ಶ್ರೀಲಂಕಾ ಸರಕಾರದ ಟವರ್‌ಹಾಲ್ ಥಿಯೇಟರ್ ಫೌಂಡೇಶನ್, ಕೊಲಂಬೋ ಮುಂತಾದವು ಸಂಯೋಜಿಸಿದ್ದ ರಂಗಕಮ್ಮಟಗಳನ್ನು ಯಶಸ್ವೀಯಾಗಿ ನೆರವೇರಿಸಿ ರಂಗಚಟುವಟಿಕೆಗಳನ್ನು ಉದ್ದೀಪನಗೊಳಿಸಿದ್ದಾರೆ. 1982-83ರಲ್ಲಿ ಕಾರ್ಯಾಗಾರವೊಂದನ್ನು ಸರಕಾರದ Tower Hall Theatre Foundation ವತಿಯಿಂದ ಭಾರತ ದೇಶದ ICCR ಸ್ಪಾನ್ಸರ್ ಮಾಡಿತ್ತು. ಅದು 3 ತಿಂಗಳುಗಳ ಕಾಲ ನಡೆಯಿತು. ಅದರಲ್ಲಿ ಶ್ರೀ ರಾಮಮೂರ್ತಿಯವರು 1 ತಿಂಗಳು ಇದ್ದರು. ಪಂಜಾಬ್ ಸಂಗೀತ ನಾಟಕ ಅಕಾಡೆಮಿಯು ಚಂಡೀಗಡದಲ್ಲಿ ಪಂಜಾಬಿ ರಂಗಕರ್ಮಿಗಳಿಗಾಗಿ ಸೆಪ್ಟೆಂಬರ್ 1993ರಂದು ಸಂಯೋಜಿಸಿದ್ದ ಹತ್ತು ದಿನಗಳ ರಂಗಕಾರ್ಯಾಗಾರವನ್ನು ನಡೆಸಿಕೊಟ್ಟಿದ್ದಾರೆ. ಚಂಡೀಗಡದಲ್ಲಿರುವ ಪಂಜಾಬ್ ಯೂನಿವರ್ಸಿಟಿಯ ಡಿಪಾರ್ಟ್‌ಮೆಂಟ್ ಆಫ್ ಇಂಡಿಯನ್ ಥಿಯೇಟರ್‌ನಲ್ಲಿ ಟೀಚರ್ ಮತ್ತು ನಿರ್ದೇಶಕರಾಗಿದ್ದ ಡಾ. ಮಹೇಂದ್ರಕುಮಾರ್‌ರವರು ಸೆಟ್‌ಡಿಸೈನ್ ಕುರಿತು

ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಅದರ ಸೆಕ್ರೆಟರಿಯಾಗಿ ಇಂಗ್ಲಿಷ್ ಪ್ರೊಫೆಸರ್ ಆತಮ್‌ಜೀತ್‌ಸಿಂಗ್ ಅವರಿದ್ದರು. ಶ್ರೀ ಜೆ.ಎನ್.ಕೌಶಲ್ ಅವರು ಅದರ ಸಮಾರೋಪ ಸಮಾರಂಭದಂದು ಅಲ್ಲಿನ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡುವುದರೊಂದಿಗೆ ಪ್ರಮಾಣಪತ್ರಗಳನ್ನು ವಿತರಿಸಿದ್ದರು. ನಾರ್ಥ್ ಜೋನ್ ಕಲ್ಚರಲ್ ಸೊಸೈಟಿ (North Zone Cultural Society), ಪಾಟಿಯಾಲ ವತಿಯಿಂದ ಅಮೃತಸರದಲ್ಲಿರತಕ್ಕಂಥ ಗುರುನಾನಕ್‌ದೇವ್ ಯೂನಿವರ್ಸಿಟಿಯಲ್ಲಿಯೂ ಕಾರ್ಯಾಗಾರವನ್ನು ನೆರವೇರಿಸಿದರು. ಒಮ್ಮೆ ರಾಜೇಶ್ವರಿ ಮತ್ತು ಸುಧಿ ಅವರು ನಡೆಸುತ್ತಿರುವ 'ನಿರೀಕ್ಷಾ'ದಿಂದ ತಿರುವನಂತಪುರದಲ್ಲಿ ಮಹಿಳೆಯರಿಗಾಗಿ ಹತ್ತು ದಿನಗಳ ರಂಗತಾಂತ್ರಿಕ ಅಧ್ಯಯನ ಕಾರ್ಯಾಗಾರವು ನೆರವೇರಿತು. ಅದರಿಂದ ಮುಂದಿನ ಪೀಳಿಗೆಗಳ ರಂಗಕರ್ಮಿಗಳಿಗೆ ಸಾಂಪ್ರದಾಯಿಕ ರಂಗಪರಿಜ್ಞಾನದೊಂದಿಗೆ ವಿವಿಧ ರಂಗಸಾಧ್ಯತೆಗಳನ್ನು ಕುರಿತಂತೆ ನವನವೀನ ವಿಧಾನಗಳು ಮತ್ತು ಕ್ರಿಯಾಶೀಲತೆಯನ್ನು ತಿಳಿಯಲು ಸಾಧ್ಯವಾಯಿತು. ಅವರು ದೆಹಲಿಯಲ್ಲಿ 4-5 ವರ್ಷಗಳ ಕಾಲ (1993, 1994, 1995...) ರಂಗಕಾರ್ಯಾಗಾರಗಳನ್ನು ನಡೆಸಿರುವರು. ಅವರು ಪಂಜಾಬ್ ವಿಶ್ವವಿದ್ಯಾಲಯ (ಚಂಡೀಗಡ ಡಿಪಾರ್ಟ್‌ಮೆಂಟ್ ಆಫ್ ಥಿಯೇಟರ್ ಅಂಡ್ ಟೆಲಿವಿಷನ್, ಪಾಟಿಯಾಲ), ಮೈಸೂರು ವಿಶ್ವವಿದ್ಯಾನಿಲಯ (ಮೈಸೂರು), ಬೆಂಗಳೂರು ವಿಶ್ವವಿದ್ಯಾಲಯ (ಬೆಂಗಳೂರು), ತಮಿಳು ವಿಶ್ವವಿದ್ಯಾಲಯ (ತಂಜಾವೂರು), ಪಾಂಡಿಚೇರಿ ವಿಶ್ವವಿದ್ಯಾಲಯ (ಪುದುಚೇರಿ), ಉಸ್ಮಾನಿಯಾ ವಿಶ್ವವಿದ್ಯಾಲಯ (ಹೈದರಾಬಾದ್), ಆಂಧ್ರ ವಿಶ್ವವಿದ್ಯಾಲಯ (ವಾಲ್ಟೇರ್ - ವಿಶಾಖಪಟ್ಟಣ), ಅಲಹಾಬಾದ್ ವಿಶ್ವವಿದ್ಯಾಲಯ, ಮರಾಠವಾಡ ವಿಶ್ವವಿದ್ಯಾಲಯ ಮತ್ತು ಕ್ಯಾಲಿಕಟ್ ಯೂನಿವರ್ಸಿಟಿಯ ಸ್ಕೂಲ್ ಆಫ್ ಡ್ರಾಮಾ (ತ್ರಿಚೂರ್)ಗಳಲ್ಲಿನ ನಾಟಕ ವಿಭಾಗಗಳ ಸಂದರ್ಶಕ ಪ್ರಾಧ್ಯಾಪಕನಾಗಿಯಲ್ಲದೆ ಹಲವು ವಿಶ್ವವಿದ್ಯಾಲಯಗಳ ಶೈಕ್ಷಣಿಕ ಪರೀಕ್ಷಾ ಮಂಡಳಿ (Board of Examiners)ಗಳ ಸದಸ್ಯನಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಅವರು 1985ರಂದು ಮೈಸೂರು ವಿಶ್ವವಿದ್ಯಾನಿಲಯದ ದಿ ಫೈನ್ ಆರ್ಟ್ಸ್ ಕಾಲೇಜಿನ ಡಾ. ಗುಬ್ಬಿವೀರಣ್ಣ ಪೀಠದ ಕಾರ್ಯಕ್ರಮದ ಅಂಗವಾಗಿ ಪ್ರಥಮ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ಉತ್ತರ ಪ್ರದೇಶ ಸರಕಾರದ ಸಾಂಸ್ಕೃತಿಕ ಇಲಾಖಾವತಿಯಿಂದ ಭಾರತೇಂದು ನಾಟ್ಯ ಅಕಾಡೆಮಿಯ ರಂಗಕಲೆಗಳ ಕುರಿತಂತೆ ಅದು ಪ್ರಾರಂಭವಾದ 1975ರ ಅವಧಿಯಿಂದ ಆಹ್ವಾನಿತ ಬೋಧಕರಾಗಿದ್ದರು. ಸಂಸ್ಥೆಯು 2 ವರುಷಗಳ ತರಬೇತಿಯನ್ನು ನೀಡುತ್ತಿದೆ. ಅಲ್ಲದೆ ಭೂಪಾಲ (ಸರಕಾರದ ಸಂಸ್ಕೃತಿ ಇಲಾಖೆ), ದಿಲ್ಲಿ (Sri Ram Centre for Art & culture, 1981-82) ಮತ್ತು ಲಖನೌ (ನಾಟ್ಯಸಂಘ)ಗಳಿಂದ ಆಮಂತ್ರಿತರಾಗಿದ್ದರು.

ಶ್ರೀ ರಾಮಮೂರ್ತಿಯವರು ಒಟ್ಟಾರೆ ಸುಮಾರು 200ಕ್ಕೂ ಹೆಚ್ಚು ರಂಗಪ್ರದರ್ಶನಗಳಿಗೆ ವಿವಿಧ ರೀತಿಯ ಸೃಜನಶೀಲ ಹಾಗೂ ಕ್ರಿಯಾಶೀಲ ಕಲಾವಂತಿಕೆ ಮತ್ತು ಪ್ರತಿಭಾವಿಶೇಷವನ್ನು ಬೆಳಕು, ರಂಗಸಂಗೀತ ಸಂಯೋಜನೆ ಮತ್ತು ವಾಸ್ತು ವಿನ್ಯಾಸಗಾರನಾಗಿ ಕಾರ್ಯಗೈದಿರುವರು; ದೇಶ ವಿದೇಶಗಳಲ್ಲಿ ನೆರವೇರಿದ ಹತ್ತಾರು ರಂಗಗೋಷ್ಠಿಗಳು ಮತ್ತು ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರುವರು.

ಅವರು ಮೈಸೂರು ವಿಶ್ವವಿದ್ಯಾನಿಲಯದ ನಾಟಕ ವಿಭಾಗದಿಂದ ಪ್ರಸ್ತುತಗೊಂಡ 'ಗೌತಮಬುದ್ಧ' ನಾಟಕ ಪ್ರದರ್ಶನಕ್ಕೆ ಸಂಗೀತ ಮತ್ತು ರಂಗವಿನ್ಯಾಸದೊಂದಿಗೆ ನಿರ್ದೇಶನ ಮಾಡಿದ್ದರು. ಗೌತಮ ಬುದ್ಧನಾಗಿ ಲಿಂಗಣ್ಣ, ದೇವದತ್ತನಾಗಿ ಹೊರೆಯಾಲ ದೊರೆಸ್ವಾಮಿ ಮತ್ತು ಗೌತಮ ಬುದ್ಧನ ತಂದೆಯಾಗಿ ಡಾ. ಸುಬ್ರಹ್ಮಣ್ಯಂ ಅವರು ಅಭಿನಯಿಸಿದ್ದರು. ಇದೊಂದು ಕಾರ್ಯಾಗಾರದ ನಿರ್ಮಾಣವಾಗಿದ್ದು ಕೆ.ಜೆ. ನಾರಾಯಣ ಶೆಟ್ಟಿಯವರು ತೋರಿದ ಶ್ರದ್ಧೆ ಮತ್ತು ನೀಡಿದ ಸಹಕಾರದಿಂದ ಪ್ರದರ್ಶನವು ಯಶಸ್ವಿಯಾಯಿತು. ಶ್ರೀಮತಿ ಮೀರಾಮೂರ್ತಿಯವರು ವೀಣೆಯನ್ನು ಮತ್ತು ವಿದ್ವಾನ್ ವಿ. ನಾಗಭೂಷಣಾಚಾರ್ ಅವರು ಮೃದಂಗವನ್ನು ನುಡಿಸಿದ್ದರು. ಪ್ರದರ್ಶನದ ಆಡಿಟೋರಿಯಂನಲ್ಲಿ ಹೊರಬರುತ್ತಿದ್ದ ಪ್ರತಿಧ್ವನಿ (Echo)ಯನ್ನು ಶಬ್ದ (Sound)ವನ್ನಾಗಿ ಪರಿವರ್ತಿಸಿ ಬಳಸಲಾಗಿತ್ತು.

ಈ ವಿಭಾಗದ ಇನ್ನೊಂದು ಕಾರ್ಯಾಗಾರದಲ್ಲಿ ಪಿ. ಲಂಕೇಶರ 'ದೊರೆ ಈಡಿಪಸ್' ನಾಟಕವನ್ನು ತಯಾರುಮಾಡಲಾಯಿತು. ಇದಕ್ಕೆ ರಾಮಮೂರ್ತಿಯವರು ಸಂಗೀತ, ಧ್ವನಿ ವಿನ್ಯಾಸ ಮತ್ತು ನಿರ್ದೇಶನ ನೀಡುವುದರೊಂದಿಗೆ ಐದು ವಿವಿಧ ಪ್ರಯೋಗಗಳಿಗೆ ಲೈಟಿಂಗ್ ಮಾಡಿದ್ದರು, ಪಾತ್ರಧಾರಿಗಳಿಗೆ Voice exercise ಮಾಡಿಸಿದ್ದರು. ಹೊರಾಂಗಣವಾಗಿದ್ದರಿಂದ ರಿಹರ್ಸಲ್ ಮಾಡುವ ಪ್ರಾರಂಭದಲ್ಲಿ ಸೊಳ್ಳೆಗಳ ಕಾಟ ವಿಪರೀತವಾಗಿತ್ತು. ಅದನ್ನು ತಡೆಗಟ್ಟಲು ಸಾಂಬ್ರಾಣಿ ಹಾಕಲಾಗುತ್ತಿತ್ತು. ಅದರಿಂದ ಹೊರಡುತ್ತಿದ್ದ ದಟ್ಟ ಹೊಗೆಯೇ ಸ್ಕ್ರೀನ್ ಆಯಿತು ಮತ್ತು ಅದನ್ನು ಪ್ರಯೋಗದಲ್ಲಿ ಬಳಸಿಕೊಳ್ಳಲಾಯಿತು. ಅದರಲ್ಲಿ ಡಾ. ಮೀರಾಮೂರ್ತಿ (ಯುಕಾಸ್ತಾ), ಪ್ರಮುಖ ಈಡಿಪಸ್ ಪಾತ್ರದಲ್ಲಿ ರಘುನಾಥ್, ಕ್ರೆಯಾನ್ ಪಾತ್ರದಲ್ಲಿ ರಾಮನಾಥನ್ ಮತ್ತು ಟೈರಿಷಿಯಸ್ ಪಾತ್ರದಲ್ಲಿ ಹೆಚ್. ವೆಂಕಟೇಶ್ (ರಂಗಮಿತ್ರ) ಅವರು ಅಭಿನಯಿಸಿದ್ದರು. ಇದನ್ನು ವೀಕ್ಷಿಸಿದ ಪ್ರತಿಷ್ಠಿತ ಶಿಕ್ಷಣತಜ್ಞರಾದ ಪ್ರೊ. ಸಿ.ಡಿ. ನರಸಿಂಹಯ್ಯನವರು Very fantastic ಅಂದರೆ ಡಾ. ವೈ.ಪಿ. ರುದ್ರಪ್ಪನವರು excellent ಅಂದರು. ಡಿ.ವಿ. ಅರಸ್ ಅವರು ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್ ಆಗಿದ್ದಾಗ ಯೂನಿವರ್ಸಿಟಿಯ ಒಂದು ವಿಶೇಷ ಸಂದರ್ಭದಲ್ಲಿ ಪೀಟರ್ ಕೋವ್ (Peter Kov)

ಅವರಿಂದ ಒಂದು ಕಾರ್ಯಾಗಾರವನ್ನು ವ್ಯವಸ್ಥೆಗೊಳಿಸಿದ್ದರು. ಸ್ಪ್ಯಾನಿಷ್ ಕವಿ, ನಟ ಫೆಡ್ರಿಕೊ ಗಾರ್ಸಿಯಾ ಲೋರ್ಕಾ (Federico Garcia Lorca - 1898-1936) ಬರೆದ 'To Night We Improvise' ನಾಟಕವನ್ನು ಪ್ರದರ್ಶಿಸಲಾಯಿತು. ಅದಕ್ಕಾಗಿ ಫೈನ್ ಆರ್ಟ್ಸ್ ಕಾಲೇಜಿನ ಸ್ಪೆಷಲ್ ಚಾಚುವೇದಿಕೆಯನ್ನು ಕಟ್ಟಿಸಿದ್ದರು. ಅದನ್ನೇ 'ಈಡಿಪಸ್ ರೆಕ್ಸ್' ಪ್ರದರ್ಶನಕ್ಕೆ ಬಳಸಲಾಯಿತು (ಅನುವಾದ : ಪಿ. ಲಂಕೇಶ್). ಲೋರ್ಕಾ ಅವರ ಸೋದರ ಸಂಬಂಧಿ Oswaldo Reo Francos ಎನ್ನುವವರು ಲೋರ್ಕಾ ಥಿಯೇಟರ್ ಅನ್ನುವುದರ ಮೂಲಕ ಲೋರ್ಕಾ ಅವರು ನಾಟಕಗಳನ್ನೇ ನಿರ್ಮಾಣ ಮಾಡುತ್ತಿದ್ದರು. ಅದರ ವತಿಯಿಂದ ಅವರು ನಿರ್ದೇಶಿಸಿದ Lorenನ 'The House of Bernarda Alba' ನಾಟಕಕ್ಕೆ ಶ್ರೀ ರಾಮಮೂರ್ತಿಯವರು ಪ್ರಸಾಧನಗೈದಿದ್ದರು. ಮೈಸೂರಿನ ಇನ್ನೊಂದು ಕಾರ್ಯಾಗಾರದಲ್ಲಿ ಸಿದ್ಧವಾದ ಶ್ರೀರಂಗರ 'ರಂಗಭಾರತ' (ನಿ : ಆರ್. ನಾಗೇಶ್)ದ ಪ್ರದರ್ಶನವು 1978ರಲ್ಲಿ ಪ್ರದರ್ಶನಗೊಂಡಿತು.

ಚಿಕ್ಕಮಗಳೂರು ಮತ್ತು ಬೀದರ್‌ನಲ್ಲಿ ಬಿ. ಜಯಶ್ರೀಯವರು ನಿರ್ದೇಶಿಸಿದ ಎರಡು ಕಾರ್ಯಾಗಾರಗಳಲ್ಲಿ ಬೆಳಕು ವಿನ್ಯಾಸದ ಬಗ್ಗೆ ತರಗತಿಗಳನ್ನು ನಡೆಸಿದರು. ಪ್ರೊ. ಎಂ.ಎಚ್. ಕೃಷ್ಣಯ್ಯನವರ ನೇತೃತ್ವದಲ್ಲಿ ಭಾರತೀಯ ವಿದ್ಯಾಭವನದಲ್ಲಿ ಪತ್ರಿಕಾ ವಿಮರ್ಶಕರಿಗಾಗಿ ನೆರವೇರಿದ 'ರಂಗಭೂಮಿ ಮತ್ತು ಚಿತ್ರಕಲೆಗಳು' ಎಂಬ ಕಾರ್ಯಾಗಾರವು ನೆರವೇರಲು ಆರ್.ಎನ್. ಹಡಪದ್ ಮತ್ತು ಶ್ರೀ ರಾಮಮೂರ್ತಿಯವರು ಭಾಗವಹಿಸಿದ್ದರು. 'ಕ್ರಿಯಾಶೀಲವಾಗಿ ಕಲೆ' (Art in Action) ಎಂಬ ಶೀರ್ಷಿಕೆಯಡಿಯಲ್ಲಿ ಕೂರ್ಗ್ ಫೌಂಡೇಷನ್ ವತಿಯಿಂದ ವಿರಾಜಪೇಟೆಯ ಮಹಿಳೆಯರ ಕಾಲೇಜಿನಲ್ಲಿ ವಿದ್ಯಾರ್ಥಿನಿಯರಿಗಾಗಿ ಮುತ್ತೂರು ಕೃಷ್ಣಮೂರ್ತಿ, ಜಯಪ್ರಕಾಶ ನಾಗತಿಹಳ್ಳಿ ಮತ್ತು ಹೆಚ್.ಎನ್. ಸುರೇಶ್ ಅವರ ನೇತೃತ್ವದಲ್ಲಿ ಮೌನಾಭಿನಯ (Mime) ಕಾರ್ಯಾಗಾರವು ನೆರವೇರಲು ಶ್ರೀ ರಾಮಮೂರ್ತಿ ಮತ್ತು ವಾಲ್ಟೇರ್ ಡಿಸೋಜಾ ಅವರು ಒಡಗೂಡಿ ಈ ಕೈಂಕರ್ಯವನ್ನು ನಿರ್ವಹಿಸಿದ್ದರು. ಗೆಳೆಯರ ಬಳಗದ ಶ್ರೀನಿವಾಸ ಅವರ ಸಹಾಯದಿಂದ ಎಡಿಟ್ ಮಾಡಿ ರಾಮಮೂರ್ತಿಯವರು ನಿರ್ದೇಶಿಸಿದ ಬೇಂದ್ರೆಯವರ 'ಸಾಯೋ ಆಟ'ವು ಗೋಣಿಕೊಪ್ಪಲಿನ ಕಾಲೇಜೊಂದರಲ್ಲಿ ಪ್ರದರ್ಶನ ಕಂಡಿತು.

ಆಂಧ್ರಪ್ರದೇಶದ ಸಂಗೀತ ನಾಟಕ ಅಕಾಡೆಮಿ ವತಿಯಿಂದ (ಹೈದರಾಬಾದ್, 1973) ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಕಾರ್ಯಾಗಾರ ಮಾಡಿ 'ಶಿರ್ಡಾಕಿ ಯಮದರ್ಶನಮ್' (ರ : ಆಂಧ್ರ, ಯೂನಿವರ್ಸಿಟಿಯ ಅಧ್ಯಾಪಕ ಅಬ್ಬೂರಿ ಗೋಪಾಲಕೃಷ್ಣ) ತೆಲುಗು ನಾಟಕವನ್ನು ಪ್ರದರ್ಶಿಸಲು ವಿ. ರಾಮಮೂರ್ತಿಯವರು ಲೈಟಿಂಗ್ ಮಾಡಿದ್ದರು (ನಿ

: ಪಾಟ್ನಾ ಶ್ರೀರಾಮುಲು). ಅವರು ಯುವಜನ ಮತ್ತು ಕ್ರೀಡಾ ಇಲಾಖಾವತಿಯಿಂದ ಜಯಪ್ರಕಾಶ್ ನಾಗತಿಹಳ್ಳಿಯವರು Youth writers and Artists Guildನ ಅಧ್ಯಕ್ಷರಾಗಿದ್ದಾಗ ಒಂದು Mime workshop (ಮೌನಾಭಿನಯ ಶಿಬಿರ)ವನ್ನು ನಿರ್ದೇಶಿಸಿದ್ದರು. ಅವರೊಡನೆ ಹೆಚ್.ವಿ. ವೆಂಕಟಸುಬ್ಬಯ್ಯ ಮತ್ತು ವಾಲ್ಟೇರ್ ಡಿಸೋಜಾ ಅವರು ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಒಂದು Mime show ಕೂಡಾ ನಡೆಯಿತು. ಬಿ.ವಿ. ವೈಕುಂಠರಾಜು ಅವರು ಸಮಾರೋಪದಂದು ಶಿಬಿರಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಿದರು. ಹೀಗೆ ಸೋದಾಹರಣವಾಗಿ ಸಂಭಾಷಿಸುತ್ತಿರಲು ಅವರು, "ನೋಡಿ, ಒಮ್ಮೆ ನೂಪುರ ಸ್ಕೂಲ್‌ನ ನಿರ್ದೇಶಕ ಮೈಸೂರು ರಮಾನಂದ (ಗೆಜ್ಜೆಹೆಜ್ಜೆ) ಅವರು ಜುಲೈ 21 ರಿಂದ 30, 2004ರಂದು ಸ್ಪಾನ್ಸರ್ ಮಾಡಿದ್ದ 50-60 ಜನರು ಭಾಗಿಯಾಗಿದ್ದ Mime Workshop ನಡೀತು. ಇದರ ಅಧ್ಯಕ್ಷತೆ ವಹಿಸಿದ್ದವರು ಲಲಿತಾ ಶ್ರೀನಿವಾಸ ಅವರು.

'ನಯನ' ರಂಗಮಂದಿರವು ಕಿಕ್ಕಿರಿದು ತುಂಬಿತ್ತು. ಆದ್ದರಿಂದ ಭಾಗಿಗಳಾಗಿದ್ದವರನ್ನು ಗುಂಪುಗಳಾಗಿ divide ಮಾಡ್ದೆ. ಒಬ್ಬೊಬ್ಬರಿಗೆ ಒಂದೊಂದು ಕ್ರಿಯೆ ಮಾಡಿ ಎಂದು ಹೇಳಿದೆ - ನೀವು ಮಾಡ್ತಾ ಹೋದಹಾಗೆ ನಾನೂ ತಿದ್ದುತಾ ಹೋಗ್ತೀನಿ' ಅಂದೆ. ಅವರು ಒಪ್ಪಿಕೊಂಡ್ರು. ಎಲ್ಲವೂ ಸಾಂಗವಾಗಿ ನೆರವೇರಿತು. ಅಂದು ಶಿಬಿರದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ರಾಷ್ಟ್ರೀಯ ನಾಟಕ ಶಾಲಾ ಪ್ರಾದೇಶಿಕ ಸಂಪನ್ಮೂಲ ಕೇಂದ್ರದ ನಿರ್ದೇಶಕರಾಗಿದ್ದ ಸುರೇಶ್ ಆನಗಳ್ಳಿಯವರು ಹೀಗೆ ಅಭಿಪ್ರಾಯಪಟ್ಟರು : 'ಮೈಮ್ ಒಂದು ಕುತೂಹಲಕಾರಿಯಾದ ವಿಚಾರ. ರಂಗಭೂಮಿಯಲ್ಲಿ ಮೊದಲು ಹುಟ್ಟಿದ್ದೇ ಮೈಮ್. ಭಾಷಾತೀತ ಸಂಕೇತವಾದ ಒಂದು ವಿಸ್ಮಯ. ಮೈಮ್ ಶಿಬಿರದ ನಿರ್ದೇಶಕ ರಾಮಮೂರ್ತಿಯವರು ಅದನ್ನು ದಕ್ಕಿಸಿಕೊಂಡು ವಿಸ್ಮಯವನ್ನುಂಟು ಮಾಡಿದ್ದಾರೆ.'*

ಕರ್ನಾಟಕ ಕಲಾಪರಿಷತ್ ವತಿಯಿಂದ ಬೆಂಗಳೂರಿನ ಚಿತ್ರಪರಿಷತ್‌ನಲ್ಲಿ ವಿಮಲಾ ರಂಗಾಚಾರ್ ಮತ್ತು ಹೆಚ್.ಎನ್. ಸುರೇಶ್ ಅವರು ಏರ್ಪಡಿಸಿದ್ದ ಮುಖವಾಡಗಳನ್ನು ತಯಾರಿಸುವ ಕಮ್ಮಟಕ್ಕೆ ಶ್ರೀ ರಾಮಮೂರ್ತಿಯವರು ನಿರ್ದೇಶಕರಾಗಿದ್ದರು. ಅವರಿಗೆ ಅತ್ಯಂತ ಸಹಕಾರ ನೀಡಿದವರು ಸುರೇಶ್ ಆನಗಳ್ಳಿ ಮತ್ತು NSD-RRC (NSD - Regional Resource Centre)ನಲ್ಲಿ ಕೆಲಸ ಮಾಡುತ್ತಿದ್ದ ಎಲ್.ವಿ.ಎನ್. ನಾಗಭೂಷಣ್ ಅವರು. ಅಲ್ಲದೆ ಚಿತ್ರಕಲಾ ಪರಿಷತ್ತಿನ ಕಾರ್ಯದರ್ಶಿಯಾಗಿದ್ದ ನಂಜುಂಡರಾವ್ ಅವರ ಸಹಕಾರವಿತ್ತು. ಅದರಲ್ಲಿ ಪರಿಷತ್ತಿನ ಸುಮಾರು 45 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಂದರ್ಶಕ ಅಧ್ಯಾಪಕರಾಗಿ ಎಂ.ಎಚ್. ಕೃಷ್ಣಯ್ಯನವರು ಮುಖವಾಡಗಳ ವಿಧಿವಿಧಾನಗಳ ಬಗ್ಗೆ ಮಾಹಿತಿಯನ್ನು ನೀಡಿದರು.

ವಿವಿಧ ರೀತಿಯ 7 ಮುಖವಾಡಗಳನ್ನು ತಯಾರಿಸಲಾಗಿತ್ತು. ಅಷ್ಟೇ ಅಲ್ಲದೆ ಕರ್ನಾಟಕ ಕ್ರಾಫ್ಟ್ಸ್ ಕೌನ್ಸಿಲ್ ವತಿಯಿಂದ ವೃತ್ತಿಪರರಾಗಿ ಮುಖವಾಡಗಳನ್ನು ಬೇರೆ ಬೇರೆ ರೀತಿಯಲ್ಲಿ ವಿಧಿವಿಧಾನಗಳಲ್ಲಿ ಬಳಸುವುದನ್ನು ತಿಳಿಸಿಕೊಡಲಾಯಿತು. ಕೇರಳದ ಕುಂಚ ಕಲಾವಿದ ಬಾಲನ್ ನಂಬಿಯಾರ್ ಅವರೂ ಮುಖವಾಡಗಳ ಬಗ್ಗೆ ಸ್ಲೈಡ್ಸ್ ಮೂಲಕ ಮಾಹಿತಿ ನೀಡಿದರು.

ಒಂದು ಮೆಲುಕು : ಬೆಂಗಳೂರಿನ 'ನಾಟ್ಯಸಂಘ ಥಿಯೇಟರ್ ಸೆಂಟರ್' ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ 7 ನವೆಂಬರ್ 1980ರಿಂದ ನೆರವೇರಿದ 5 ದಿನಗಳ ಅಖಿಲ ಭಾರತ ಕನ್ನಡ ನಾಟಕೋತ್ಸವದಲ್ಲಿ ಬಿ.ವಿ. ರಾಜಾರಾಂರವರ 'ಕಲಾಗಂಗೋತ್ರಿ'ಯು ಪ್ರದರ್ಶಿಸಿದ ವಿ. ರಾಮಮೂರ್ತಿಯವರು ನಿರ್ದೇಶಿಸಿದ 'ಮೈಮ್ ಶೋ' ಸೊಗಸಾದ ಮನೋರಂಜನೆಯನ್ನು ನೀಡಿ ರಿಲೀಫ್ ಕೊಟ್ಟಿತು. 'ಗಂಗಾವತರಣ'ದ ಒಂದೆರಡು ಪ್ರಸಂಗಗಳು ಪೇಲವವಾದರೂ 'ಜಂತರ್‌ಮಂತರ್' ಪ್ರಸಂಗ ಹಾಗೂ 'ಪತ್ರಿಕಾ ದಿಗ್ಬಂಧನ ಪೂರ್ವೋತ್ತರ' ಕೊನೆಯ ಪ್ರಸಂಗವು ತುಂಬಾ ಮನೋಜ್ಞವಾಗಿ ಮೂಡಿಬಂದಿತು'* ಮೈಮ್ ಶೋಗಳು ವಿರಳವಾಗಿದ್ದ ಸನ್ನಿವೇಶದಲ್ಲಿ ಬೆಂಗಳೂರಿನ 'ಕಲಾಗಂಗೋತ್ರಿ'ಯು ನೀಡಿದ 1500 ಪ್ರದರ್ಶನಗಳು ದಾಖಲೆಯಾಗಿವೆ. ಒಂದೊಂದು ನಾಟಕ ನಿರ್ಮಾಣದ ಖರ್ಚುವೆಚ್ಚವು 10 ರಿಂದ 25 ಸಾವಿರದವರೆಗೂ ತಗುಲುತ್ತಿದ್ದ ಕಾಲದಲ್ಲಿ ಕೇವಲ 2000 ರೂಪಾಯಿಯಲ್ಲಿ ನಿರ್ಮಾಣಗೊಂಡ 'ಮೂಕಿ - ಟಾಕಿ'ಯು ಹಲವಾರು ಪ್ರದರ್ಶನಗಳನ್ನು ಕಾಣುವ ಮೂಲಕ ತಂಡಕ್ಕೆ ಆರ್ಥಿಕ ಬೆಂಬಲವನ್ನು ಗಳಿಸಿಕೊಟ್ಟಿತು.**

ಹೀಗೆ ಮೌನಾಭಿನಯಪಟುವೂ ಆದ ಶ್ರೀ ರಾಮಮೂರ್ತಿಯವರು ಅನೇಕ ಶಿಬಿರಗಳನ್ನು ನೆರವೇರಿಸಿಕೊಟ್ಟು ರಂಗಕಲಾವಿದರನ್ನು ಉತ್ತೇಜಿಸಿದ್ದಾರೆ.

## ನಟನೆ

ನಟನಾಕೌಶಲ್ಯ ಮತ್ತು ದಿಗ್ದರ್ಶನದ ಬಗೆಗೆ ಅತೀವ ಗೌರವಾಭಿಮಾನ ಮತ್ತು ಮೆಚ್ಚುಗೆಯನ್ನಿಟ್ಟುಕೊಂಡಿರುವ ಶ್ರೀ ರಾಮಮೂರ್ತಿಯವರು ಈ ಕುರಿತು ತಾದಾತ್ಮ್ಯದಿಂದ ನುಡಿಯಬಲ್ಲರು : 'Acting is the most difficult profession in the theatre world, the next is direction'. ಅವರು ತಮ್ಮ ರಂಗಜೀವನಪಥದಲ್ಲಿ ತಮ್ಮ ಕಾಲೇಜಿನಲ್ಲಿ ಅಭಿನಯಿಸಿದ ಮೊದಲ ನಾಟಕವೆಂದರೆ 'ಪುನರ್ಜನ್ಮ'. ಭಾರತೀಯರು ನಿಧನಾನಂತರ ತಮ್ಮ ಮುಂದಿನ ಜನ್ಮದಲ್ಲಿ ನಂಬಿಕೆಯನ್ನಿಟ್ಟಿರುವುದರ ಕಥಾವಸ್ತುವಿದು. ಇದರಲ್ಲಿ ಅವರು ಯಮದೂತನ ಪಾತ್ರದಲ್ಲಿಯೂ, ಚಿತ್ರಗುಪ್ತನಾಗಿ ಆರ್.ಎನ್. ಜಯಗೋಪಾಲ್ ಹಾಗೂ ರಾಜಾಜಿ

ವಿದ್ಯಾವರ್ಧಕ ಸಂಘದ ಸಂಸ್ಥಾಪಕರಾದ ಕೆ.ಎನ್. ಶ್ರೀಹರಿಯವರು ಲಕ್ಷ್ಮಯ್ಯನಾಗಿ ಪಾತ್ರನಿರ್ವಹಿಸಿದ್ದರು (ರ : ರಾ.ವೆಂ. ಶ್ರೀನಿವಾಸ); ಪ್ರಾರಂಭಿಕ ಹಂತದಲ್ಲಿಯೇ 'ಕಲಾನಿಕೇತನ'ದ ನಟನಾಗಿ ರಂಗವನ್ನು ಪ್ರವೇಶಿಸಿದ್ದರು. 'ಶ್ರೀರಾಮ್' (ಎಂ.ವಿ. ಶ್ರೀನಾಥ್ ಮತ್ತು ವಿ. ರಾಮಮೂರ್ತಿ ಸಂಯುಕ್ತ ಸಂಕ್ಷಿಪ್ತ ನಾಮಧೇಯ)ರು ಒಟ್ಟಿಗೆ ಬರೆದು ನಿರ್ದೇಶಿಸಿದ 'ಪ್ಲಾಸ್ಟಿಕ್ ಕೈ', ಕ್ಷೀರಸಾಗರರ 'ರೂಪಾಯಿ ಗಿಡ', 'ಕಲಹ ಕುತೂಹಲ', ಪರ್ವತವಾಣಿಯವರ 'ಸುಂದ್ರೋಪಸುಂದ್ರು', ಕೈವಾರ ರಾಜಾರಾಯರ 'ಮಲ್ಲಿಗೆ ಚಪ್ಪರ'ದಲ್ಲಿ ನಟಿಸಿದ್ದರು. ಎಂ.ಎಸ್. ನಾಗರಾಜರ 'ರಾಹುಕಾಲ', 'ಕುಲಗೇಡಿ' ಹಾಗೂ 'ಕಲಾನಿಕೇತನ'ದಿಂದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪ್ರದರ್ಶನಗೊಂಡ 'ಹುತಾತ್ಮ'ದಲ್ಲಿ ಅಭಿನಯಿಸುವುದರೊಂದಿಗೆ ನಿರ್ದೇಶಿಸಿದ್ದರು ಕೂಡಾ. 'ನಾಟ್ಯಸಂಘ' ಅರ್ಪಿಸಿದ ಎಂ.ಆರ್. ಶ್ರೀ. ವಿರಚಿತ 'ನಾಗರಿಕ' ನಾಟಕದಲ್ಲಿ ಋಷಿಯಾಗಿ ಪಾತ್ರವಹಿಸಿದ್ದರೆ ಎಂ.ಎಸ್. ನಾಗರಾಜ (ನಾಗರಿಕ), ಪರ್ವತವಾಣಿ (ಪೂಜಾರಿ) ಮತ್ತು ಟಿ. ದ್ವಾರಕಾನಾಥ್ (ದೇವರು) ಅವರು ಇತರೆ ಪಾತ್ರಗಳನ್ನು ವಹಿಸಿದ್ದರು. ಬಿ.ಎಸ್. ನಾಣಿಯವರು ಸೆಟ್, ಲೈಟಿಂಗ್ ಮತ್ತು ಮೇಕಪ್ ನೇಪಥ್ಯ ಕಾರ್ಯಗಳನ್ನು ನಿರ್ವಹಿಸಿದ್ದರು. ಎನ್.ಎಸ್.ಡಿ. ಆಯೋಜಿಸಿದ ಬಿ.ವಿ. ಕಾರಂತರ ನಿರ್ದೇಶಿತ 'ಪಂಜರ ಶಾಲೆ'ಗೆ ಶ್ರೀ ರಾಮಮೂರ್ತಿಯವರು ಲೈಟಿಂಗ್ ಮಾಡಿದ್ದರು. ಇಕ್ಬಾಲ್ ಅಹ್ಮದ್ ನಿರ್ದೇಶಿತ ಇದೇ ನಾಟಕಕ್ಕೆ ಅವರು ಸಂಗೀತವನ್ನು ನೀಡಿದ್ದರಾದರೂ ಕಾರಣಾಂತರಗಳಿಂದ ಅದು ಪ್ರದರ್ಶನಗೊಳ್ಳಲಿಲ್ಲ.

ಬಿ.ಎಲ್.ಟಿ. (1959)ಯು ನೀಡಿದ ಮುಖ್ಯ ಫ್ರೆಂಚ್ ವೈನೋದಿಕ ನಾಟಕಕಾರ, ನಟ ಮೋಲಿಯೇರ್‌ನ 'Prodigious snob'ನಲ್ಲಿ ಶ್ರೀ ರಾಮಮೂರ್ತಿಯವರು ನಾಯಕ ಕೋವಿಯಲ್ (Covielle) ಪಾತ್ರವನ್ನೂ, ಬಿ.ಸಿ.ಯವರು ಡಂಬಾಚಾರಿಯಾಗಿಯೂ ಮತ್ತು ಆತನ ಮಡದಿಯಾಗಿ ಮಾರ್ಗರೇಟ್ ಟಾಡ್ ಹಾಗೂ ಕ್ಲಿಯೊಂನಟೆ (Clieonte) ಪಾತ್ರದಲ್ಲಿ ಉಪಾಸನಾ ಸೀತಾರಾಂ ಅವರು ಅಭಿನಯಿಸಿದ್ದರು. ಸಿ.ಆರ್. ಸಿಂಹ ಅವರು ಫೆನ್ಸಿಂಗ್ ಪ್ರಾಕ್ಟೀಸ್ ಮಾಡಿಸುತ್ತಿದ್ದರು. ಶ್ರೀ ರಾಮಮೂರ್ತಿಯವರು ತಮ್ಮ ಎನ್.ಎಸ್.ಡಿ.ಯಲ್ಲಿನ ಕಲಿಕಾವಧಿಯ ಮೊದಲನೆಯ ವರ್ಷದಲ್ಲಿ ಹಿಂದಿ ನಾಟಕಗಳಲ್ಲಿ ನಟಿಸಿದ್ದರು. 'ದೋ ಕಲಾಕಾರ್'ನಲ್ಲಿ ಪ್ರಮುಖ ಪಾತ್ರವೊಂದನ್ನು ನಿರ್ವಹಿಸಿದ್ದರು. ಅವರೊಡನೆ ಓಂ ಶಿವಪುರಿ, ಆನಂದ ಮಥಾಯ್ ಮತ್ತು ಶ್ಯಾಂಲಾಲ್‌ಧರ್ ಅಭಿನಯಿಸಿದ್ದರು. ಇದರಲ್ಲಿನ ಹಿಂದಿ ಸಂಭಾಷಣೆಯನ್ನು ಇಂಗ್ಲಿಷ್ ಶೈಲಿಯಲ್ಲಿ ಉಚ್ಚರಿಸಲಾಗುತ್ತಿದ್ದುದು ವಿಶೇಷವಾಗಿದ್ದಿತು. 'ಅಂಧೇರಿ ನಗರಿ ಚೌಪಟ್ ರಾಜಾ' ಪ್ರದರ್ಶನದಲ್ಲಿ ರಾಜನ ಪ್ರಮುಖ ಪಾತ್ರವಹಿಸಿದ್ದರು. ಇದನ್ನು

ಒರಿಸ್ಸಾದ ಬಿ.ಕೆ. ಗಿರಿಯವರು ಸಂಗೀತವನ್ನೊದಗಿಸುವುದರೊಂದಿಗೆ ನಿರ್ದೇಶಿಸಿದ್ದರು. ಸಖಿಯರಾಗಿ ಪುಣೆ - ಬಾಂಬೆಯ ಸಾಹಿ ಪರಾಂಜಪೆ ಮತ್ತು ಗ್ವಾಲಿಯರ್‌ನ ಮೀನಾ ವಿಲಿಯಮ್ಸ್ ಅವರು ಕಾಣಿಸಿಕೊಂಡಿದ್ದರು. ಮೀನಾ ವಿಲಿಯಮ್ಸ್ ಅವರು ICCRನ ರೀಜನಲ್ ಡೈರೆಕ್ಟರ್ ಆಗಿ ಬೆಂಗಳೂರಿಗೆ ಆಗಮಿಸಿ ಇಲ್ಲಿ ಮೂರು ವರುಷಗಳ ಕಾಲವಿದ್ದರು. ಅವರ ಮಾತೃಭಾಷೆ ಹಿಂದಿಯಾಗಿದ್ದರೂ ಸೊಗಸಾದ ಕನ್ನಡ ಆಡುಭಾಷೆಯನ್ನು ಕಲಿತಿದ್ದರು. ಅವರು ತಮ್ಮ ವಿವಾಹದ ನಂತರ ಮೀನಾ ಜೇಕಬ್ ಎಂದಾದರು. ಈ ನಾಟಕದಲ್ಲಿ ಓಂ ಶಿವಪುರಿಯವರೂ ಅಭಿನಯಿಸಿದ್ದರು. ಎರಡನೆಯ ವರ್ಷದಲ್ಲಿ ಪ್ರೊ. ಅಲ್ಕಾಜಿಯವರು ನಿರ್ದೇಶಿಸಿದ 'ಆಷಾಢ್ ಕಾ ಏಕ್ ದಿನ್' ನಾಟಕದಲ್ಲಿ ಶ್ರೀ ರಾಮಮೂರ್ತಿಯವರು ಅನುನಾಸಿಕನ ಪಾತ್ರವಹಿಸಿದ್ದರು. ತಾವು ಪಾತ್ರ ಮಾಡದಿದ್ದ ದಿನದಂದು ಎಸ್.ಎನ್. ದಾಸಗುಪ್ತಾ ಅವರಿಗೆ ಸಹಾಯಕನಾಗಿ ಕಾರ್ಯನಿರ್ವಹಿಸುತ್ತಿದ್ದರು. ಎನ್.ಎಸ್.ಡಿ.ಯ ಪ್ರಾತಿನಿಧಿಕ ನಾಟಕಗಳಲ್ಲೊಂದಾದ 'ತುಘಲಕ್'ನಲ್ಲಿ ಸ್ಟೇಜ್ ಮ್ಯಾನೇಜ್‌ಮೆಂಟ್ ಜೊತೆಗೆ ಡಂಗೂರದವನ ಪಾತ್ರವಹಿಸಿದ್ದರು. ಈ ಪ್ರದರ್ಶನದಲ್ಲಿನ ಉರ್ದು ಭಾಷೆಯ ಉಚ್ಚಾರಣೆಯನ್ನು ಕುರಿತು ಪತ್ರಿಕೆಗಳು ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದವು. ಡೆಲ್ಲಿ 'ಕನ್ನಡ ಭಾರತಿ'ಗಾಗಿ ಪ್ರಸನ್ನರವರು ನಿರ್ದೇಶಿಸಿದ 'ಅನಾಮಧೇಯ'ರ 'ಕದಡಿದ ನೀರು' ನಾಟಕದಲ್ಲಿ ಒಬ್ಬ ರಣ ಉಗ್ರ 'ಹುಚ್ಚೆ'ರಾಚ್ಯಾನ ಪಾತ್ರವನ್ನು ಅಭಿನಯಿಸಿದ್ದರು.

ಯೂನಿವರ್ಸಿಟಿಯ ವಿದ್ಯಾರ್ಥಿಯಾಗಿದ್ದಾಗ Dick Backarrad ನಿರ್ದೇಶಿಸಿದ ಷೇಕ್ಸ್‌ಪಿಯರ್‌ನ 'ಒಥೆಲೋ' ನಾಟಕದಲ್ಲಿ ಇಯಾಗೋ ಪಾತ್ರವನ್ನು ನಿರ್ವಹಿಸಿದ್ದರು. ಇದಕ್ಕೂ ಮೊದಲು British National Theatreಗಾಗಿ John Dexter ಅವರು 'ಒಥೆಲೋ' ನಾಟಕವನ್ನು ನಿರ್ದೇಶಿಸಿದ್ದರು. ಒಥೆಲೊ ಪಾತ್ರವನ್ನು ನಟ Lord Laurence Kerr Olivier ಅವರು ವಹಿಸಿದ್ದರು. ಒಥೆಲೋ ಒಬ್ಬ ಮೂರ್ (Moore) ಆಫ್ರಿಕಾ ಜನಾಂಗದ ವ್ಯಕ್ತಿಯಾಗಿದ್ದುದರಿಂದ Olivier ಅವರು ಮೂರ್ ಪಂಗಡದ ದಪ್ಪ ಧ್ವನಿ ಬರುವ ಹಾಗೆ Voice exercise ಮಾಡಿದ್ದರು ಮತ್ತು ಕಪ್ಪುಬಣ್ಣದ ಮೇಕಪ್ ಮಾಡಿಕೊಂಡಿದ್ದರು. Frank Finley ಎಂಬುವ ನಟ ಇಯಾಗೋವಾಗಿ ಹಾಗೂ Olivir ಅವರು Spartacus Revolutionaryಯಲ್ಲಿ ಸೈನ್ಯಾಧಿಕಾರಿ ಪಾತ್ರದಲ್ಲಿದ್ದರು. ಶ್ರೀ ರಾಮಮೂರ್ತಿಯವರು ಬ್ರಿಟಿಷ್ ನಟ, ನಿರ್ದೇಶಕ ಜ್ಯೂಲಿಯಸ್ ಪಾತ್ರಖ್ಯಾತಿ Sri Arthur John Gielgud, Michael Redgrave ಮತ್ತು ಅವರ ಹಿರಿಯ ಮಗಳು, ನಟಿ Vanessa Redgrave ಅವರನ್ನು ಭೇಟಿಯಾಗಿದ್ದರು.

## ನಿರ್ದೇಶನ

ವಿ. ರಾಮಮೂರ್ತಿಯವರು ರಂಗವೇದಿಕೆ ಹಾಗೂ ಸಭಾಂಗಣದಲ್ಲಿನ ವಿವಿಧ ವಿಭಾಗಗಳಲ್ಲಿನ ಪರಿಣತ ನೇಪಥ್ಯಗಾರನೆಂತೋ ಅಂತೆಯೇ ಓರ್ವ ದಕ್ಷ ರಂಗ ನಿರ್ದೇಶಕನಾಗಿಯೂ ಹೆಸರಾಂತರಾಗಿರುವುದು ಅಭಿಮಾನ ತಳೆವ ಸಂಗತಿಯಾಗಿದೆ. ಶ್ರೀರಂಗರ 100ನೇ ವರ್ಧಂತಿಯ ನಾಟಕೋತ್ಸವದ ಸಂದರ್ಭದ ಕಡೆಯ ದಿನದಂದು ರವೀಂದ್ರ ಕಲಾಕ್ಷೇತ್ರದಲ್ಲಿ ಕೆ.ವಿ. ನಾಗರಾಜಮೂರ್ತಿಯವರ 'ಪ್ರಯೋಗರಂಗ'ದಿಂದ ಪ್ರದರ್ಶನ ಕಂಡ 'ಸಿರಿಪುರಂದರ' ನಾಟಕವನ್ನು ರಂಗವಿನ್ಯಾಸದೊಂದಿಗೆ ನಿರ್ದೇಶಿಸಿದರು (ಬೆಳಕು ವಿನ್ಯಾಸ : ಅ.ನ. ರಮೇಶ್) ಹಾಗೂ ಅಂದು ಅವರು ಸನ್ಮಾನಿಸಲ್ಪಟ್ಟರು. ಖ್ಯಾತ ಸಾಹಿತಿ ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರರ 'ಹಳ್ಳಿಯ ಚಿತ್ರಗಳು' ಸಣ್ಣ ಕಥೆಗಳ ರಂಗರೂಪ 'ಜೋಡಿದಾರರು' (ನಾಟಕ ರೂಪ : ತುಮಕೂರು ಶಿವಕುಮಾರ, ನಿರ್ಮಾಣ : ತುಮಕೂರಿನ 'ನಾಟಕಮನೆ'ಯ ಮಹಾಲಿಂಗು ಮತ್ತು ಪತ್ರಕರ್ತ ಕೋಟೆ ನಾಗಭೂಷಣ) ನಾಟಕವನ್ನು ನಿರ್ದೇಶಿಸುವುದರೊಂದಿಗೆ ರಂಗವಿನ್ಯಾಸಗೊಳಿಸಿದರು. ಗೋಪಾಲಕೃಷ್ಣ ನಾಯರಿಯವರು ಲೈಟಿಂಗ್ ಮಾಡಿದ್ದರು. ಇದರ ಮೊದಲನೆಯ ಪ್ರದರ್ಶನವು ತುಮಕೂರಿನ ಗುಬ್ಬಿವೀರಣ್ಣ ರಂಗಮಂದಿರದಲ್ಲಿಯೂ, ತದನಂತರದ ಪ್ರದರ್ಶನಗಳು ಬೆಂಗಳೂರಿನ ಹೆಚ್.ಎನ್. ಕಲಾಕ್ಷೇತ್ರ, ರವೀಂದ್ರ ಕಲಾಕ್ಷೇತ್ರ ಮತ್ತು ಎ.ಡಿ.ಎ. ರಂಗಮಂದಿರದಲ್ಲಾದವು. ಆ ಸಂದರ್ಭದಲ್ಲಿ ಕಲಾಕ್ಷೇತ್ರದಲ್ಲಿ ಡಾ. ರಾಮಸ್ವಾಮಿಯವರ ಸಿದ್ಧಿ ಸಾಧನೆಗಳ ಕುರಿತು ಸೆಮಿನಾರ್ ನೆರವೇರಿತು.

ಅವರು ಕೈವಾರ ರಾಜಾರಾವ್, ಎಂ.ಆರ್.ಶ್ರೀ. ಮತ್ತಿತರ ಪ್ರಸಿದ್ಧ ನಾಟಕಕಾರರ ರಚನೆಗಳನ್ನು ರಂಗಕ್ಕೆ ತಂದು ರಂಗೇರಿಸಿದ್ದಾರೆ. ಅಲ್ಲದೆ ಓರ್ವ ರಂಗಕೃತಿಗಳ ಅನುವಾದಕನಾಗಿಯೂ ಕೃಷಿಗೈದಿದ್ದು ಇಂಗ್ಲಿಷ್‌ನಿಂದ ಕನ್ನಡಕ್ಕೆ, ಕನ್ನಡದಿಂದ ಇಂಗ್ಲಿಷಿಗೆ, ಕನ್ನಡದಿಂದ ತೆಲುಗಿಗೆ, ತೆಲುಗಿನಿಂದ ಕನ್ನಡಕ್ಕೆ ಹಾಗೂ ಹಿಂದಿಯಿಂದ ಕನ್ನಡಕ್ಕೆ ಸಮರ್ಥವಾಗಿ ಭಾಷಾಂತರಿಸುವುದರ ಮುಖೇನ ತಮ್ಮ ರಂಗ ಭಾಷಾಪ್ರೌಢಿಮೆಯನ್ನು ಮೆರೆದಿದ್ದಾರೆ. ಭಾರತ ಸರಕಾರದ ಸಂಸ್ಕೃತಿ ಸಚಿವಾಲಯದ ಆರ್ಥಿಕ ನೆರವಿನಲ್ಲಿ ಕನ್ನಡದ ಕಣ್ವ ಬಿ.ಎಂ. ಶ್ರೀಕಂಠಯ್ಯನವರ ಪ್ರಖ್ಯಾತ 'ಅಶ್ವತ್ಥಾಮನ್' ಹಳಗನ್ನಡ ಕೃತಿಯ ರಂಗಪ್ರದರ್ಶನದ ನಿರ್ಮಾಣ, ನಿರ್ದೇಶನ, ಸಂಗೀತ, ಸೌಂಡ್ ಎಫೆಕ್ಟ್ ಮತ್ತು ರಂಗವಿನ್ಯಾಸಗೈದು ಅದರ ಪ್ರಥಮ ಪ್ರದರ್ಶನವನ್ನು 17 ಅಕ್ಟೋಬರ್ 2007ರಂದು ತುಮಕೂರಿನ 'ನಾಟಕಮನೆ'ಗಾಗಿ ನೀಡಿರುವರು. ತದನಂತರದ ಇದರ ಇತರೆ ಪ್ರದರ್ಶನಗಳು ಮುದ್ರಾಡಿ (ಉಡುಪಿ ಜಿಲ್ಲೆ)ಯ 'ನಮ್ಮ ತುಳುವರ ಸಂಘ'ದಡಿಯಲ್ಲಿ ಆದಿಶಕ್ತಿದೇವಿ ದೇವಸ್ಥಾನದ ಆವರಣದಲ್ಲಿ ನೆರವೇರಿದುದಲ್ಲದೆ ಬೆಂಗಳೂರಿನ

ಮಲ್ಲೇಶ್ವರಂನ ಸೇವಾಸದನ ಮತ್ತು ಎ.ಡಿ.ಎ. ರಂಗಮಂದಿರದಲ್ಲಿಯೂ ಪ್ರದರ್ಶನಗಳಾಗಿವೆ. ಇದರ ಎರಡು ಪ್ರದರ್ಶನಗಳು ದೆಹಲಿಯ ಎನ್.ಎಸ್.ಡಿ. ಸಂಘಟಿಸಿದ್ದ '10ನೇ ಭಾರತ ರಂಗಮಹೋತ್ಸವ - 2008ರಲ್ಲಿ 16 ಜನವರಿ 2008'ರಂದು ಪ್ರದರ್ಶನಗೊಂಡು ಯಶಸ್ವಿಯಾಗಿ ನೆರವೇರಿತು.

ಶ್ರೀ ರಾಮಮೂರ್ತಿಯವರು ಬೀದಿ ನಾಟಕಗಳ ಕುರಿತು ಪ್ರಾಸಂಗಿಕವಾಗಿ ಪ್ರಸ್ತಾಪಿಸುತ್ತಾ, 'ಅವುಗಳ ಕಥಾವಸ್ತು ಪ್ರಚಲಿತ ಸಮಸ್ಯೆಗಳಿಗಲ್ಲದೇ ಪೌರಾಣಿಕ ಹಾಗೂ ಚಾರಿತ್ರಿಕ ನಾಟಕಗಳನ್ನು ಹೊಂದಿರಬೇಕು, ವಿವಿಧತೆಯಿಂದ ಕೂಡಿರಬೇಕು. ಒಂದು ವಿಧದಲ್ಲಿ ಜನಪದ ನಾಟಕಗಳು ಬೀದಿ ನಾಟಕಗಳ ಸ್ವರೂಪವನ್ನು ಪಡೆದಿವೆ. ಅವುಗಳು ವೈವಿಧ್ಯವನ್ನು ಬಳಸಿಕೊಳ್ಳಬೇಕು. ಅವುಗಳಲ್ಲಿ Entertainment ಜೊತೆಗೆ Enlightment ಇದೆ. Sometimes street plays are more powerful than stage plays depending on the standard of performance ಎಂದು ಅಭಿಪ್ರಾಯಪಟ್ಟಿರುವರು. production smells a director ಎಂಬುದನ್ನುಚ್ಚರಿಸಿರುವರು.

## ರಂಗರಸದೌತಣ

ಅದೊಂದು ಅಭೂತಪೂರ್ವ ಸನ್ನಿವೇಶ. ದೆಹಲಿ ರಾಷ್ಟ್ರೀಯ ನಾಟಕ ಶಾಲೆಯ 13 ದಿನಗಳ 'ಭಾರತ ರಂಗಮಹೋತ್ಸವ ವಾರ್ಷಿಕ ರಂಗಹಬ್ಬ'ವು ಚೈನಾದೇಶದ ಪ್ರತಿಷ್ಠಿತ ಪೀಕಿಂಗ್ ಅಪೇರಾದ ಪ್ರದರ್ಶನದೊಡನೆ ನೆರವೇರಿತು. ಇದನ್ನು ಉದ್ಘಾಟಿಸುತ್ತ ಪ್ರತಿಭಾವಂತ ಲೇಖಕ ಕಮಲೇಶ್ವರರವರು, 'ಪ್ರಸ್ತುತ ವೇದಿಕೆಯು ಜಪಾನ್, ಸೌತ್ ಕೋರಿಯಾ ಮತ್ತು ಪಾಕಿಸ್ತಾನ ದೇಶಗಳು ತಮ್ಮ ಸಾಂಸ್ಕೃತಿಕ ಪರಂಪರೆಯ ಕೊಡುಗೆ ಮತ್ತು ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಉತ್ತಮ ನಿದರ್ಶನವಾಗಿದೆ'ಯೆಂದರು. ಒಟ್ಟು 60 ನಾಟಕಗಳು ಪ್ರಯೋಗಗೊಂಡು ಪ್ರದರ್ಶನಗೊಂಡವು.

ಎನ್.ಎಸ್.ಡಿ. ಅಧ್ಯಕ್ಷರಾದ ಅಮೂಲ್ ಅಲ್ಲಾನ ಅವರು ಮಾತನಾಡುತ್ತಾ, 'ಭಾರತ (ಏಷ್ಯಾ) ಮತ್ತು ಅರಬ್ ದೇಶಗಳ ಪ್ರದರ್ಶನಗಳು ಇಂದಿನ ವಾಸ್ತವ ಸ್ಥಿತಿಗತಿ ಬಗ್ಗೆ ಒಂದು ಪರಿಭಾಷೆಯಲ್ಲಿ ಪ್ರತಿಮೆಯನ್ನು ನಿರ್ಮಿಸಲು ಸಹಾಯಕವಾಗುತ್ತದೆ'ಯೆಂದರು. ಇದೇ ಸ್ಮರಣೀಯ ಸುಸಂದರ್ಭದಲ್ಲಿ ಶ್ರೀ ರಾಮಮೂರ್ತಿಯವರನ್ನು 'ಬಿ.ವಿ. ಕಾರಂತ ಸ್ಮೃತಿ ಪುರಸ್ಕಾರ' ಪ್ರಶಸ್ತಿ ಪ್ರದಾನ ಮಾಡುವುದರ ಮೂಲಕ ಗೌರವಿಸಲಾಯಿತು. ಈ ಉತ್ಸವವನ್ನು ಅಂತಾರಾಷ್ಟ್ರೀಯ ಕಾರ್ಯಕ್ರಮವೆಂದು ಪರಿಗಣಿಸಲಾಯಿತು.

## ಚಲನಚಿತ್ರರಂಗ

ಶ್ರೀ ರಾಮಮೂರ್ತಿಯವರು ತಮ್ಮ ನಟನ ಕಲಾ ಪ್ರತಿಭಾವಿಶೇಷದಿಂದ ರಂಗಭೂಮಿಯಲ್ಲಿಂತೋ ರಜತಪರದೆಯ ಮೇಲೂ ಮಿಂಚಿದವರು. ಎಲ್.ಎನ್. ಕಂಬೈನ್ಸ್ ನಿರ್ಮಾಣದ ಶ್ರೇಷ್ಠ ಕನ್ನಡ ಚಲನಚಿತ್ರವೆಂದು ಪರಿಗಣಿಸಿ ರಾಷ್ಟ್ರಪ್ರಶಸ್ತಿ ಪುರಸ್ಕೃತ ಗಿರೀಶ್ ಕಾರ್ನಾಡ್ ನಿರ್ದೇಶಿತ 'ಒಂದಾನೊಂದು ಕಾಲದಲ್ಲಿ' (1978)ಯಲ್ಲಿ ತಮ್ಮ ಅಜ್ಜನ ಪಾತ್ರದ ಅದ್ಭುತ ಕತ್ತಿ ಫೈಟರ್ ಅಭಿನಯದಿಂದ ಅಸಂಖ್ಯಾತ ಸಿನಿಮಾ ಪ್ರೇಮಿಗಳನ್ನು ರಂಜಿಸಿದರು. ಇದರ ಇತರೆ ತಾರಾಗಣದಲ್ಲಿ ಶಂಕರನಾಗ್, ಸುಂದರಕೃಷ್ಣ ಅರಸ್, ಸುಂದರರಾಜ್, ಅನಿಲ್ ಠಕ್ಕರ್ ಮತ್ತು ಅಕ್ಷತಾರಾವ್ ಮುಂತಾದವರಿದ್ದರು. ಸೌಮ್ಯ ಆರ್ಟ್ಸ್ ನಿರ್ಮಾಣದ ಟಿ.ಎಸ್. ನಾಗಾಭರಣ ನಿರ್ದೇಶನದ 'ಅನ್ವೇಷಣೆ' (1983) ಚಿತ್ರದಲ್ಲಿ ಗಿರೀಶ್ ಕಾರ್ನಾಡ್, ಸ್ಮಿತಾ ಪಾಟೀಲ್, ಅನಂತನಾಗ್, ಟಿ.ಎನ್. ಬಾಲಕೃಷ್ಣ ಮತ್ತು ಸುಂದರರಾಜ್ ಪಾತ್ರ ವರ್ಗದೊಂದಿಗೆ ನಟಿಸಿದ್ದಾರೆ. ಅಮೆರಿಕದ ಯೂನಿವರ್ಸಿಟಿ ಆಫ್ ಹವಾಯ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗ ಡಿಕ್ ಬ್ಯಾಕಾರಡ್ (Dick Backarrad) ನಿರ್ದೇಶಿತ 'The Assasin' ಟೆಲಿಚಿತ್ರದಲ್ಲಿಯೂ ಅಭಿನಯಿಸಿರುವರು.

ಶ್ರೀ ರಾಮಮೂರ್ತಿಯವರ ಸಹಪಾಠಿಯಾಗಿದ್ದಂಥ Southern Christian Leadership conference (SCLC) ಸಂಸ್ಥೆಯ ಅಧ್ಯಕ್ಷರಾಗಿದ್ದ Dick Backarrad ಅವರು ರೆವೆರೆಂಡ್ ಮಾರ್ಟಿನ್ ಲೂಥರ್‌ಕಿಂಗ್ ಅವರ ಕೊಲೆಯಾದಾಗ ತಮ್ಮ ಮನಸ್ಸಿನ ಮೇಲೆ ಬೀರಿದ ತೀವ್ರ ಪರಿಣಾಮದಿಂದಾಗಿ ಮೊದಲು ಇದನ್ನು ನಾಟಕವನ್ನಾಗಿ ಬರೆದು ನಿರ್ದೇಶಿಸಿದರು. ಇದರ ಹಲವಾರು ಪ್ರದರ್ಶನಗಳಾದವು. ಅನಂತರ ಇದನ್ನು Telefilm ಆಗಿ ನಿರ್ದೇಶಿಸಿದರು. ಈ ಎರಡೂ ಮಾಧ್ಯಮಗಳ ಪ್ರದರ್ಶನಗಳಲ್ಲಿ ಶ್ರೀ ರಾಮಮೂರ್ತಿಯವರು ಅಭಿನಯಿಸಿದ್ದರು. ಅಲ್ಲದೆ ಅಮೆರಿಕದಲ್ಲಿದ್ದಂದು ದೂರದರ್ಶನ ಮತ್ತು ಆಕಾಶವಾಣಿ ಕಾರ್ಯಕ್ರಮಗಳಲ್ಲಿ ಕ್ರಿಯಾಶೀಲವಾಗಿ ಪಾಲ್ಗೊಂಡಿರುವರು. ಅವರು ಇಂಡಿಯಾಕ್ಕೆ ಬಂದ ನಂತರ (1973-74) ಬೆಂಗಳೂರಿನಲ್ಲಿ ಎನ್.ಸಿ. ಆನಂದ್ ಮತ್ತು 'ಚಂದನ'ದ ಶ್ರೀನಿವಾಸ್ ಅವರು ನಿರ್ಮಿಸಿ ನಿರ್ದೇಶಿಸಿದ ಕಿರುಚಿತ್ರಗಳಲ್ಲಿಯೂ ಅಭಿನಯಿಸಿರುವರು.

## ಒಡನಾಟ / ಪರಿಚಯ / ಸಂಪರ್ಕ

ಶ್ರೀ ರಾಮಮೂರ್ತಿಯವರು ಎಲ್ಲರೊಡನೆಯೂ ಒಳ್ಳೆಯ ಫ್ರೆಂಡ್‌ಷಿಪ್ ಇಟ್ಟುಕೊಂಡವರು; ಸೌಹಾರ್ದತೆಯಿಂದ ಹೇಳಿದ ಟೈಮ್‌ನಲ್ಲಿ ಕರೆಕ್ಟ್ ಆಗಿ ಕೆಲಸ

ಮಾಡುತ್ತಿದ್ದವರು. ಈ ರೂಢಿ ಅವರಿಗೆ ಬೆಂಗಳೂರಿನ ITIನಲ್ಲಿ ಕೆಲಸ ಮಾಡುತ್ತಿರುವಾಗಲೇ ರೂಢಿಗತವಾಗಿತ್ತು ಮತ್ತು ಅದಕ್ಕಿಂತ ಮುಂಚೆಯೇ 'ಕಲಾನಿಕೇತನ', 'ಲಲಿತ ಕಲಾನಿಕೇತನ' ಮುಂತಾದೆಡೆಗಳಲ್ಲಿ ಕೆಲಸ ಮಾಡುವಾಗಲೇ ಬಂದಿತ್ತು. ಅವರು ತಮ್ಮ ಸ್ಕೂಲು ಕಾಲೇಜುಗಳಲ್ಲಿನ ವಿದ್ಯಾಭ್ಯಾಸದ ಅವಧಿಯಲ್ಲಿಯೇ ಶಿಸ್ತನ್ನು ಅನುಸರಿಸಿಕೊಂಡು ಬಂದವರು. ಈಗಾಗಿ ಅವರ ರಂಗಬಳಗ ಬಲು ದೊಡ್ಡದು.

ಅವರು ಎಲ್ಲಿಯೇ ಇದ್ದರೂ ಶ್ರೀರಂಗರೊಡನೆಯ ಒಡನಾಟ ಸದಾ ಇದ್ದೇ ಇರುತ್ತಿತ್ತು. ಅಂತೆಯೇ ಖ್ಯಾತ ರಂಗತಜ್ಞರು ಮತ್ತು ವಿದ್ವನ್ಮಣಿಗಳಾದ ಎಂ.ಎಸ್. ನಾಗರಾಜು, ಎ. ರಾಮರಾವ್, ಪರ್ವತವಾಣಿ, ಎ.ಎಸ್. ಮೂರ್ತಿ, ಬಿ.ವಿ. ಕಾರಂತ, ಡಾ. ಇಬ್ರಾಹಿಂ ಅಲ್ಕಾಜಿ, ಜಾಯ್ ಮೈಕೇಲ್, ಶ್ರೀಮತಿ ಜಾಯ್ ಮೈಕೇಲ್, ಶ್ರೀಮತಿ ವಿಮಲಾ ರಂಗಾಚಾರ್, ರಿಚರ್ಡ್ ಶೆಕ್ನರ್, ಗಿರೀಶ ಕಾರ್ನಾಡ, ಎಂ.ಎಸ್. ಸತ್ಯು, ದೆಹಲಿಯ 'ಅಭಿಯಾನ್' ತಂಡದ ಸಂಸ್ಥಾಪಕ (1967) ರಾಜೇಂದ್ರನಾಥ, ರಾಜೀಂಧರ್, ಡಾ. ಚಂದ್ರಶೇಖರ ಕಂಬಾರ, ಆರ್. ಗುರುರಾಜಾರಾವ್, ಹೆಚ್.ವಿ. ವೆಂಕಟಸುಬ್ಬಯ್ಯ, ಸಿ.ಆರ್. ಸಿಂಹ, ಡಾ. ವಿಜಯ, ಎಂ.ಎಚ್. ಕೃಷ್ಣಯ್ಯ, ದತ್ತಾತ್ರೇಯ, ಹೆಚ್.ಜಿ. ಸೋಮಶೇಖರ್‌ರಾವ್, ಹೆಚ್.ಎಲ್. ಪುಷ್ಪ, ಸಿಂಧುವಳ್ಳಿ ಅನಂತಮೂರ್ತಿ, ಯು.ಆರ್. ಅನಂತಮೂರ್ತಿ, ಡಾ. ನ. ರತ್ನ, ವಿಶ್ವನಾಥ ಮಿರ್ಲೆ, ಡಾ. ಬಿ.ವಿ. ರಾಜಾರಾಂ, ಎಸ್. ಮಾಲತಿ, ಎಲ್.ಎಸ್. ಸುಧೀಂದ್ರ, ಶ್ರೀನಿವಾಸಪ್ರಭು, 'ದೃಶ್ಯ' ರಂಗತಂಡದ ದಾಕ್ಷಾಯಣಿ ಭಟ್, ಶಂಕರನಾಗ್, ಅನಂತನಾಗ್, ವಾಲ್ಟೇರ್ ಡಿ'ಸೋಜಾ, ಪ್ರಸನ್ನ, ಸುರೇಶ ಆನಗಳ್ಳಿ, ಚಂದ್ರಕುಮಾರ್ ಸಿಂಗ್, ಪರೇಶ್‌ಕುಮಾರ್, ಎಸ್.ಜಿ. ರಘುರಾಮ್, ಸಿ. ಬಸವಲಿಂಗಯ್ಯ, ಸಿ.ಜಿ. ಕೃಷ್ಣಸ್ವಾಮಿ, ಕೆ.ವಿ. ನಾಗರಾಜಮೂರ್ತಿ, ಆರ್. ನಾಗೇಶ್, 'ನಾಟಕಮನೆ' ಮಹಾಲಿಂಗು, ಎಂ.ಎನ್. ಕೋಟೆ ನಾಗಭೂಷಣ, ಗೋಪಾಲಕೃಷ್ಣ ನಾಯರಿ, ಕುಂದಾಪುರದ ವಸಂತ ಬನ್ನಾಡಿ, ಎಂ.ಎಸ್. ಉಮೇಶ್, ಪ್ರಮೀಳಾ ನೇಸರ್ಗಿ, ನಾರಾಯಣ ರಾಯಚೂರ್. ಶ್ರೀಮತಿ ಹರಿಪ್ರಸಾದ್, ಕೆ.ಹೆಚ್. ಶ್ರೀನಿವಾಸ್, ಶ್ರೀ ಕಮಲ್ ತಿವಾರಿ, ಬಿ.ಎ. ಧನ್ವಂತ್ರಿ, ಎಂ.ಡಿ. ದೇವರಾಜ, ಹೆಚ್.ಎಂ. ರಂಗಯ್ಯ, ಆಂಜನೇಯ, ತುಮಕೂರು ಶಿವಕುಮಾರ್, ಕ.ವೆಂ. ರಾಜಗೋಪಾಲ್, ಡಾ. ಎಸ್.ಎಸ್. ಗೋರೆ, ಉಷಾ ಸಂಪತ್, ನಾಗಮಣಿ ಎಸ್ ರಾವ್ (ಆರ್ ನಾಗಮಣಿ), ಗಂಗೂಬಾಯಿ ಹಾನಗಲ್, ಡಾ. ಪಾಂಡುರಂಗ ಪಾಟೀಲ್, ಡಾ. ಜೆ. ಶ್ರೀನಿವಾಸಮೂರ್ತಿ, ಬೆಳಗಲ್ ವೀರಣ್ಣ, ಶಿವಕುಮಾರ್ ತಿಮ್ಮಲಾಪುರ, ಮೇಳಹಳ್ಳಿ ದೇವರಾಜ್, ಸೌಮ್ಯ ಪ್ರವೀಣ್, ಸರಿತ ಬಿ., ಮೈಸೂರು ರಮಾನಂದ್, ಹೊರೆಯಾಲ ದೊರೆಸ್ವಾಮಿ, ಚೆನ್ನಬಸಯ್ಯಗುಬ್ಬಿ, ರಾಣಿ ಬಲಬೀರ್ ಕೌರ್, ಚಂಡೀಗಡದಲ್ಲಿ

ಡಾ. ಮಹೇಂದ್ರಕುಮಾರ್, ಯುಗಳ್ ಕಿಶೋರ್, ಲಕ್ನೋ ಯೂನಿವರ್ಸಿಟಿಯ ಇಂಗ್ಲಿಷ್ ಪ್ರೊಫೆಸರ್ ರಾಜ್ ಬಿಸಾರಿಯಾ, ಲಕ್ನೋದ ಭಾರತೇಂದು ನಾಟ್ಯ ಅಕಾಡೆಮಿಯ ಅಧ್ಯಾಪಕರಾಗಿದ್ದು ಈಗ ನಿರ್ದೇಶಕರಾಗಿರುವ ಅರುಣ ತ್ರಿವೇದಿ, ಚಿತ್ರಾಮೋಹನ್, ಚಂದ್ರಮೋಹನ್, ತಿರುವನಂತಪುರದ 'ಸೋಪಾನಮು' ಎಂಬ ತಂಡದ ಅಧ್ಯಕ್ಷ ಮತ್ತು ನಿರ್ದೇಶಕ ಶ್ರೀ ಕಾವಾಲಮ್ ನಾರಾಯಣ ಫಣಿಕ್ಕರ್, ದಿವಂಗತ ಪ್ರೊ. ಜಿ. ಶಂಕರ ಪಿಳ್ಳೆ, ದಿ. ಡಾ. ವಯಲಾ ವಾಸುದೇವನ್ ಪಿಳ್ಳೆ, ಬೆಳಕು ವಿನ್ಯಾಸಕ ಗೋಪಿನಾಥ್, ಕೊಲ್ಲಂ ಎಂಬ ಊರಿನಲ್ಲಿರುವ ಕೋಯಿಲಾನ ಪಬ್ಲಿಕ್ ಲೈಬ್ರರಿ ಅಂಡ್ ರಿಸರ್ಚ್ ಸೆಂಟರ್‌ನ ಸಂಸ್ಥಾಪಕ, ಕಾರ್ಯದರ್ಶಿಯಾಗಿರುವ ಮಲೆಯಾಳಂ ಚಲನಚಿತ್ರಗಳ ನಿರ್ಮಾಪಕರಾಗಿದ್ದು ಸೋಪಾನಮ್ ಎಂಬ ರಂಗಮಂದಿರವನ್ನು ಕಟ್ಟಿಸಿರುವುದರ ಜೊತೆಗೆ ಕೇರಳದಲ್ಲಿ ಅವರೇ ನಿರ್ಮಿಸಿರುವ ಚಲನಚಿತ್ರಮಂದಿರದ ಚಂದ್ರಶೇಖರ್ ನಾಯರ್ ಮುಂತಾದವರೊಡನೆಯ ಅವರ ಸ್ನೇಹಸಂಬಂಧಿ ನಿಕಟ ಸಂಪರ್ಕವು ಆತ್ಮೀಯತೆ ಮತ್ತು ಅನನ್ಯತೆಯ ವಿಸ್ತೃತ ರಂಗಸಮೂಹದ ಸಾಕ್ಷಿಭೂತವಾಗಿದೆಯೆನ್ನಬಹುದು. ಫಣಿಕ್ಕರ್ ಅವರು 'ಸೋಪಾನಮ್' ವತಿಯಿಂದ ಭಾಸ - ಕಾಳಿದಾಸರ ಅಭಿಜಾತ ನಾಟಕಗಳನ್ನು ಹೊಸ ವಿಶ್ಲೇಷಣೆಯಿಂದ ನಿರ್ದೇಶನ ಮಾಡಿದ್ದರು. ಅವರು ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಫೆಲೋ ಮತ್ತು ವೈಸ್ ಚೇರ್‌ಮನ್ ಆಗಿದ್ದರು. ಅಂತೆಯೇ ಮಾಡರ್ನ್ ಇಂಡಿಯನ್ ಥಿಯೇಟರ್‌ನ ವಿಜಯಮೆಹ್ತಾ ಮುಂತಾದ ಮಹಾಶಯರು ಶ್ರೀ ರಾಮಮೂರ್ತಿಯವರ ಮಿತ್ರರೂ ಹಾಗೂ ಬೌದ್ಧಿಕ ಸಂಘಜೀವಿಗಳಾಗಿದ್ದರು. ಅವರಿಗೆ ಜರ್ಮನಿಯಲ್ಲಿಯೇ ಪರಿಚಿತರಾಗಿದ್ದ ಬೆನೆವಿಟ್ಜ್ ಅವರು ದೆಹಲಿಯ ಎನ್.ಎಸ್.ಡಿ.ಗೂ ಆಗಮಿಸಿದ್ದರು.

ಅವರು ದೆಹಲಿ ಎನ್.ಎಸ್.ಡಿ. ರೆಪರ್ಟರಿಯಲ್ಲದೆ ಇತರೆ ಪ್ರತಿಷ್ಠಿತ ರಂಗಸಂಘ ಸಂಸ್ಥೆಗಳೊಡನೆ ನಿಕಟ ಒಡನಾಡಿಯಾಗಿದ್ದುಕೊಂಡು ಅವುಗಳ ಏಳ್ಗೆಗಾಗಿ ಕಾಯಾ ವಾಚಾ ಮನಸಾ ಅಹರ್ನಿಶಿ ಶ್ರಮಿಸಿದ್ದಾರೆ. ದೆಹಲಿಯ 'ಯಾತ್ರಿಕ್', ಮೊದಮೊದಲು ಇಂಗ್ಲಿಷ್ ನಾಟಕ ಪ್ರದರ್ಶನಗಳಿಗೆ ಪ್ರಸಿದ್ಧವಾಗಿದ್ದು ತದನಂತರದಲ್ಲಿ ಹಿಂದಿ ನಾಟಕಗಳತ್ತ ಹೊರಳಿದ 'ಲಿಟ್ಲ್ ಥಿಯೇಟರ್ ಗ್ರೂಪ್', 'ಅಭಿಯಾನ್' (1966), 'ದಿಶಾಂತರ್', ಶೈಲಾ ಭಾಟಿಯಾ ಅವರ 'ದೆಹಲಿ ಆರ್ಟ್ ಥಿಯೇಟರ್', 'ಶ್ರೀರಾಮ ಸೆಂಟರ್' (ಸ್ಥಾಪನೆ : 1976), ಕಲ್ಕತ್ತದ ಶಂಭುಮಿತ್ರರ 'ಬಹುರೂಪಿ', ಮುಂಬೈನ 'ನ್ಯಾಷನಲ್ ಸೆಂಟರ್ ಫಾರ್ ದಿ ಪರ್‌ಫಾರ್ಮಿಂಗ್ ಆರ್ಟ್ಸ್', ಭಾರತ ಸರಕಾರದ ಸಾಂಗ್ ಅಂಡ್ ಡ್ರಾಮಾ ಡಿವಿಜನ್, ಬೆಂಗಳೂರಿನ ಬೆನಕ, ರಂಗನಿರಂತರ, ಅಭಿನಯ ರಂಗ, ರಂಗಸಂಪದ, ಕಲಾಗಂಗೋತ್ರಿ, ಸಮುದಾಯ, ಮೈಸೂರಿನ 'ರಂಗಾಯಣ' ಮತ್ತು ಹುಬ್ಬಳ್ಳಿಯ 'ಹುಬ್ಬಿ

ಆರ್ಟ್ಸ್ ಸರ್ಕಲ್' ಮೊದಲಾದ ಹತ್ತಾರು ಕಲಾಸಂಸ್ಥೆಗಳೊಡನೆಯು ಸ್ನೇಹ ಹಾಗೂ ಕಾರ್ಯಸಂಬಂಧೀ ರಂಗಸಂಪರ್ಕವು ನಿಚ್ಚಹಸಿರಿನ ವಾತಾವರಣದಲ್ಲಿ ಅಚ್ಚ ಹಸಿರಾಗಿದೆ.

ತುಮಕೂರು ಬಳಿಯ ಮೆಳೆಹಳ್ಳಿಯಲ್ಲಿ ದೇವರಾಜು ಮತ್ತು ಅವರ ಸಹೋದರ ಉಮೇಶ್ ಅವರು ವಿ. ರಾಮಮೂರ್ತಿಯವರ ಹೆಸರಿನಲ್ಲಿ ಒಂದು ರಂಗಮಂದಿರವನ್ನು ನಿರ್ಮಿಸಲು ಪ್ರಾರಂಭಿಸಿ ಅದನ್ನು ಹಂತಹಂತವಾಗಿ ಪೂರ್ಣಗೊಳಿಸಲಾಗುತ್ತಿದೆ. ಅಲ್ಲಿ ಪ್ರತಿ ತಿಂಗಳು ಮೊದಲನೆಯ ಶನಿವಾರದಂದು ನಾಟಕ ಪ್ರದರ್ಶನಗಳಾಗುತ್ತಿರುತ್ತವೆ.

## ರಂಗ ನಿಲುವುಗಳು

ವಿ. ರಾಮಮೂರ್ತಿಯವರು ಆಧುನಿಕ ಭಾರತೀಯ ರಂಗಭೂಮಿಯ ಅಸ್ತಿತ್ವ, ಉತ್ಕರ್ಷ, ಚಾಯಾಮಾನ, ಬೆಳವಣಿಗೆ ಮತ್ತು ಮುಂದಿನ ಆಗುಹೋಗುಗಳ ಬಗ್ಗೆ ತಮ್ಮ ಆಳವಾದ ಪರಿಜ್ಞಾನ, ಅಧ್ಯಯನಶೀಲತೆ ಮತ್ತು ಅನುಭವ ಸಾಂದ್ರತೆಯಿಂದ ಹೊರಹೊಮ್ಮಿದ ಹಾಗೂ ತಳೆದ ನಿಲುವುಗಳನ್ನು ತಮ್ಮ ಸ್ಪಷ್ಟ, ದಿಟ್ಟ, ನೇರ, ನಿಖರ ಮಾತುಗಳಲ್ಲಿ ವಿಶದವಾಗಿ ವ್ಯಕ್ತಪಡಿಸಿರುವರು. ಅವರು ತಮ್ಮ ದೀರ್ಘವಾದ ನೆನಪಿನಾಳದ ಬುತ್ತಿಯನ್ನು ಬಿಚ್ಚುತ್ತಾ, ನಿರರ್ಗಳವಾಗಿ ವ್ಯಾಖ್ಯಾನಿಸುತ್ತಾ ಸಾಗುವ ಪರಿ ಚೇತೋಹಾರಿ. ಅವರ ಬತ್ತದ ರಂಗಖಣಜದಿಂದ ಹೊರಹೊಮ್ಮುವ ರಂಗಸಂಗತಿಗಳು ರಂಗೇತಿಹಾಸದಲ್ಲಿ ದಾಖಲಾಗಿ ಉಳಿಯಬಲ್ಲಂತಹವು.

ಅವರು ಯಾವುದೇ ರಂಗಪ್ರಯೋಗವನ್ನು ಒಂದು ಸಾಂಘಿಕ ಕ್ರಿಯೆ (team work)ಯೆಂದು ಬಗೆದು ಮುನ್ನಡೆದವರು. ರಂಗಭೂಮಿಯು ಕೇವಲ ಮನರಂಜನೆಯ ಕಲಾಮಾಧ್ಯಮ ಮಾತ್ರವಲ್ಲ; ಅದು ಮನೋಲ್ಲಾಸದೊಂದಿಗೆಯೇ ನಿತ್ಯ ನಿರಂತರವಾಗಿ ಮನೋವಿಕಾಸ ಸಾಧನವಾಗಿ ಹೊಸ ದಿಕ್ಕುದೆಸೆ ಮತ್ತು ಆಲೋಚನೆಗಳನ್ನುಂಟುಮಾಡುವ ಧೀಶಕ್ತಿ. ನಿತ್ಯ ನಿರಂತರವಾಗಿ ಅದರ ಹುಡುಕಾಟ ತಡಕಾಟ ತಾಕಲಾಟದ ಹಾದಿಯಲ್ಲಿ ಹೊಸ ತಿರುವು ಅರಿವಿನ ಸಮಕಾಲೀನ ರಂಗಪ್ರಜ್ಞೆಯನ್ನು ಮೂಡುಸುವಂತಹ ಸಾಮರ್ಥ್ಯವನ್ನು ಹೊಂದಿರುವಂತಹದು ಎಂಬುದು ಅವರ ಖಚಿತ ನಿಲುವು.

"ನಾಟಕಗಳು ನಿರಂತರವಾಗಿ ಎಲ್ಲೆಡೆ ಪ್ರದರ್ಶನಗೊಳ್ಳುವುದರ ಮೂಲಕ ರಂಗಭೂಮಿ ಸದಾಕಾಲ ಚೇತೋಹಾರಿಯಾಗಿರಬೇಕು. ವೇದಿಕೆಯ ಮೇಲೆ ಪಾತ್ರಗಳು ಜೀವಂತವಾಗಿ ಮೈತಳೆಯುತ್ತವೆ. ಹೀಗಾಗಿ ರಂಗಭೂಮಿ ಒಂದು ವಿಶಿಷ್ಟ ಸಂವಹನ ಮಾಧ್ಯಮವಾಗಿದೆ. ಪಾತ್ರಗಳ ನೋವು ನಲಿವುಗಳು ಪ್ರೇಕ್ಷಕರಿಗೆ ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವುದರಿಂದ ಕಲಾವಿದರ ಎಲ್ಲ ಅಭಿವ್ಯಕ್ತಿ ಸಾಧನಾ ವಿಧಾನಗಳು ಜೀವಂತವಾಗಿ ಪ್ರೇಕ್ಷಕರನ್ನು ತಲುಪುತ್ತವೆ. ಆದ್ದರಿಂದ ಆರೋಗ್ಯಪೂರ್ಣ ಸಮಾಜದ ಅಸ್ತಿತ್ವಕ್ಕೆ

ನಿರಂತರವಾಗಿ ಉತ್ತಮ ನಾಟಕಗಳು ಎಲ್ಲೆಡೆ ಪ್ರದರ್ಶನಗೊಳ್ಳುತ್ತಿರಬೇಕು. ಇದು ಬಡಾವಣೆ ರಂಗಮಂದಿರಗಳಿಂದ ಸಾಧ್ಯವಾಗುವ ಪ್ರಕ್ರಿಯೆ." (ರಂಗವಾಣಿ, 10-3-2013)

ಪ್ರಶ್ನೋತ್ತರಗಳು

**1. ಪ್ರಶ್ನೆ : ನಟನಾದವನಿಗೆ ನೇಪಥ್ಯ ಜ್ಞಾನದ ಅವಶ್ಯಕತೆಯ ಪರಿಮಿತಿಯೇನು?**

**ಉತ್ತರ :** ಇದು ಅಪರಿಮಿತ. ಯಾವುದೇ ವ್ಯಕ್ತಿಯು ತನ್ನ ವ್ಯಕ್ತಿತ್ವದ ಯಾವುದೇ ಕ್ಷೇತ್ರದಲ್ಲಿನ ಬೇರೆ ಬೇರೆ ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದರು ಕೂಡಾ ಆಯಾ ಕ್ಷೇತ್ರದಲ್ಲಿ ಆಳವಾದ ಪರಿಚಯ ಮತ್ತು ತಿಳುವಳಿಕೆಯಿದ್ದರೆ ಇನ್ನೂ ಒಳ್ಳೆಯದು. In theatre one should be a Jack of all trades master of none ಅಲ್ಲ master of atleast one or someನಂತಿರಬೇಕು. ಒಬ್ಬ ನಟನಾದವನಿಗೆ ರಂಗದ ಮೇಲೆ ಎಲ್ಲಿ ಹತ್ತಬೇಕು, ಎಲ್ಲಿ ಇಳಿಯಬೇಕು, ಎಲ್ಲಿ ಜಾರಬೇಕು, ಎಲ್ಲಿ ಕೂರಬೇಕು, ಎಲ್ಲಿ ಏಳಬೇಕು ಎಂಬುದರ ಲೆಕ್ಕಾಚಾರ ಹಾಕುವುದು ಹಾಗೂ ರಂಗಸಜ್ಜಿಕೆ ವಿನ್ಯಾಸದ ಪೂರ್ಣ ಪರಿಚಯವಿರಬೇಕು. ಅದನ್ನು ತಿಳಿಯಪಡಿಸುವ ಇಂಜಿನಿಯರಿಂಗ್ ಸ್ಕಿಲ್ ನಿರ್ದೇಶಕನಿಗಿರಬೇಕು. ನಿರ್ದೇಶಕನಿಗಂತೂ ಪ್ರದರ್ಶನದ ಪ್ರತಿಯೊಂದು ರಂಗಮಾಹಿತಿಯೂ ಗೊತ್ತಿರಬೇಕು. ನಿರ್ದೇಶಕ ಒಬ್ಬ ಹೆಡ್‌ಕುಕ್ ಇದ್ದಹಾಗೆ. ಅವನು ತಯಾರಿಸಿದ ಕಲಾರಸದೂಟವನ್ನು ಎಲ್ಲರಿಗೂ ಬಡಿಸುವಂತಿರಬೇಕು, ಉಣಿಸುವಂತಿರಬೇಕು. ಅಮೆರಿಕದಲ್ಲಿ ರಾಬರ್ಟ್ ಎಡ್ಮಂಡ್ ಜೋನ್ಸ್ ಎಂಬ ದೊಡ್ಡ ಲೈಟಿಂಗ್ ಮತ್ತು ಕಾಸ್ಟೂಮ್ ಡಿಸೈನರ್ ಹೇಳಿದಂತೆ, "A designer sets a stage design so that an actor can walk on it." ನಟನು ಈ ಪದ್ಧತಿಯನ್ನು ತನ್ನ ಕ್ರಿಯೆಯಲ್ಲಿ ಅಳವಡಿಸಿಕೊಳ್ಳುವುದನ್ನು ರೂಢಿಸಿಕೊಳ್ಳಬೇಕು. ಅದಕ್ಕೆಂದೇ ಪ್ರದರ್ಶನದ ಪೂರ್ವಭಾವಿಯಾಗಿ ರಿಹರ್ಸಲ್ಸ್ ಮಾಡಿಸುವುದು. ನಮ್ಮ ದೇಶದಲ್ಲಿ ವೃತ್ತಿ ರಂಗಭೂಮಿಯಲ್ಲಿ ಬಳಸುತ್ತಿರುವ ಸ್ಟೇಜ್ ಸೆಟ್ಟುಗಳು ಇಲ್ಲಿ ಹುಟ್ಟಿದವಲ್ಲ. ಅವೆಲ್ಲ ಹುಟ್ಟಿದುದು ಇಟಲಿ ದೇಶದಲ್ಲಿ. ಸರ್ ನಿಕೊಲಾ ಸೆಬಾಟಿನಿ (Sir Nicola Sabattini - 1574-1654), ಬಿಬಿಯಾನಾ (Bibiena) ಅಂತಹವರೇ ಪೈಂಟೆಡ್ ಸೈಡ್‌ವಿಂಗ್ಸ್ ಮತ್ತು ಕರ್ಟನ್‌ಗಳ ಸೃಷ್ಟಿಕರ್ತರು. ಆ ಬಿಬಿಯಾನಾ ಫ್ಯಾಮಿಲಿಯವರು ಮೂರು ಪೀಳಿಗೆಗಳವರೆಗೆ ಯೂರೋಪ್‌ನಲ್ಲಿ ಈ ರಂಗವನ್ನು monopoly ಮಾಡಿಕೊಂಡವರು. ಅದನ್ನು ತಿಳಿದುಕೊಳ್ಳಬೇಕೆಂದರೆ ಆಸ್ಕರ್ ಗ್ರಾಸ್ ಬ್ರೊಕೆಟ್ (Oscar Grose Brochet)ನ ವಿರಚಿತ 'History of the Theatre' ಎಂಬ ರಂಗಭೂಮಿ ಚರಿತ್ರೆಗೆ ಸಂಬಂಧಪಟ್ಟಂತಹ ಪುಸ್ತಕವನ್ನು ಅಗತ್ಯವಾಗಿ ಓದಬೇಕು. ರಂಗಭೂಮಿಯಲ್ಲಿ ಕೆಲಸ ಮಾಡುವವರಿಗೆ ಬರೀ ಸಾಮಾನ್ಯ ಜ್ಞಾನವಿದ್ದರೆ ಸಾಲದು; ಅದಷ್ಟು ಮಟ್ಟಿಗೆ

ಭಾಷಾಜ್ಞಾನವೂ ಇರಬೇಕು.

ಅಮೆರಿಕನ್ ರಂಗವಿನ್ಯಾಸಕ Lee Simonson (1888-1967) ಸೆಟ್‌ಡಿಸೈನ್ ಕುರಿತು ಬರೆದಂಥ 'The Stage Is Set' (1932) ಹಾಗೂ 'The Art of Scenic Design' (1950) ಎಂಬ ಗ್ರಂಥಗಳಲ್ಲಿ ವಾಸ್ತವ ಶೈಲಿಯಲ್ಲಿಯೆಂಬ ಅದ್ಭುತವಾದ ಸೆಟ್ ಡಿಸೈನ್‌ಗಳ ಫೋಟೋಗಳಿವೆ. ಮೇಧಾವಿ ಸ್ಕಾಟಿಷ್ ಚರಿತ್ರೆಗಾರ Allardyce Nicoll ಬರೆದ 'The Development of the Theatre', 'Masks', 'Mimes', 'Miracles' and 'The Renaissance Stage', A.C. Soffನ 'The Eastern Theatre' ಹಾಗೂ 'MacCgowen ಮತ್ತು William Melnitz ಬರೆದ 'The Living Theatre' (1955) ಮತ್ತು 'Continental Stage Craft' ಕೃತಿಗಳನ್ನು ಅಭ್ಯಸಿಸಿದ್ದೇನೆ. ಇವುಗಳಿಂದ ನಾನು ಬಹಳ ಪ್ರಭಾವಿತನಾಗಿದ್ದೇನೆ.

*ಅವರು ಹುಬ್ಬಳ್ಳಿಯಲ್ಲಿ 16-11-1988 ರಿಂದ 30-11-1988ರವರೆಗೆ ನಿರ್ವಹಿಸಿದ ರಂಗತಂತ್ರಗಳ 'ನೇಪಥ್ಯ ಶಿಲ್ಪ' ತರಬೇತಿ ಶಿಬಿರದ ದಿನಗಳನ್ನು ಮೆಲುಕುಹಾಕುತ್ತಾ -*

'ನಾನು ಅಲ್ಲಿ ಎರಡು ಕಾರ್ಯಾಗಾರಗಳನ್ನು ನಡೆಸಿದೆ. ಮೊದಲನೆಯದು ರಂಗಕರ್ಮಿಗಳಿಗಾಗಿನದು. ಎರಡನೆಯದು ದೀಪಾವಳಿ ಹಬ್ಬದ ನಂತರದಲ್ಲಿ ನಡೆದದ್ದು. ಅದರಲ್ಲಿ ರಂಗನೇಪಥ್ಯಗಾರರಲ್ಲದೆ ಭೂಮಾರೆಡ್ಡಿ ಕಾಲೇಜಿನ ಇಂಜಿನಿಯರಿಂಗ್ ಮತ್ತು ವಾಸ್ತುಶಿಲ್ಪ (Architecture) ವಿದ್ಯಾರ್ಥಿಗಳೂ ಭಾಗವಹಿಸಿದ್ದರು. ಸಹ ನಿರ್ದೇಶಕಿಯಾಗಿ ನನ್ನ ಜೊತೆಯಲ್ಲಿದ್ದವರು ಭೂಮಾರೆಡ್ಡಿ ಕಾಲೇಜಿನ Architecture ಪ್ರೊಫೆಸರ್ ಶ್ರೀಮತಿ ನಳಿನಿ ಕೆಂಬಾವಿ ಎಂಬುವರು. ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾಗಿದ್ದ ನಟ, ನಾಟಕಕಾರ ಗೋಪಾಲ ವಾಜಪೇಯಿಯವರು ಶಿಬಿರದ ನುರಿತ ಅರಿತ ಸಂಚಾಲಕರಾಗಿದ್ದರು.'

*ಖ್ಯಾತ ನಾಟಕಕಾರ ಹೆಚ್.ಎಸ್. ಶಿವಪ್ರಕಾಶ್‌ರವರು ಜರ್ಮನಿಗೆ ಹೋಗುವಾಗ ತುಮಕೂರಿನ 'ನಾಟಕಮನೆ'ಯಲ್ಲಿ ನೆರವೇರಿದ ಬೀಳ್ಕೊಡಿಗೆ ಸಮಾರಂಭದಲ್ಲಿನ ಭಾಷಣದಲ್ಲಿ ಶ್ರೀ ರಾಮಮೂರ್ತಿಯವರು ಹೀಗೆ ನುಡಿದರು :*

'ವಿದೇಶಗಳಿಂದ ತಿಳಿಯಬೇಕಾದುದು ಬೇಕಾದಷ್ಟಿದೆ. ಆದ್ದರಿಂದ ಇಲ್ಲಿಯ ರಂಗಭೂಮಿಯವರು ವಾರದಲ್ಲಿ 2-3 ಗಂಟೆಗಳ ಕಾಲ ಅಲ್ಲಿನ ರಂಗಭೂಮಿಯ ಬಗ್ಗೆ ತಿಳಿಯಲು ಸಮಯವನ್ನು ವಿನಿಯೋಗಿಸಬೇಕು. ಕನ್ನಡವನ್ನಷ್ಟೇ ಅಲ್ಲದೆ ಬೇರೆ ದೇಶಗಳ ಭಾಷೆಗಳನ್ನು ಕಲಿಯಿರಿ. ಅದರಿಂದ ಮೈಲಿಗೆಯಾಗುವುದಿಲ್ಲ. ಇದರ ತಾತ್ಪರ್ಯವೆಂದರೆ,

coming back to my original statement - ಒಬ್ಬ ರಂಗಕರ್ಮಿಗೆ ಒಂದು ಪ್ರೊಡಕ್ಷನ್‌ನಲ್ಲಿ ತಾನು ಮಾಡುವ ಕೆಲಸವಲ್ಲದೆ ತನ್ನ ಜೊತೆಯಲ್ಲಿರುವ ಇತರ ಸಹಪಾಠಿಗಳು ಏನು ಮಾಡುತ್ತಾರೆ ಎನ್ನುವುದರ ಆಳವಾದ ತಿಳುವಳಿಕೆಯಿರಬೇಕು. ಇದು ಅವನಿಗೆ ತಾನು ಮಾಡತಕ್ಕಂತಹ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಅವಕಾಶವಾಗುತ್ತದೆ, ಸಹಕಾರಿಯಾಗುತ್ತದೆ; ಸಾಧ್ಯತೆಯನ್ನುಂಟುಮಾಡುತ್ತದೆ. ಆಗ ನಾಟಕ ಪ್ರದರ್ಶನವು ಒಂದು ಸಂಪೂರ್ಣ ರೂಪವನ್ನು ತಾಳಿ ನಿರ್ದೇಶಕನ ಕಲ್ಪನೆಗೆ ಅನುಗುಣವಾಗಿ ರಂಗದ ಮೇಲೆ ಪರಿಣಾಮಕಾರಿಯಾಗಿ ಮೂಡಿಬರಲು ಅನುಕೂಲವಾಗುತ್ತದೆ. There is no engineering like show business.

**2. ಪ್ರಶ್ನೆ : ವೃತ್ತಿ ಮತ್ತು ಹವ್ಯಾಸಿ ರಂಗಗಳ ನಡುವೆಯ ಭೇದಭಾವ - ಸಂಬಂಧ ಕುರಿತು ತಮ್ಮ ಅನಿಸಿಕೆಗಳೇನು?**

**ಉತ್ತರ :** 'ರಂಗಕಾಯಕವನ್ನು ಕೈಗೊಂಡಾಗ ಎಂದೂ ವೃತ್ತಿ - ಹವ್ಯಾಸಿ - ಜಾನಪದ ಇತ್ಯಾದಿಯೆಂಬ ಭೇದಭಾವವನ್ನೆಣಿಸದೆ ರಂಗಭೂಮಿಯ ಸಮಗ್ರ ಪರಿಕಲ್ಪನೆಯೊಂದಿಗೆ ಅದರ ಶ್ರೇಯಸ್ಸು ಮತ್ತು ಪ್ರಾದುರ್ಭಾವಕ್ಕೆ ಅಹರ್ನಿಶಿ ದುಡಿಯಬೇಕು. ವೃತ್ತಿಯೆಂದರೆ ಸಮಾಜಕ್ಕೆ ಮತ್ತು ಪ್ರೇಕ್ಷಕರಿಗೆ ಶ್ರದ್ಧೆ ಮತ್ತು ಜವಾಬ್ದಾರಿಯನ್ನು ನಿರ್ವಹಿಸುವ ಹೊಣೆಯಿರಬೇಕು. ಈ ದಿಸೆಯಲ್ಲಿ ಪ್ರೇಕ್ಷಕರ ಸಕಾರಾತ್ಮಕ ಭಾಗಿತ್ವವು ಬಹುಮುಖ್ಯ. ಇದು ರಂಗಭೂಮಿಯ ಎಲ್ಲ ಪ್ರಯೋಗಗಳಲ್ಲಿಯೂ ಕಾಣಬರಬೇಕಾದದ್ದೆ. ನಮ್ಮಲ್ಲಿ ಹವ್ಯಾಸಿಗಳು ಎಂಬ ಲೇಬಲ್ ಹಚ್ಚಿಕೊಳ್ಳುವ ಇಚ್ಛೆ-ಹುಚ್ಚು ಮೊದಲು ತೊಲಗಬೇಕು. ಆಗ ಮಾತ್ರ ರಂಗಭೂಮಿಯಲ್ಲಿ ಸ್ವಚ್ಛ ಸಂವಹನ ವಾತಾವರಣ ಮೂಡಿಬಂದೀತು. ಹವ್ಯಾಸಿಗಳು ಎಂಬ ಅಂಕಿತ ಇರಲೇಬಾರದು. ಯಾರೇ ಆಗಲಿ ರಂಗಭೂಮಿಯನ್ನು ವೃತ್ತಿಪರ ಮನೋಭಾವವನ್ನಾಗಿಯೇ ಸ್ವೀಕರಿಸಬೇಕು. ಹವ್ಯಾಸಿಯೆಂದು ಹೇಳಿಕೊಂಡು ಬೇಜವಾಬ್ದಾರಿತನದಿಂದ ಬೇಕಾಬಿಟ್ಟಿ ವರ್ತಿಸಿ ಅದರ ವೈಫಲ್ಯವನ್ನು ಹವ್ಯಾಸಿತನದ ಮುಸುಡಿಗೆ ಒರೆಸುವುದು ಅಯೋಗ್ಯರ ಕೆಲಸ ಎಂಬುದು ನನ್ನ ಅಭಿಪ್ರಾಯ.'*

'ಇಂಜಿನಿಯರಿಂಗ್, ಕೃಷಿ ಮತ್ತಿತರ ವೃತ್ತಿಗಳಲ್ಲಿಯಂತೆ ಎಲ್ಲ ರಂಗಕರ್ಮಿಗಳಲ್ಲಿಯೂ ವೃತ್ತಿಪರತೆ (Professionalism)ಯಿರಬೇಕು. ಅಮೆಚ್ಯೂರ್ ಇಂಜಿನಿಯರ್, ಅಮೆಚ್ಯೂರ್ ಸರ್ಜನ್, ಅಮೆಚ್ಯೂರ್ ಡಾಕ್ಟರ್ ಮತ್ತು ಅಮೆಚ್ಯೂರ್ ಆಡಳಿತಗಾರ ಎಂಬುದು ಹೇಗಿಲ್ಲವೋ ಹಾಗೆಯೇ ಅಮೆಚ್ಯೂರ್ ರಂಗಕರ್ಮಿಯೆಂಬುದಿಲ್ಲ; Professional ಮತ್ತು Commercial ಎಂದು ಮಾತ್ರ ರಂಗಕಲಾವಿದರನ್ನು ಕರೆಯಬಹುದು. ರಂಗಭೂಮಿಯಲ್ಲಿ ವೃತ್ತಿಪರತೆಯ ಕೊರತೆ ಎಂಬುದು ಎಂದೂ ಇರಬಾರದು. Amateur is a person who is always

ready to give the benefit of immaturtiy and inexperience. ಇವರನ್ನು ವೃತ್ತಿ ರಂಗಭೂಮಿಯ ಪ್ರಯೋಗಾತ್ಮಕರು ಎನ್ನಬಹುದೇನೊ'.**

ವಾಸ್ತವವಾಗಿ ವೃತ್ತಿಯೆಂದರೆ ವ್ಯಾವಸಾಯಿಕವಾಗಿ ವೃತ್ತಿಯಾಗಿ ನಡೆದುಬರುತ್ತಿರುವ ನಾಟಕ ಕಂಪನಿಗಳು. ವೃತ್ತಿಯಾಗಿ ಅಲ್ಲದಿದ್ದರೂ ರಂಗಭೂಮಿಯಲ್ಲಿ ನಾಟಕ ಕಂಪನಿಗಳು ಮಾಡದೇ ಇರುವಂತಹ ಕೆಲಸಗಳನ್ನು 'ಹವ್ಯಾಸಿ' ರಂಗಭೂಮಿ ಮಾಡುತ್ತದೆ. ಅನೇಕ ರಂಗತಂಡಗಳು ಹೊಸ ಹೊಸ ಪ್ರಯೋಗ - ಆಯಾಮಗಳನ್ನು ಕಂಡುಹಿಡಿಯುತ್ತಿವೆ. 'ವೃತ್ತಿಪರರು', 'ಹವ್ಯಾಸಿಗಳು' ಇಬ್ಬರೂ ಒಬ್ಬರಿಂದ ಇನ್ನೊಬ್ಬರು ಉತ್ತೇಜಿತರಾಗುವ ಹಾಗೆ ಆಗುವುದು ಒಳ್ಳೆಯದು. 'ವೃತ್ತಿ' ಮತ್ತು 'ಹವ್ಯಾಸಿ'ಗಳ ನಡುವೆ ಉಂಟಾಗಿರುವ ಕೃತಕ ಭೇದ ಹೋಗಬೇಕು. ಅಂದರೆ ವೃತ್ತಿಪರ ಮನೋಭಾವವು ಎಲ್ಲರಲ್ಲಿಯೂ ಬೆಳೆಯಬೇಕು. ಅಂತಹ ಮನೋಭಾವ ಇಲ್ಲವೆಂದಲ್ಲ, ಇದೆ. ಆದರೆ ಅದು ಸಾಲದು. ಕೊರತೆಯ ಒರತೆ ನೀಗಬೇಕು. ಪ್ರೇಕ್ಷಕನು ವೃತ್ತಿ - ಹವ್ಯಾಸ ಎಂಬ ಭೇದಭಾವವೆಣಿಸಿ ಗಮನಿಸಿ ನಾಟಕ ನೋಡಲು ಬರುವುದಿಲ್ಲ; ನೋಡಬೇಕು ಅನಿಸಿದ್ದಕ್ಕೆ ಬರುತ್ತಾನೆ.

**3. ಪ್ರಶ್ನೆ : ಪೌರ್ವಾತ್ಯ - ಪಾಶ್ಚಿಮಾತ್ಯ - ಭಾರತೀಯ ರಂಗಭೂಮಿಯ ಕುರಿತು ತಮ್ಮ ಅಭಿಪ್ರಾಯವೇನು?**

**ಉತ್ತರ :** "ನಮ್ಮಲ್ಲಿ ಪ್ರತಿಭೆಗೆ ಕೊರತೆಯಿಲ್ಲ. ಸುವ್ಯವಸ್ಥೆ ಅಗತ್ಯ. ಪ್ರತಿಭೆಯನ್ನು ಶಿಸ್ತಿನ ಹಿಡಿತಕ್ಕೆ ತಂದು Good discipline ಮತ್ತು Self disciplineಗೆ ಒಳಪಡಿಸಬೇಕು. ಪ್ರೇಕ್ಷಕರಲ್ಲಿ ಉತ್ತಮ ನಾಟಕಾಭಿರುಚಿಯನ್ನು create ಮಾಡಲು ನಾವೇ ಕಾರಣರಾಗಿದ್ದೇವೆ. ನಮ್ಮ ಅಕಾಡೆಮಿ ಕೂಡ ಪಾಶ್ಚಾತ್ಯ ರಂಗಭೂಮಿಯ ಪ್ರಭಾವದಿಂದ organize ಆಗಿರುವುದರಿಂದ ನಮ್ಮವರು ಅಲ್ಲಿಗೆ ಹೋಗಿಬಂದಿರುವುದರಿಂದ ಪಾಶ್ಚಾತ್ಯ ರಂಗಭೂಮಿಯ ಪ್ರಭಾವದ ಮೇಲೆಯೇ ಆಧುನಿಕ ಭಾರತೀಯ ರಂಗಭೂಮಿ ಬೆಳೆಯುತ್ತಿದೆ. Life ಅನ್ನು ಪಾಶ್ಚಾತ್ಯರು ಚೆನ್ನಾಗಿ study ಮಾಡಿದ್ದಾರೆ. ಜೊತೆಗೆ ನಾವು foreign complex ಬೆಳೆಸಿಕೊಂಡಿದ್ದೇವೆ. ಒಂದು ರೀತಿಯಲ್ಲಿ ಹೊಸ ಚಿಂತನೆಯನ್ನು ಕೊಟ್ಟವರು ಅವರೇ. ಇಂದು ಭಾರತೀಯ ರಂಗಭೂಮಿ ಒಂದು Cross roadನಲ್ಲಿದೆ. ನಾವಿಂದು ಪಾಶ್ಚಿಮಾತ್ಯ ರಂಗಭೂಮಿಯನ್ನು ಅನುಸರಿಸಿ ನಮ್ಮವನ್ನು ಗುರುತಿಸಿಕೊಳ್ಳಲು ತಾಕತ್ತಿಲ್ಲವಾಗಿದೆ. ನಿಜ ಹೇಳಬೇಕಾದರೆ Street Theatre, Puppet Theatre ಇವೆಲ್ಲ ವಿಶ್ವ ರಂಗಭೂಮಿಗೆ ಭಾರತೀಯ ರಂಗಭೂಮಿಯ ಉತ್ತಮ ಕೊಡುಗೆಗಳು. ಇವು ನಾನಾ ವಿಧಗಳಲ್ಲಿ ಪಾಶ್ಚಾತ್ಯ ರಂಗಭೂಮಿಯ ಮೇಲೆ ಪ್ರಭಾವವನ್ನುಂಟುಮಾಡಿವೆ.

ಕಲಾವಿದರು ವಿಶೇಷ ಆಸಕ್ತಿ ವಹಿಸಿ ಭಾರತೀಯ ರಂಗಭೂಮಿಯ ಕೆಲಸವನ್ನು ನಿರ್ವಹಿಸಬೇಕು. ರಂಗಭೂಮಿ ಒಂದು ಸಾಮಾಜಿಕ ಚಳುವಳಿಯಾಗಿ ಬೆಳೆಗಬೇಕು. ಬೌದ್ಧಿಕವಾಗಿ ಮೇಲ್ವರ್ಗದ Superiority Complex ಮತ್ತು ಕೆಳವರ್ಗದ ಜನರಲ್ಲಿನ Inferiority Complex ಹೋಗಿ ಎಲ್ಲ ವರ್ಗಗಳ ಜನರೂ ಒಟ್ಟಾಗಿ ಕೂಡಿ ಕೆಲಸ ಮಾಡಿದಾಗ ಖಂಡಿತವಾಗಿಯೂ ರಂಗಭೂಮಿ ಒಂದು ಸಾಮಾಜಿಕ ವಾಹಕವಾಗಿ ಬೆಳೆಯುತ್ತದೆ. Theatre is also a medium of propaganda. ರಂಗಭೂಮಿಯಲ್ಲಿ ಹೊಸ ಹೊಸ ಯೋಚನೆ, ಆಲೋಚನೆಗಳು ಮೂಡಿಬರಬೇಕು. ಯಾವತ್ತೂ ಸಮಯಕ್ಕೆ ಹೆಚ್ಚು ಆದ್ಯತೆ ನೀಡಬೇಕು. ಇದಕ್ಕೆ ಉತ್ಸಾಹ, ಪ್ರೋತ್ಸಾಹ ಮುಖ್ಯ. ರಂಗಭೂಮಿಯಲ್ಲಿ ಪ್ರಯೋಗಗೊಳ್ಳುವಂತಹ ಹೊಸ ನಾಟಕ ಕೃತಿಗಳು ಮೂಡಿಬರಬೇಕು. ರಂಗಭೂಮಿಯಲ್ಲಿ ಶಿಸ್ತಿಲ್ಲದಿದ್ದರೆ ಏನನ್ನೂ ನಿರ್ದಿಷ್ಟವಾಗಿ ಸಾಧಿಸಲಾಗದು. ಬುದ್ಧಿ ಇದ್ದಾಗ, ಶಕ್ತಿಯಿದ್ದಾಗ ಕೆಲಸ ಮಾಡಿ. ನಾನಂತೂ ಮೊದಲಿನಿಂದಲೂ ಶಿಸ್ತನ್ನು ಬೆಳೆಸಿಕೊಳ್ಳುತ್ತಲೇ ಬಂದಿದ್ದೇನೆ."*

ಇಂಗ್ಲಿಷ್ ಲೇಖಕ, ರಂಗ ವಿಮರ್ಶಕ ಐವರ್ ಜಾನ್ ಕಾರ್ನೆಗೈ ಬ್ರೌನ್ (Ivor John Carnegie Brown, 1891-1974) ಎಂಬುವನು 'Art Today' ಎಂಬ ಗ್ರಂಥದಲ್ಲಿ 'Dramatic Criticism - is it possible?' ಎಂಬ ಲೇಖನವನ್ನು ಬರೆದಿದ್ದು ಅದರ ಮೊದಲನೆಯ ವಾಕ್ಯ ಇಂತಿದೆ : 'Drama is the most cooperative of all the arts. But usually practiced by people who are totally incapable of cooperation.'

ರಷ್ಯನ್ ರಂಗಭೂಮಿಯತ್ತ ಕೊಂಚ ದೃಷ್ಟಿ ಹರಿಸುವುದಾದರೆ Konstantin Sergeivich Alexeyev (stanislavsky) (5 ಜನವರಿ 1863-1938)ಯು 1897ರ ವಸಂತಕಾಲದಲ್ಲಿ 'Moscow Art Theatre'ನ್ನು ಸ್ಥಾಪಿಸಿದನು. ಅವನೋರ್ವ ಶ್ರೇಷ್ಠ ಚಾರಿತ್ರಿಕ ಪ್ರಸಿದ್ಧ ನಟ ಹಾಗೂ ನಿರ್ದೇಶಕನಾಗಿದ್ದನು. ಅವನು ಸಂಕ್ಷಿಪ್ತ ತಾತ್ಪರ್ಯಕ್ಕೆ ನೈಜತೆಯ ಶೈಲಿಯಲ್ಲಿ ಅಭಿನಯ ಕಲೆಯೆಂಬುದನ್ನು ಅನುಸರಿಸುವ ಪದ್ಧತಿಯನ್ನು ತಿಳಿಸಿದನು. ಅವನ ಗ್ರಂಥಗಳಾದ An Actor Prepares (1936), Heritage Role, Stanislavsky Rehearses othello (1948), Building A Character (1950), My Life in Art (1924) ಮತ್ತು Creating A Roleನ್ನು ಪರಾಮರ್ಶಿಸಬಹುದು. ಇವುಗಳು ನೈಜ ಅಭಿನಯ ಶೈಲಿಯ ಒಂದು ಪದ್ಧತಿಯನ್ನು ಸಂಕ್ಷಿಪ್ತ ತಾತ್ಪರ್ಯದಲ್ಲಿ ತಿಳಿಸಿವೆ. ಕೃತಿಕಾರನು ತನ್ನ ಆತ್ಮಕಥೆ 'My Life in Art' ಮತ್ತು 'An Actor prepares' ಕೃತಿಗಳಲ್ಲಿ ರಂಗಸ್ಥಿರತೆ (Stage Constancy)ಯನ್ನು ವಿವರಿಸುತ್ತ ಒಬ್ಬ ನಟನು ರಂಗದ ಮೇಲೆ ಏನನ್ನು ಸಿದ್ಧತೆ ಮಾಡಿಕೊಳ್ಳಬೇಕೆಂಬುದನ್ನು

ತಿಳಿಸಿದ್ದಾನೆ. ಈತನು ಮತ್ತು ಲೇಖಕ, ನಾಟಕಕಾರ Nemirovich-Danchenko 18 ಗಂಟೆಗಳ ಕಾಲ ರೂಪರೇಷೆಗಳನ್ನು ಚರ್ಚೆಮಾಡಿ ಸಾರ್ವಜನಿಕ Moscow Art Theatre (1898)ನ್ನು ಸೃಷ್ಟಿಮಾಡಿದರು. The Seagull (1898) ನಾಟಕದ ಪಕ್ಷಿಯನ್ನು ಇದರ ಲಾಂಛನ (Logo)ವನ್ನಾಗಿ ಬಳಸಲಾಯಿತು. ಇದರ ಮೊದಲ Production ಎಂದರೆ ಅಂಟನ್ ಪಾವ್ಲೋವಿಚ್ ಚೆಕೊವ್ (1860-1904)ನ 'The Seagull' (ರಚನೆ : 1896) ನಾಟಕ. ಇದೊಂದು ನಾಲ್ಕು ಅಂಕಗಳನ್ನುಳ್ಳ ಹಾಸ್ಯ ನಾಟಕವಾಗಿದ್ದು ಹಾಗೂ ಇದರ ಪ್ರಥಮ ಪ್ರದರ್ಶನವು ಮಾಸ್ಕೋ ಥಿಯೇಟರ್‌ನಲ್ಲಿ 17 ಡಿಸೆಂಬರ್ 1898ರಂದು ನೆರವೇರಿತು. ನಟರು Naturalistic style (Naturalism - ವಾಸ್ತವವಾದಿ ರಂಗಭೂಮಿ)ನಲ್ಲಿ ಅಭಿನಯಿಸುತ್ತಿದ್ದರು. Smt. Sonia Moore ಅವರು 'The stanislavsky System' ಎಂಬ ಪುಸ್ತಕವನ್ನು ಬರೆದಿದ್ದು ಈ ಎಲ್ಲಾ ತಾತ್ಪರ್ಯಗಳನ್ನು ಇದು ಹೊಂದಿದೆ. ಇದು ಹಿಂದಿ ಭಾಷೆಯಲ್ಲಿಯೂ ಬೆಳಕು ಕಂಡಿದ್ದು ಎನ್.ಎಸ್.ಡಿ.ಯು ಪ್ರಕಟಿಸಿದೆ.

Eric Bentleyಯು 'Brechtian Theatre' ಪುಸ್ತಕವನ್ನು ಬರೆದಿದ್ದು ಅದರಲ್ಲಿ ಬ್ರೆಕ್ಟ್ ಸೃಷ್ಟಿಸಿದ Epic Theatre ಬಗ್ಗೆ ಹೇಳುತ್ತಾ Stanislavsky as Method of Acting ಬಗೆಗೆ ಹೋಲಿಸಿ ಬರೆದಿರುವನು.

ಖ್ಯಾತ ನಟ ಎನ್.ಟಿ. ರಾಮರಾವ್‌ರವರ ಕ್ಲಾಸ್‌ಮೇಟ್‌ರಾಗಿದ್ದ ಪಿ.ಎಸ್. ರಾಮರಾಯರ 'Makers of Modern Theatre' ಪುಸ್ತಕದಲ್ಲಿ ಆಧುನಿಕ ಪಾಶ್ಚಿಮಾತ್ಯ ರಂಗಭೂಮಿಯಲ್ಲಿರತಕ್ಕಂಥ ಹೊಸತನವನ್ನು, ಚಿಂತನೆಗಳನ್ನು ಹಾಗೂ ಅಲ್ಲಿನ ಕಲಾವಿದರ ಕುರಿತು ಅನೇಕ ಸಂಗತಿಗಳಿವೆ.

**4. ಪ್ರಶ್ನೆ : ಅಂದಿನ ಮತ್ತು ಇಂದಿನ ರಂಗತಾಂತ್ರಿಕತೆ ರಚನೆಯ ಬಗೆಗೆ ಬೆಳಕು ಚೆಲ್ಲುವಿರಾ?**

ಉತ್ತರ : ನೇಪಥ್ಯದ ಉಗಮವನ್ನು ಭರತನ ನಾಟ್ಯಶಾಸ್ತ್ರದಲ್ಲಿಯೇ ಹೇಳಿದೆ. ಶಿಲ್ಪ ಅಂದರೇನು? ಕಾಲಕಾಲಕ್ಕೆ ನೇಪಥ್ಯದಲ್ಲಿ ಆಗತಕ್ಕಂಥ ಬದಲಾವಣೆಗಳೇನು? ಅವುಗಳನ್ನು ತಿಳಿಯಬೇಕು. ಅರ್ಥವತ್ತಾದ ಲೈಟಿಂಗ್ ಬಳಕೆಯು ಬಂದದ್ದು ಇತ್ತೀಚೆಗೆ. ಹೊಸ ಹೊಸ ಬೆಳಕಿನ ಹಾಗೂ ಧ್ವನಿ ಉಪಕರಣಗಳು ಸಲಕರಣೆಗಳು ಬಂದಂತೆ ತಂತ್ರಜ್ಞಾನ ಬೆಳೆಯಿತು; ಅದು ನಿರಂತರವಾಗಿ ಮುಂದುವರೆದಿದೆ. ಮೊದಮೊದಲು ಲೈಟಿಂಗ್‌ಗಳಿಗಾಗಿ ಊಂಬತ್ತಿ (Candle), ಪಂಜು, ಹರಳೆಣ್ಣೆ ದೀಪಗಳನ್ನು ಬಳಸಲಾಗುತ್ತಿತ್ತು. ಅನಂತರ ಗ್ಯಾಸ್‌ಲೈಟ್, ಪೆಟ್ರೋಮಾಕ್ಸ್ ಬಂತು. ತದನಂತರ ಬಲ್ಬುಗಳು, ಸ್ಪಾಟ್‌ಲೈಟ್, ಹಾಲೊಜಿನ್ ಲೈಟ್, ಎಲಿಪ್‌ಸಾಯ್ಡಲ್ (Ellipsoidal),

ಮಿರರ್‌ಸ್ಪಾಟ್, ಬೈಫೋಕಲ್ ಸ್ಪಾಟ್, ಮಾನೋಪ್ಲೇನ್ ಲ್ಯಾಂಪ್, ಬೈಪ್ಲೇನ್ ಲ್ಯಾಂಪ್, ಆಪ್ಟಿಕಲ್ ಪ್ರೊಜೆಕ್ಟರ್ ಮತ್ತು ಜಿನಿಯನ್ ಆರ್ಕ್‌ಲ್ಯಾಂಪ್ ಮುಂತಾದವು ಬಂದವು. ಮುಂದುವರೆದಂತೆ ಡೈನಾಮೋ (ಜನರೇಟರ್) ಬಳಸಿ ಬೆಳಕನ್ನು ಉಪಯೋಗಿಸುತ್ತಿದ್ದರು. ಕಥಕ್ಕಳಿಯಲ್ಲಿ 'ಕೂತ್ತುವಿಳುಕ್ಕುಂ' ಎನ್ನುವುದರಲ್ಲಿ ಕಂಚಿನ ದೀಪಸ್ತಂಭವನ್ನಿಟ್ಟು ದೀಪವನ್ನು ಎಣ್ಣೆ ಹಾಕಿ ಬತ್ತಿ ಹಚ್ಚಿ ದಪ್ಪವಾಗಿರುವ ಬೊಂಬನ್ನು ಅಡ್ಡಲಾಗಿ ಸೀಳಿ ದೋಣಿತರಹ ಮಾಡಿ ಆ ದೋಣಿಯಲ್ಲಿ ಚಿತ್ರಗಳನ್ನಿಟ್ಟು ಫುಟ್‌ಲೈಟ್ ತರಹ ಬಳಸುತ್ತಿದ್ದರು. Natural Source of Light ಇರುತ್ತಿತ್ತು (ಕೂತ್ತುವಿಳಕ್ಕುಂ). ಈ ರೀತಿಯಾಗಿ ಪರಂಪರಾಗತವಾಗಿ ಅವಶ್ಯಕತೆಗೆ ತಕ್ಕಂತೆ ಬೆಳೆದುಬಂದಂತಹ ಅಭ್ಯಾಸಗಳೇ ನಂತರದಲ್ಲಿ ಈಗಿನ ವಿದ್ಯುತ್ ಫುಟ್‌ಲೈಟ್‌ಗಳಾಗಿ ಪರಿವರ್ತಿತವಾಗಿ ಬಳಕೆಯಾಗಲಾರಂಭಿಸಿತು. ಹೀಗೆ ಒಂದಕ್ಕೊಂದು ಕೊಂಡಿಕೊಂಡಿಯಾಗಿ ಲೈಟ್ ವಿನ್ಯಾಸ ಬೆಳೆಯಿತು. ಆದುದರಿಂದ ರಂಗಕರ್ಮಿಯು ರಂಗಭೂಮಿಯ ಎಲ್ಲಾ ವಿಭಾಗಗಳ ಬಗೆಗೂ ತಿಳಿದುಕೊಂಡಿರಬೇಕು. ಇದನ್ನು ನಾನು ಭಾವುಕನಾಗಿ ಹೇಳುತ್ತಿಲ್ಲ, ಸ್ವತಃ ಪ್ರಾಕ್ಟಿಕಲ್ ಆಗಿ ಅನುಭವಿಸಿದ್ದನ್ನು ಹೇಳುತ್ತಿದ್ದೇನೆ. ನಾನು ಆಧುನಿಕತೆ ಮತ್ತು ಪರಂಪರೆ ಎರಡನ್ನೂ ಬಳಸಿ ಹೊಸತನವನ್ನೂ ಕೊಡುತ್ತಾ ಬಂದಿದ್ದೇನೆ.

ಧ್ವನಿವರ್ಧಕ (Loud speaker) ಇಲ್ಲದೆಯೇ ಧ್ವನಿಯು ಪ್ರತಿಯೊಬ್ಬನಿಗೂ ಮುಟ್ಟುವಂತೆ ಮಾಡುವುದು ತಾಂತ್ರಿಕ ಕಲಾವಂತಿಕೆ.

ಪ್ರತಿಯೊಂದು ರಂಗಮಂದಿರದಲ್ಲೂ ಧ್ವನಿ ವ್ಯವಸ್ಥೆ (Acoustic treatment) ಮತ್ತು ಶಬ್ದ ವ್ಯವಸ್ಥೆ (Audiosystem / Sound treatment)ಯನ್ನು ಅಳವಡಿಸಿ ಪ್ರೇಕ್ಷಕರಿಗೆ ಪ್ರಯೋಗವು ತಲುಪುವಂತೆ ಮಾಡಲಾಗುತ್ತಿದೆ. ಇದರಿಂದ ಧ್ವನಿ, ಪ್ರತಿಧ್ವನಿಯನ್ನು ನಿಯಂತ್ರಣದಲ್ಲಿಡಲಾಗುತ್ತಿದೆ. ಈ ದಿಸೆಯಲ್ಲಿ ಹೈದಾರಾಬಾದ್ ವಿಶ್ವವಿದ್ಯಾಲಯದ ವೈಸ್ ಚಾನ್ಸೆಲರ್ ಆಗಿದ್ದ ವಾಸ್ತುಶಿಲ್ಪಿ ದಿ. ಬಿ.ಎಸ್. ರಾಮಕೃಷ್ಣರವರನ್ನು ಸ್ಮರಿಸಬೇಕು. ಎಸ್.ಪಿ.ಬಿ. ಸ್ಟುಡಿಯೋವನ್ನು acoustic design ಮಾಡಿದ್ದು ಅವರೇ. ಆದರೆ ಅಂತಹವರನ್ನು ಸಾಮಾಜಿಕ ವ್ಯವಸ್ಥೆ ಗುರುತಿಸುತ್ತಿಲ್ಲ. ಡಾ. ಪಂಚವಲ್ಲಿ, ಡಾ. ಸುಬ್ರಹ್ಮಣ್ಯನ್ ಅವರು ಶಬ್ದ ವ್ಯವಸ್ಥೆ ಪರಿಣತರು ಮತ್ತು ವಾಸ್ತುಶಿಲ್ಪಿಗಳು. They are great acoustic specialists in the world.

ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನ ಅಗಾಧವಾಗಿ ಬೆಳೆಯುತ್ತಿದೆ. ಇತ್ತೀಚಿಗೆ ಬರುತ್ತಿರುವ ಬೆಳಕಿನ ಉಪಕರಣಗಳನ್ನು ನೋಡಿದರೆ ಸೋಜಿಗವೆನಿಸುತ್ತದೆ. ಆದಾಗ್ಯೂ ನಮ್ಮಲ್ಲಿ ಅನೇಕರು theatre screw ಅಂದರೆ ಏನು ಎಂದು ಹೇಳಿಕೊಡುವುದಿಲ್ಲ. ಒಂದು ಪ್ಲಾಟ್ ಎಂದರೇನು? ಒಂದು ಸೆಟ್ ಅನ್ನು ನಿಲ್ಲಿಸುವುದು ಹೇಗೆ? ಅದರ

ಬದಲಾವಣೆ ಹೇಗೆ? ಸ್ಟೇಜ್ ಡಿಸೈನ್ ಮಾಡುವಂತಹ ಕೆಲಸ ಸ್ಟೇಜ್ ಮ್ಯಾನೇಜರದು. ಪಾಶ್ಚಾತ್ಯ ರಂಗಭೂಮಿಯಂತೆ ಅದನ್ನು ತಕ್ಷಣ ನೆರವೇರಿಸುವ ಚಾಕಚಕ್ಯತೆ, ಶಿಸ್ತು ನಮ್ಮಲ್ಲಿರಬೇಕು. ಅದು ಒಂದು ಚಟವಾಗಬೇಕು, ಚಟವನ್ನು ತೀರಿಸಿಕೊಳ್ಳುವ ಹಠ ಇರಬೇಕು. ಹಠವಿಲ್ಲದಿದ್ದರೆ ಕೆಲಸ ನಡೆಯುವುದಿಲ್ಲ. ಹಠವಿದ್ದರೆ ಆಟ.

**5. ಪ್ರಶ್ನೆ : ರಂಗತರಬೇತಿ ಕುರಿತು ತಮ್ಮ ಅಭಿಪ್ರಾಯವೇನು?***

**ಉತ್ತರ :** "ರಂಗಭೂಮಿಯ ತರಬೇತಿ ಅಂದರೆ ನಾಟಕವನ್ನು ಜೀವಂತವಾಗಿ ರಂಗಭೂಮಿಯ ಮೇಲೆ ತರುವುದು ಎಂದರ್ಥ.... ನಿನ್ನೆಯ ಆಧಾರದ ಮೇಲೆ ಇಂದು, ಇಂದಿನ ಆಧಾರದ ಮೇಲೆ ನಾಳೆಯನ್ನು ಕಟ್ಟಬೇಕು. ಕಲೆಯನ್ನು ಎಲ್ಲಿಬೇಕಾದರೂ ಸೃಷ್ಟಿಸಬಹುದು. ಅದಕ್ಕೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಂತಹ ಮಂದಿರವೇ ಆಗಬೇಕಿಲ್ಲ."

ಟ್ರೆಡಿಷನ್ ವರ್ಸಸ್ ಟೆಕ್ನಾಲಜಿ ವಿಷಯ ಕುರಿತಂತೆ : "ಪಾಶ್ಚಿಮಾತ್ಯರಿಗೆ ತಾಂತ್ರಿಕತೆ ಅನಿವಾರ್ಯವಾಗಲು ಕಾರಣವೆಂದರೆ ಅವರಲ್ಲಿ ಇವತ್ತಿಗೂ ವೃತ್ತಿಪರತೆ ಇದೆ. ಅವರು ಒಂದು ದಿನದಲ್ಲಿ ಮೂರು ಬಗೆಗಳ ನಾಟಕಗಳನ್ನಾಡುವಾಗ ತಂತ್ರಜ್ಞಾನವನ್ನು ಅವಲಂಬಿಸದೆ ಸಾಧ್ಯವಿಲ್ಲ. ಆದರೆ ತಾಂತ್ರಿಕತೆಗೆ ಗುಲಾಮರಾಗದೆ ಅದನ್ನು ಬಳಸಬೇಕು."

**6. ಪ್ರಶ್ನೆ : ರಂಗಭೂಮಿಯು ಶೈಕ್ಷಣಿಕ ಬೆಳವಣಿಗೆಯ ರೂಪರೇಷೆಗಳೇನು?**

**ಉತ್ತರ :** ರಂಗಭೂಮಿಯ ಸರ್ವಾಂಗೀಣ ಶೈಕ್ಷಣಿಕ (Academic) ಬೆಳವಣಿಗೆಗೆ ರಂಗಕರ್ಮಿಗಳು ತಮ್ಮನ್ನು ತಾವು ಹೆಚ್ಚೆಚ್ಚು ಸಂಶೋಧನಾಕಾರ್ಯದಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳಬೇಕು. ಪಿಹೆಚ್.ಡಿ.ಯಂಥ ಮಹಾಪ್ರಬಂಧಗಳ ಸದುಪಯೋಗವು ರಂಗಭೂಮಿಯ ಬೆಳವಣಿಗೆಯಲ್ಲಿ ಕಾಣುವಂತಾಗಬೇಕು. ರಂಗಭೂಮಿಯನ್ನು ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವೃತ್ತಿಪರ ಕ್ಷೇತ್ರಗಳಲ್ಲಿಯಂತೆ ಗೌರವ, ಮನ್ನಣೆಯಿಂದ ಕಾಣುವಂತಾಗಬೇಕು.

ಸಾಧನೆಯೆಂಬುದು ರಂಗಭೂಮಿಯಲ್ಲಿ ದುಡಿಯುವವರ ಹೆಗ್ಗುರುತಾಗಬೇಕು. ಕಲಾವಿದರಲ್ಲಿ ತರಬೇತಿ / ಕಲಿಕೆಯ ನಿಷ್ಠಾವಂತ ಗುಣ, ರಂಗಶಾಸ್ತ್ರದಲ್ಲಿ ಕಲಿತದ್ದನ್ನು ಕಾರ್ಯರೂಪಕ್ಕೆ ತರುವ ನಿಷ್ಠಾವಂತ ಪ್ರಯತ್ನದಿಂದಾಗಿ ರಂಗಭೂಮಿಯ ವಿಕಾಸವಾಗುವಂತೆ ಪ್ರಯತ್ನಿಸಬೇಕು. ಇದು ಕೇವಲ ತಾತ್ಕಾಲಿಕ ಯಶಸ್ಸಿನ ಸ್ವರೂಪದ್ದಾಗಿರಬಾರದು. Learning is a continuous and lifelong process.

ಪ್ರತಿಯೊಂದು ವಿಷಯದ ಬಗ್ಗೆ ಪಠ್ಯಕ್ರಮವಿರಬೇಕು. ಕನ್ನಡ ರಂಗಭೂಮಿಗೆ ಒತ್ತುಕೊಟ್ಟು ಇತರ ಭಾಷೆಗಳ ರಂಗಭೂಮಿಯ ಅಧ್ಯಯನವಾಗಬೇಕು. A good

teacher inspires.

ಸ್ಥಳೀಯವಾಗಿ ರಂಗಭೂಮಿಯ ಬೆಳವಣಿಗೆಗಾಗಿ ರಂಗ ಚಟುವಟಿಕೆಗಳನ್ನು ಉದ್ದೀಪನಗೊಳಿಸಲು ರಾಜ್ಯದ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿಯೂ ರಂಗಮಂದಿರವಿರಬೇಕು. ಇದರೊಡನೆ ಸ್ಥಳೀಯ ಸಂಬಂಧಿತ ರಂಗಪ್ರಕಾರಗಳ ಕುರಿತ ವಿಶೇಷ ಪುಸ್ತಕ ಭಂಡಾರವಿದ್ದು ಅದು ಅಧ್ಯಯನ ಕೇಂದ್ರವಾಗಬೇಕು. ಆಧುನಿಕ ಪರಿಕರಗಳಾದ ಆಡಿಯೋ ವಿಡಿಯೋ ಲೈಬ್ರರಿಯಿದ್ದು ರಂಗಮಾಧ್ಯಮದ ದಾಖಲಾತಿ ಹಾಗೂ ಸಂಶೋಧನಾ ಕಾರ್ಯಗಳಿಗೆ ನೆರವಾಗುವಂತಿರಬೇಕು. ರಂಗಕಮ್ಮಟಗಳು ಸುಸಜ್ಜಿತಗೊಂಡು ಕಾರ್ಯನಿರ್ವಹಣೆಯ ಪ್ರಗತಿ ಪಥದಲ್ಲಿರಬೇಕು. ಒಳ್ಳೆಯ ನಾಟಕಗಳನ್ನು ಹಾಗೂ ಪ್ರೇಕ್ಷಕರ ಸಂಖ್ಯೆಯನ್ನು ಬೆಳೆಸಬೇಕು.

**7. ಪ್ರಶ್ನೆ : ವಿಚಾರ ಸಂಕಿರಣಗಳ ಉಪಯುಕ್ತತೆ ಕುರಿತು ಏನು ಹೇಳುವಿರಿ?**

**ಉತ್ತರ :** ನಮ್ಮ ದೇಶದಲ್ಲಿ ರಂಗಭೂಮಿಯಿರುವುದು ಸಭಾ ಸಮಾರಂಭಗಳ ವೇದಿಕೆಯ ಮೇಲಲ್ಲ. ಪ್ರಸ್ತುತ ಅಲ್ಲಿ ಸೆಮಿನಾರ್ ಮಾಡುವವರ ನಾಲಗೆಯ ಮೇಲೆ ನಾಟಕ ನಡೆಯುತ್ತದೆ! The theatre is on the tongue of seminaries. ಆದರೆ ಅದು ಹಾಗೆ ಆಗಬಾರದು. ಅಧ್ಯಯನಶೀಲತೆ ಬೇಕು, ಕಾರ್ಯಸಾಧಕರಾಗಬೇಕು, ಕಾರ್ಯಾನುಷ್ಠಾನ ಮಾಡಿದ್ದು ಸರಿಯೋ ತಪ್ಪೋ ಎಂಬುದನ್ನು ವಿಚಕ್ಷಣ ದೃಷ್ಟಿಯಿಂದ ನೋಡುವ ಮಾಡುವ ಶಕ್ತಿಯಿರಬೇಕು. ಇದು ಒಂದೆರಡು ದಿನಗಳಲ್ಲಿ ಬರುವಂತಹದಲ್ಲ; ಡಿಗ್ರಿ - ಡಿಪ್ಲೋಮಾ ಮಾಡುವುದರಿಂದ ಬರುವುದಿಲ್ಲ; ಇವುಗಳು ಒಂದು ಶೈಕ್ಷಣಿಕ ಆಧಾರವಷ್ಟೇ. ಅದರ ಮೇಲೆ ಕಟ್ಟಡವನ್ನು ಕಟ್ಟುತ್ತಾ ಹೋಗಬೇಕು. ಇದು ನಾನು ಸುಮಾರು ಅರವತ್ತೆರಡು ವರ್ಷಗಳ ಕಾಲ ರಂಗಭೂಮಿಯಲ್ಲಿ ನಿರಂತರವಾಗಿ ಕೆಲಸ ಮಾಡಿಕೊಂಡು ಬಂದಿರುವುದರ ಪ್ರಾಮಾಣಿಕ ಅನುಭವವಾಗಿದೆ; ಸುಮಾರು 40-42 ವರುಷಗಳಿಂದ ನನಗೆ ರಂಗಭೂಮಿ ವೃತ್ತಿಯಾಗಿದೆ.

ಒಂದು ಮಟ್ಟದಿಂದ ಮೇಲಿನ ಮಟ್ಟಕ್ಕೆ ಹೋಗುವುದಕ್ಕೆ ಏನು ಮಾಡಬೇಕು ಎನ್ನುವುದರ ಬಗ್ಗೆ ಯೋಚನೆಮಾಡಿ ಯೋಜನೆಗಳನ್ನು ಹಾಕಿಕೊಳ್ಳುವುದಕ್ಕೆ ವಿಚಾರ ಸಂಕಿರಣಗಳು, ಕಮ್ಮಟಗಳು ವೇದಿಕೆಗಳಾಗಬೇಕು. ಆಗ ಅವುಗಳನ್ನು ನಡೆಸುವುದು ಸಾರ್ಥಕವಾಗುತ್ತದೆ. ಅಂತಹ ವಿಚಾರ ಸಂಕಿರಣಗಳ ಏರ್ಪಾಟಾಗಬೇಕೆಂಬುದೇ ನನ್ನ ಬಯಕೆ, ಸೈಜ ಕಳಕಳಿಯ ಮನವಿ. 'The meaning of play lies between the lines.'

**8. ಪ್ರಶ್ನೆ : ರಂಗಭೂಮಿ - ಚಲನಚಿತ್ರರಂಗ - ದೂರದರ್ಶನ ಮಾಧ್ಯಮಗಳ ನಡುವೆಯ ಸಂಬಂಧವೇನು?**

ಉತ್ತರ : ರಂಗನಾಟಕಗಳನ್ನು ಯಶಸ್ಸು ಕಂಡ ಚಲನಚಿತ್ರಗಳಂತೆಯೇ ಪ್ರದರ್ಶಿಸಲು ಯತ್ನಿಸುವುದರೊಂದಿಗೆ ದ್ವಂದ್ವಾರ್ಥ ಬರುವಂಥ ಸಂಭಾಷಣೆಗಳನ್ನು ಬರೆಸಿ ಬಳಸಿ ಹೇಳಿಸಿ ಆಡಿಸುವ ಪ್ರಕ್ರಿಯೆಯೂ ಸೇರಿ ರಂಗಭೂಮಿಯು ತನ್ನ ಮೂಲ ಗಾಂಭೀರ್ಯವನ್ನು ಕಳೆದುಕೊಳ್ಳುವಂತಾಯಿತು. ಕೆಲವು ಕೆಟ್ಟ ಸಿನಿಮಾಗಳ ಹಾವಳಿಯ ಪ್ರಭಾವದಿಂದಾಗಿ ರಂಗಭೂಮಿಗೆ ಕೆಟ್ಟದಾಗಿದೆ. ವೃತ್ತಿ ರಂಗಭೂಮಿಯನ್ನು ಅನುಸರಿಸಿದವರಲ್ಲಿ ಎಷ್ಟೋ ಒಳ್ಳೆಯ ಜನರಿದ್ದಾರೆ, ಒರಿಜಿನಾಲಿಟಿಯನ್ನು ಉಳಿಸಿಕೊಂಡಿದ್ದಾರೆ. ಅಂದರೆ ಬಹುಶಃ ವಿಭಿನ್ನ ಮಾರ್ಗವಿಡಿಯಲು ರಂಗಭೂಮಿಗೆ ಚಲನಚಿತ್ರ ಮಾಧ್ಯಮವೂ ಕಾರಣವಾಗಿರಬೇಕು. ಇದರಂತೆಯೇ ಇಂದು ರಂಗಭೂಮಿಗೆ ದೂರದರ್ಶನ ಸವಾಲಾಗಿ ನಿಂತಿದೆ. ಕಲಾವಿದರು ರಂಗಭೂಮಿಯಿಂದ ಸಿನಿಮಾ ಮತ್ತು ವಿದ್ಯುನ್ಮಾನ ಮಾಧ್ಯಮಗಳತ್ತ ವಲಸೆ ಹೋದರೂ ರಂಗಭೂಮಿಯೊಡನೆ ಅವಿನಾಭಾವ ಸಂಪರ್ಕವನ್ನಿಟ್ಟುಕೊಂಡು ಕೆಲಸ ಮಾಡಬೇಕು. ಆಗ ಜನರು ನಾಟಕಗಳನ್ನು ನೋಡಲು ಬರುತ್ತಾರೆ. ಪ್ರೇಕ್ಷಕರ ಇಂತಹ ಮನೋಭಾವವನ್ನು ನೆರೆಯ ಮಹಾರಾಷ್ಟ್ರ ಮತ್ತು ದೂರದ ಪಶ್ಚಿಮ ಬಂಗಾಳ ಮುಂತಾದ ರಾಜ್ಯಗಳಲ್ಲಿ ಹಾಗೂ ದೆಹಲಿಯಲ್ಲಿ ಕಾಣಬಹುದಾದ ಉತ್ತಮ ಉದಾಹರಣೆಗಳಾಗಿವೆ. ಉತ್ತಮ ಪ್ರದರ್ಶನಗಳನ್ನಿತ್ತು ಪ್ರೇಕ್ಷಕರ ಸದಭಿರುಚಿಯನ್ನು ಪೋಷಿಸುವುದು ರಂಗಕರ್ಮಿಗಳ ಆದ್ಯ ಕರ್ತವ್ಯವೂ ಆಗಿದೆ. ರಂಗಕರ್ಮಿಗಳು ಹೊಸತನವನ್ನು ಕಂಡುಕೊಳ್ಳುವಲ್ಲಿ ಉದ್ಯುಕ್ತರಾಗಬೇಕು, ರಂಗಭೂಮಿ ನಿತ್ಯನೂತನವಾಗಿರಬೇಕು.

**9. ಪ್ರಶ್ನೆ : ತಮ್ಮ ರಂಗಪಯಣದಲ್ಲಿ ಎದುರಿಸಿದ ಸವಾಲುಗಳು ಮತ್ತು ವಿಭಿನ್ನ ಕ್ಷಣಗಳ ಸಂಬಂಧಗಳನ್ನು ಕುರಿತು ಹೇಳುವಿರಾ?**

ಉತ್ತರ : ಜೀವನದಲ್ಲಿ ಎದುರಾಗುವ ಪ್ರತಿಯೊಂದು ಸಂಗತಿಯೂ Challange ಆದುದು. ನಾನು ಎಂದೆಂದಿಗೂ ರಂಗಭೂಮಿಯಲ್ಲಿಯೇ ಇರಬೇಕೆಂದು accept ಮಾಡಿಕೊಂಡು ಇದ್ದೀನಿ. ಅದುವೇ ಒಂದು ದೊಡ್ಡ Challange. ಅಭಿನಯವೂ ಒಂದು Challange.

ಸುಖ ಎಂದರೆ ನಾಟಕದಲ್ಲಿ ಅಭಿನಯ ಮಾಡಿದರೆ ಅಥವಾ ಯಾವುದೇ ಕಾರ್ಯವನ್ನು ನಿರ್ವಹಿಸುವಾಗ ಎಲ್ಲರೂ ಸಲಹೆ ಸಹಕಾರ ನೀಡುವಂತಹದು. ಅದು ಸಿಕ್ಕಿದಾಗ ಸುಖ ಸಂತೋಷ, ಆನಂದ ಉಂಟಾಗುತ್ತದೆ. ಕೆಲವರು ಸಹಕಾರ ಕೊಡುವುದಿಲ್ಲ. ಅಂತಹವರನ್ನು ನಾನು ಬೇಡ ಬೇಡವೆಂದು ಓಡಿಸಿ ಬಿಡುತ್ತೇನೆ, ಅಷ್ಟೇ! ನನಗೆ ರಂಗಶಿಸ್ತು ಬೇಕು. ಒಮ್ಮೆ ಒಂದು ಜಿಜ್ಞಾಸೆ ಏರ್ಪಟ್ಟಿತ್ತು. ಉದಾಹರಣೆಗೆ, ಶ್ರೀರಂಗರ ನೂರನೇ ವರ್ಧಂತಿ ಸಂದರ್ಭದಲ್ಲಿ ಎನ್.ಎಸ್.ಡಿ.ಯವರು ಒಂದು ಫೆಸ್ಟಿವಲ್ ಮಾಡಿದರು.

ಅದರ ಕಡೇ ದಿನದಂದು ಎನ್.ಎಸ್.ಡಿ. ರೀಜನಲ್ ರಿಸೋರ್ಸ್ ಸೆಂಟರ್ (Regional Resource Centre)ನ ಡೈರೆಕ್ಟರಾಗಿದ್ದ ನಿರ್ದೇಶಕ ಸುರೇಶ್ ಆನಗಳ್ಳಿಯವರ ಕೋರಿಕೆಯಂತೆ 'ಸಿರಿ ಪುರಂದರ'ಕ್ಕೆ ನಿರ್ದೇಶನ, ಸಂಗೀತ, ರಂಗ ವಿನ್ಯಾಸದ ಡಿಸೈನ್ ಮಾಡಲಾಯಿತು. ಅ.ನ. ರಮೇಶ್ ಲೈಟಿಂಗ್ ಕಾರ್ಯದಲ್ಲಿ ತೊಡಗಿದ್ದರು. ಆ ನಾಟಕದಲ್ಲಿ Idea ಮುಖ್ಯವಾಗಿ ಮತ್ತು ಸಂಗೀತವು ನಾಟಕದ ವಸ್ತುವನ್ನು Underline ಮಾಡುವುದು Important ಆಗಿಬಿಟ್ಟಿತ್ತು. ಲೌಕಿಕ ಜೀವನವನ್ನು ನಡೆಸುತ್ತಿದ್ದ ಬ್ರಾಹ್ಮಣನ ಮಣ್ಣಿನ ಮಹಿಮೆಯ ಬಗ್ಗೆ ಕೋಪದಿಂದ ಹೇಳಿದ ಮಾತುಗಳ ಸೀನಪ್ಪನಾಯಕನ ಮನಸ್ಸಿನ ಮೇಲೆ ಪ್ರಭಾವ ಬಿದ್ದು ಅವನ ಮನಸ್ಸು ಪಾರಮಾರ್ಥಿಕದ ಕಡೆಗೆ ತಿರುಗಿತು, ಪಂಡರಾಪುರದಲ್ಲಿರುವ ಮತ್ತು ಆತನ ಮನೆದೇವರಾಗಿದ್ದಂಥ ಪುಂಡಲೀಕನ ಕಡೆಗೆ ತಿರುಗಿತು. ಸೀನಪ್ಪನಾಯಕನು ಪುರಂದರದಾಸನಾಗಿ ಪರಿವರ್ತಿತನಾಗಲು ಕಾರಣವನ್ನುಳ್ಳ theme ಅದು. ಆಗಿನ ಕಾಲದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಇತ್ತೆ? ಇದ್ದರೂ ಸಂಗೀತ ಇಷ್ಟು ಬೆಳೆದಿತ್ತೆ? ಇತ್ತು, ಆದರೆ ಒಂದು ಕ್ರಮವೆಂಬುದಿರಲಿಲ್ಲ. ಕರ್ನಾಟಕ ಸಂಗೀತ ಪಿತಾಮಹರಾದ ಪುರಂದರದಾಸರು ತಂಬೂರಿ ಅಥವಾ ಏಕನಾದವನ್ನು ಇಟ್ಟುಕೊಳ್ಳುತ್ತಿದ್ದರಾ? ಎಂಬ ಪ್ರಶ್ನೆಗಳೆದ್ದವು. ಸಂಗೀತದಲ್ಲಿ ಕ್ರಮವನ್ನು ಸೃಷ್ಟಿ ಮಾಡಿದವರು ಪುರಂದರದಾಸರು. ಈ ನಾಟಕದಲ್ಲಿ ಪುರಂದರದಾಸನಾಗಿ ಪ್ರಕಾಶ ಶೆಟ್ಟಿ, ವೇಶ್ಯೆ ವನಜಾಕ್ಷಿಯಾಗಿ ಚಂಪಾಶೆಟ್ಟಿ, ಪತ್ನಿ ಸರಸ್ವತಿಯಾಗಿ ವಸುಂಧರಾ ಕುಲಕರ್ಣಿ, ಪುರಂದರದಾಸರ ಆತ್ಮೀಯ ಸ್ನೇಹಿತ ಬಿಂದುಮಾಧವನ ಪಾತ್ರದಲ್ಲಿ ರಾಜ್‌ಕುಮಾರ್, ಸೂತ್ರಧಾರ ಮಿತ್ರನಾಗಿ ರಂಗಸ್ವಾಮಿ, ಸೂತ್ರಧಾರನ ಪಾತ್ರದಲ್ಲಿ ಜಗದೀಶ ಜಾಲಾ ಹಾಗೂ ಬ್ರಾಹ್ಮಣನ ಪಾತ್ರದಲ್ಲಿ ಶ್ರೀಧರ್ ಇದ್ದರು. ಸಂಗೀತದಲ್ಲಿ ನೆರವಾದವರು ಸರ್ವೇಶ್ ಅವರು. ಇದರ ನಿರ್ಮಾಪಕರು ಕೆ.ವಿ. ನಾಗರಾಜಮೂರ್ತಿಯವರು.

ಏನೇ ಆಗಲಿ ರಂಗಕರ್ಮಿಗಳೆಲ್ಲರೂ ಹಾಡುವುದನ್ನು ಮತ್ತು ವಾದ್ಯಗಳನ್ನು ಬಳಸುವುದನ್ನು ಕಲಿತಿರಬೇಕು. ಆದರೆ ಸಂಗೀತವೇ ಪ್ರಧಾನವಲ್ಲ. ಸಂಗೀತ ಎನ್ನುವುದು ನಾಟಕದ ಸನ್ನಿವೇಶಕ್ಕೆ ತಕ್ಕಂತೆ ಒತ್ತುಕೊಡತಕ್ಕದ್ದು. ಆಯಾಯಾ ಸನ್ನಿವೇಶದ ಭಾವನೆಗೆ ತಕ್ಕ ಹಾಗೆ ಶಬ್ದ ಸಂಯೋಜನೆ ಹಾಗೂ ಸಂಗೀತ ರಾಗಸಂಯೋಜನೆಯಿರಬೇಕು. ಆದಾಗ್ಯೂ ಸಂಗೀತ ವಾದ್ಯಗಳೇ ಇರಬೇಕೆಂದಿಲ್ಲ.

ಪ್ರದರ್ಶನಕ್ಕೆ ಪೂರಕವಾಗಿ ಬೆಳಕು ಹಾಗೂ ಸೆಟ್ಟು ಹಾಗೆಯೇ ಇರಬೇಕು. ರಂಗಮಂಟಪಕ್ಕೆ dimensions ಎಂಬುದು ಬಹಳ ಮುಖ್ಯ. ಪ್ರಪಂಚದಲ್ಲಿಯೇಕೆ ಬೆಂಗಳೂರಿನಲ್ಲಿಯೇ ಅದ್ಭುತ ರಂಗ ವಾಸ್ತುಶಿಲ್ಪಿಗಳಿದ್ದಾರೆ. ಅವರಿಗೆ ರಂಗಭೂಮಿ

ಕುರಿತು ತಿಳಿಸಿಹೇಳುವ ಮತ್ತು ಕೇಳುವವರಂತಹ Professionalism ಉಳ್ಳವರು ಬರಬೇಕು. ಅದೂ ಒಂದು ಸವಾಲು ಅಲ್ವೆ? ಈ ಸವಾಲುಗಳನ್ನು ಬುದ್ಧಿಜೀವಿಗಳು ಮಾಡಿ ಬಿಡಿಸತಕ್ಕದ್ದಲ್ಲ.

ರಂಗಭೂಮಿಯ ಸಾಂದರ್ಭಿಕ ಆತಂಕಗಳನ್ನು ಕುರಿತಂತೆ : "ರಂಗಭೂಮಿಗೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳಿವೆ. ಇವುಗಳಿಗೆ ಕಲಾವಿದರಾದ ನಾವು ಹೋರಾಡಬೇಕು, ಕೂಡಲೇ ಪರಿಹಾರಗಳತ್ತ ಕಾರ್ಯೋನ್ಮುಖರಾಗಬೇಕು. ರಂಗಕಾರ್ಯವು ಅತ್ಯಂತ ಗಂಭೀರವಾದ ಕೆಲಸ. ರಂಗಕರ್ಮಿಗಳು ಆರ್ಥಿಕವಾಗಿ ಸಬಲರಾಗಿರಬೇಕು. ರಂಗಭೂಮಿಯ ಒಳಿತಿಗಾಗಿ ಬಂಡಾಯಗಾರರಾಗಬೇಕು. ಈ ಬಗ್ಗೆ ನನ್ನ ಸಹಕಾರ ಖಂಡಿತ ಇದೆ. ರಂಗಭೂಮಿಯ ಏಳ್ಗೆಗಾಗಿ ನಡೆಸುವ ಯಾವುದೇ ಪ್ರಯತ್ನಕ್ಕೂ ಸದಾ ಬೆಂಬಲವಿದೆ. ಸ್ವತಃ ನಾನೇ ಮುಂದೆ ಬಂದು ಎಲ್ಲರೊಡನೆ ಕಲೆತು ಕೆಲಸ ಮಾಡುತ್ತೇನೆ. ಈ ದಿಸೆಯಲ್ಲಿ ಕಾರ್ಯೋನ್ಮುಖರಾಗೋಣ."

**10. ಪ್ರಶ್ನೆ : ಭಾರತೀಯ ರಂಗಭೂಮಿಯ ಆರೋಗ್ಯಕರ ಬೆಳವಣಿಗೆಗೆ ತಮ್ಮ ಸಲಹೆ ಸೂಚನೆಗಳೇನು?**

**ಉತ್ತರ :** ರಂಗಮಾಧ್ಯಮವು ಒಂದು ಉದ್ಯಮವಾಗಿಯೂ ಬೆಳೆಯಬೇಕು, ತನ್ನ ಆಕರ್ಷಣೆಯ ಗುಣಾತ್ಮಕತೆಯಿಂದ ವಿದ್ಯುತ್ ಹಾಗೂ ವಿದ್ಯುನ್ಮಾನಗಳ ಮಾಧ್ಯಮಗಳನ್ನು ಮೀರಿಸುವಂತಿರಬೇಕು. ನಗರ ಪ್ರದೇಶಗಳಿಂದ ಹಳ್ಳಿಗಳತ್ತಲೂ ರಂಗಪಡೆಯ ನಡೆಯಾಗಿ ಪರಸ್ಪರ ಕೊಡುಕೊಳ್ಳುವಿಕೆಯ ಪ್ರಕ್ರಿಯೆಯು ಇರಬೇಕು. ಇದರಿಂದ ನಿರುದ್ಯೋಗ ಸಮಸ್ಯೆಯೂ ತಕ್ಕಮಟ್ಟಿಗೆ ನಿವಾರಣೆಯಾಗುತ್ತದೆ.

ರಂಗಪ್ರಯೋಗದಲ್ಲಿ ರಂಗಶಿಸ್ತು, ರಂಗವಸ್ತು, ರಂಗಶೈಲಿ, ರಂಗಸ್ಥಳ ಮತ್ತು ರಂಗಪ್ರಯೋಗ ಒಂದಕ್ಕೊಂದು ಹೊಸೆದು ಬೆಸೆದುಕೊಂಡಿರಬೇಕು. ರಂಗಶಿಸ್ತು ಎಂದರೆ ಇತರರಿಗೆ ತೊಂದರೆಯಾಗದಂತೆ ಕಾರ್ಯವನ್ನು ಜವಾಬ್ದಾರಿಯಿಂದ ಸೌಹಾರ್ದತೆಯಿಂದ ಸರಿದೂಗಿಸಿಕೊಂಡು ಮುಂದುವರೆಯುವುದು. ರಂಗಶಾಸ್ತ್ರರೀತ್ಯ ಅಭಿನಯದೊಂದಿಗೆಯೇ ರಂಗ ತಂತ್ರಾಂಶಗಳಾದ ಭಾಷೆ, ಸಂಗೀತ, ಧ್ವನಿ (ಶಾರೀರ), ಪ್ರಸಾಧನ, ವೇಷಭೂಷಣ, ವಸ್ತ್ರವಿನ್ಯಾಸ, ರಂಗಸಜ್ಜಿಕೆ, ರಂಗಪರಿಕರಗಳು ಮತ್ತು ನಿರ್ದೇಶನ ಒಂದಕ್ಕೊಂದು ಪೂರಕವಾಗಿರಬೇಕು. ಮತ್ತವುಗಳಲ್ಲಿ ಒಂದು ಪ್ರಯೋಗದಿಂದ ಇನ್ನೊಂದು ಮತ್ತೊಂದು ಮಗುದೊಂದು ಪ್ರದರ್ಶನಗಳಲ್ಲಿ ಸೃಜನಶೀಲತೆಯ ತೆನೆಗಳು ವೃದ್ಧಿಸಿ ತೊನೆದಾಡುತ್ತಿರಬೇಕು.

*23-1-2013ರಂದು ಬೆಂಗಳೂರು ಮಲ್ಲೇಶ್ವರಂ ಕೇಶವಕಲ್ಪ, ಬಡಾವಣೆ*

*ರಂಗಮಂದಿರದಲ್ಲಿ ನೆರವೇರಿದ ಮೂರುದಿನಗಳ ನೃತ್ಯಕಲಾ ಮಹೋತ್ಸವವನ್ನು ಉದ್ಘಾಟಿಸುತ್ತ ಹೀಗೆ ನುಡಿದರು* -

"ನಾಟಕಗಳು ನಿರಂತರವಾಗಿ ಎಲ್ಲೆಡೆ ಪ್ರದರ್ಶನಗೊಳ್ಳುವುದರ ಮೂಲಕ ಸದಾಕಾಲ ರಂಗಭೂಮಿ ಚೇತೋಹಾರಿಯಾಗಿರಬೇಕು. ವೇದಿಕೆಯ ಮೇಲೆ ಪಾತ್ರಗಳ ನೋವು ನಲಿವುಗಳು ಪ್ರೇಕ್ಷಕರ ಅನುಭವಕ್ಕೆ ಬರುವುದರಿಂದ ಕಲಾವಿದರು ಹೊರಹೊಮ್ಮಿಸುವ ಎಲ್ಲ ಅಭಿವ್ಯಕ್ತಿಗಳು ಜೀವಂತವಾಗಿ ಪ್ರೇಕ್ಷಕರನ್ನು ತಲುಪುತ್ತವೆ. ಆದ್ದರಿಂದ ಆರೋಗ್ಯಪೂರ್ಣ ಸಮಾಜದ ಅಸ್ತಿತ್ವಕ್ಕೆ ನಿರಂತರವಾಗಿ ಉತ್ತಮ ನಾಟಕಗಳು ಎಲ್ಲೆಡೆ ಪ್ರದರ್ಶನಗೊಳ್ಳಬೇಕು, ಇದಕ್ಕೆ ಪೂರಕವಾಗಿ ಪ್ರೇಕ್ಷಕರು ಸ್ಪಂದಿಸುವರು. ಇದು ಒಡಾವಣೆ ರಂಗಮಂದಿರಗಳಿಂದ ಸಾಧ್ಯವಾಗುವ ಪ್ರಕ್ರಿಯೆ."

"No actor or backstage worker must be absent himself or herself and / or come late for a rehearsal or a performance under any circumstances except in case of death. The show must go on."

**11. ಪ್ರಶ್ನೆ : ರಂಗನಟರಿಗೆ ತಮ್ಮ ವಿಶೇಷ ಸೂಚನೆಗಳೇನು?**

ಉತ್ತರ : (i) ನಟರಿಗೆ ಸೂಕ್ತ ಧ್ವನಿ ತರಬೇತಿ (Voice Training) ನೀಡಬೇಕು. ವಿದೇಶಗಳಲ್ಲಿ ಸುಮಾರು ಎರಡು ಮೂರು ಸಾವಿರ ಪ್ರೇಕ್ಷಕರಿದ್ದರು ಕೂಡ ಕಲಾವಿದರಿಗೆ ಕಿಂಚಿತ್ತೂ ಕಿರುಚಾಡದೆ ಅಷ್ಟೂ ಜನರಿಗೂ ಸ್ಪಷ್ಟವಾಗಿ ಕೇಳುವ ರೀತಿಯಲ್ಲಿ ಧ್ವನಿ ತರಬೇತಿಯಾಗಿರುತ್ತದೆ. ಅಲ್ಲಿ ರಂಗ ತಂತ್ರಜ್ಞಾನದ ವ್ಯವಸ್ಥೆಯಿದೆ. ಯುರೋಪ್ ದೇಶಗಳಲ್ಲಿ ಮತ್ತು ಅಮೆರಿಕದಲ್ಲಿ ಒಂದು ಪಕ್ಷ ನಟರಿಗೆ ಯಾವುದೇ ರೀತಿಯ ತೊಂದರೆಯಾದರೆ ಗಂಟಲಿನ ಟ್ರೀಟ್‌ಮೆಂಟ್‌ಗೋಸ್ಕರವೇ Throat Specialists On call / Doctors on callಗೆ ಸಿಗುವಂತೆ ಇರುತ್ತಾರೆ. ಅಷ್ಟರಮಟ್ಟಿಗೆ ವೈದ್ಯಕೀಯ ಚಿಕಿತ್ಸೆಯಿರುತ್ತದೆ. ರಂಗಭೂಮಿಯಲ್ಲಿ ಬೆಳೆಯಬೇಕೆಂಬ ಆಸ್ಥೆ ಅಭಿಲಾಷೆ ಇಂಡಿಯಾದಲ್ಲಿಲ್ಲ. ಮುಖ್ಯವಾಗಿ Acoustic Treatment ಮತ್ತು Sound Reinforcement ಪೂರಕವಾಗಿರಬೇಕು. Actors ಆದವರು ತಮ್ಮ Acting ಅನ್ನು microphone ಇಲ್ಲದೆಯೇ ಧ್ವನಿಯನ್ನು ಬಳಸಿಕೊಳ್ಳುವಂತಿರಬೇಕು. ಒಮ್ಮೆ ಬೆಂಗಳೂರಿನಲ್ಲಿ ರಷ್ಯನ್ ಬ್ಯಾಲೆಯ ಕಂಪನಿ ಪ್ರದರ್ಶನಗಳು ಎಲ್ಲಾ Venueಗಳಲ್ಲಿ ನಡೆದಾಗ ನನ್ನನ್ನು ಹಾಗೂ ಮೀನಾ ಜೇಕಬ್ ಅವರನ್ನು ಕೂಡಿ ಒಬ್ಬ ಡಾಕ್ಟರನ್ನು ವ್ಯವಸ್ಥೆ ಮಾಡಿದ್ದರು. ಎಲ್ಲರೂ ಇದು ಏಕೆ ಎಂದು ಹಾಸ್ಯ ಮಾಡುತ್ತಿದ್ದರು; ಮಿತ್ರರೂ ಪರಿಹಾಸ್ಯ ಮಾಡಿದ್ದರು. ಈ ಫೆಸ್ಟಿವಲ್‌ನಲ್ಲಿ Fast Dance, Group Dance ಹಾಗೂ Choreographic Dance ಮಾಡುವವರೆಲ್ಲರೂ ಇದ್ದರು. ಒಬ್ಬನಿಗೆ ಒಂದು Wing

ಹತ್ತಿರ ಹೋದಾಗ ತಲೆ ತಿರುಗಿದಂತಾಯಿತು. ಆಗ ಅವರಿಗೆ ತುರ್ತು ವೈದ್ಯಕೀಯ ಸೌಲಭ್ಯ ಬೇಕಾಯಿತು. ಇನ್ನೊಮ್ಮೆ ರವೀಂದ್ರ ಕಲಾಕ್ಷೇತ್ರದಲ್ಲಿ ನಾಟಕವೊಂದರ ನೃತ್ಯಕ್ಕಾಗಿ ಸಂಗೀತ ಸಂಯೋಜನೆಗಾಗಿ ಸಂಗೀತವೃಂದದಲ್ಲಿದ್ದ ಕಲಾವಿದೆಗೆ ಹೃದಯಾಘಾತವಾಯಿತು. ಅವರನ್ನು ಎತ್ತಿಕೊಂಡು ಆಸ್ಪತ್ರೆಗೆ ಕರೆದುಕೊಂಡು ಹೋದರು. ಆದರೆ ಅಷ್ಟರಲ್ಲಿ ಅವರು ಸಾವನ್ನಪ್ಪಿದ್ದರು. ಮತ್ತೊಮ್ಮೆ "ಓರ್ವ ಹೆಸರಾಂತ ಗಾಯಕ ನಟರು ನಾಟಕವೊಂದರಲ್ಲಿ Main role ಮಾಡುತ್ತಿದ್ದರು. ಪ್ರದರ್ಶನವು 7-30ಕ್ಕೆ ಶುರುವಾಗಬೇಕಿದ್ದು, 6-00 ಗಂಟೆಗೆ ಅವರಿಗೆ ಗಂಟಲು ನೋವಿನ ಪ್ರಾಬ್ಲೆಮ್ ಆಯ್ತು. ಡಾಕ್ಟರ್ ಬಂದ್ರು, ಟ್ರೀಟ್‌ಮೆಂಟ್ ಕೊಟ್ರು, ರಿಪೇರಿ ಮಾಡಿದ್ರು. ನೀವು ನಂಬ್ತೀರೋ ಬಿಡ್ತೀರೋ Show ನಡೆಯಿತು. ಅಂತಹ ಆತಂಕಗಳು ಬಂದಾಗ ಮತ್ತು ಎದುರಿಸಿದಾಗ ನಮ್ಮ ರಂಗಭೂಮಿ ಮತ್ತು ನಾವೆಲ್ಲ ಉದ್ಧಾರ ಆದ ಹಾಗೆ.

ಒಟ್ಟಿನಲ್ಲಿ ರಂಗಕಾಯಕದಲ್ಲಿ ವೃತ್ತಿಪರತೆ (Professionalism) ಇರಬೇಕು. ಆಗ ಆರ್ಥಿಕವಾಗಿಯೂ ಉದ್ಧಾರವಾಗಿ ರಂಗಭೂಮಿಯಿಂದ ಬದುಕಬಹುದು. ರಂಗಪ್ರದರ್ಶನದ ಸಂದರ್ಭದಲ್ಲಿ ಮುಂಜಾಗರೂಕತೆ ಕ್ರಮವಾಗಿ ಪ್ರಥಮ ಚಿಕಿತ್ಸೆ (First Aid) ಕೇಂದ್ರದ ವ್ಯವಸ್ಥೆಯ ಅವಶ್ಯಕತೆಯಿದೆ; ಮುಂಜಾಗ್ರತಾ ವೈದ್ಯಕೀಯ ಅನುಕೂಲತೆಗಳ ಬಗೆಗೆ ಕಾಳಜಿಯಿರಲಿ. ಈ ವ್ಯವಸ್ಥೆಯು ಅಗತ್ಯವಿದ್ದಾಗ ಪ್ರೇಕ್ಷಕಗಣಕ್ಕೂ ಲಭ್ಯವಾಗುವಂತಿರಬೇಕು. Sports Medicine ತರಹ Theatre Medicine ಕೂಡ ಇರಬೇಕು. ಕಲಾವಿದರು ನಿತ್ಯ ಪ್ರಯೋಗಶೀಲ ಮನೋಭಾವದಿಂದ ಪ್ರಯೋಗಶಾಲೆಯಾದ ರಂಗಭೂಮಿಯ ಎಲ್ಲಾ ವಿಭಾಗಗಳಲ್ಲಿಯೂ ತಿಳುವಳಿಕೆ ಮತ್ತು ಸಂಪೂರ್ಣ ಅನುಭವವನ್ನು ಹೊಂದಿರಬೇಕು.

(ii) ಒಂದು ಪ್ರದರ್ಶನ ನಡೆಯುತ್ತಿದ್ದಾಗ Still ಅಥವಾ Video (Photography) ಮಾಡುವುದು ತಪ್ಪು. ಪ್ರಚಾರಕ್ಕಾಗಿ ಪ್ರದರ್ಶನದ ಮುಂಚೆಯೇ ಸನ್ನಿವೇಶಗಳಿಗೆ ತಕ್ಕ ಹಾಗೆ ಬೆಳಕು, ರಂಗವಿನ್ಯಾಸ ಇತ್ಯಾದಿಗಳನ್ನು ಮಾಡಿ ಫೋಟೋ ಮತ್ತು ವಿಡಿಯೋ ತೆಗೆಯಬೇಕು.

(iii) ಅನೇಕ ವೇಳೆ ಕಂಪನಿ ನಾಟಕ ಪ್ರದರ್ಶನಗಳನ್ನು ಅನುಕರಣೆ ಮಾಡುತ್ತೇವೆ. ಆದರೆ ಅದರ ಪ್ರಭಾವದಿಂದ ಪ್ರದರ್ಶನ ಮಾಡಬಹುದು.

**12. ಪ್ರಶ್ನೆ : ನಾಟಕ ಅಕಾಡೆಮಿ ಕುರಿತಂತೆ ತಮ್ಮ ನಿಲುವು ಏನು?**

(ಅಕಾಡೆಮಿಯ ರೂಪರೇಷೆ ಮತ್ತು ಸ್ವರೂಪ ಕುರಿತು ತುಮಕೂರಿನ ಸರ್ಕಾರಿ

ನೌಕರರ ಸಭಾಂಗಣದಲ್ಲಿ 'ತುಮಕೂರು ನಾಟಕಮನೆ (ರಿ)' ನಡೆಸಿದ ಸಂವಾದ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಹಿರಿಯ ರಂಗಚೇತನ ವಿ. ರಾಮಮೂರ್ತಿಯವರು ವ್ಯಕ್ತಪಡಿಸಿದ ಅಭಿಪ್ರಾಯ ಸಾರ್ವತ್ರಿಕ ಸರ್ವಾಂಗ ಸಮುಚಿತ ಸದಭಿಪ್ರಾಯವಾಗಿದೆಯೆನ್ನಬಹುದು)

ಉತ್ತರ : "ಅಕಾಡೆಮಿಯ ಸದಸ್ಯರಾಗುವವರು ಶಿಸ್ತು, ಶ್ರದ್ಧೆ, ಸಂಯಮ, ಸಭ್ಯತೆಯನ್ನುಳ್ಳವರಾಗಿದ್ದು ತಮ್ಮ ಕ್ಷೇತ್ರದ ಬಗ್ಗೆ ಅರಿತವರಾಗಿರಬೇಕು, ಅಧ್ಯಯನಶೀಲರಾಗಿರಬೇಕು. ಪ್ರಾಮಾಣಿಕ, ದಕ್ಷ ಹಾಗೂ ಶ್ರಮಜೀವಿ ರಂಗಕರ್ಮಿಗಳಿಗೆ ಅನ್ಯಾಯವೆಸಗದಂತೆ ಗಮನಿಸಬೇಕು. ಗ್ರಾಮಾಂತರ ಪ್ರದೇಶಗಳ ರಂಗಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವನ್ನು ಅಕಾಡೆಮಿ ಮಾಡಬೇಕು. ನಗರ ಪ್ರದೇಶಗಳಲ್ಲಿ ಮಾತ್ರ ನಾಟಕವಾಡಿದರೆ ಸಾಲದು. ಗ್ರಾಮಗಳಲ್ಲಿನ ಕಲಾವಿದರು ಅಲ್ಲಿನ ವಾಸ್ತವ ಪರಿಸ್ಥಿತಿ ಪರಿಸರವನ್ನು ಅಭ್ಯಸಿಸಿ ಅಗತ್ಯಪೂರ್ಣವಾದ ವಾತಾವರಣಕ್ಕೆ ತಕ್ಕಂತೆ ನಾಟಕಗಳನ್ನು ಆಡಿದರೆ ರಂಗಭೂಮಿ ಬೆಳೆಯುತ್ತದೆ, ಅನುಕೂಲಕರ ವಾತಾವರಣ ನಿರ್ಮಾಣವಾಗುತ್ತದೆ.

ಅಕಾಡೆಮಿಯಿಂದ ಅಥವಾ ಸರ್ಕಾರದಿಂದ ಯಾವುದೇ ಸೌಲಭ್ಯ ದೊರೆಯದಿದ್ದಾಗ ಅದನ್ನು ನಿಂದಿಸುವ ಪ್ರವೃತ್ತಿಯನ್ನು ಬಿಡಬೇಕು. ಅಕಾಡೆಮಿಗಳಿಗೆ ಅಧ್ಯಕ್ಷರು, ಸದಸ್ಯರನ್ನು ನೇಮಿಸಲು ಆಯಾ ಕ್ಷೇತ್ರದಲ್ಲಿ ಪರಿಣತರಾದ ತಜ್ಞರುಗಳ ಸಮಿತಿಯನ್ನು ನೇಮಕ ಮಾಡಬೇಕು."*

"ರಂಗಭೂಮಿಯ ಸರ್ವತೋಮುಖ ಬೆಳವಣಿಗೆಗಾಗಿ ವಿಕಾಸ ಪ್ರಾಧಿಕಾರ ಸ್ಥಾಪನೆಯಾಗಬೇಕು."

* * *

ವಿ. ರಾಮಮೂರ್ತಿಯವರು ತಳೆದ ರಂಗ ನಿಲುವುಗಳು ಸದಾ ಇತ್ಯಾತ್ಮಕ, ರಚನಾತ್ಮಕ, ಗುಣಾತ್ಮಕ ವಿಶೇಷ ಲಕ್ಷಣಗಳಿಂದ ಕೂಡಿರುವಂತಹವು. ಅವರು ತಮ್ಮ ಕಾರ್ಯವಿಧಾನಗಳಲ್ಲಿ Positive thinking, Positive nature, Positive attittude, positive approach, positive discussion, positive decision ಹಾಗೂ positive result ಮುಂತಾದ ಸಕಾರಾತ್ಮಕ ಅಂಶಗಳನ್ನು ಮೈಗೂಡಿಸಿಕೊಂಡು ಅಳವಡಿಸಿಕೊಂಡವರು. ಪ್ರತಿಯೋರ್ವ ರಂಗಕರ್ಮಿಯು ತನ್ನನ್ನು ತಾನು Theatre Practioner ಆಗಿ ಗುರುತಿಸಿಕೊಳ್ಳಬೇಕೆನ್ನುವವರು. ಅವರಿಗೆ ಭಾರತ - ಕರ್ನಾಟಕ ರಂಗಕಾಯಕವೆಂಬುದು ದೇವರ ಪೂಜೆ, ಕಲಾರಾಧನೆ, ಅಧ್ಯಾತ್ಮ ಸಾಧನ, ಬತ್ತದ ಸೆಲೆ. ಅವುಗಳು ಅವರ ಎಂದೂ ನಿವೃತ್ತಿಯೆಂಬುದಿಲ್ಲದ ವೃತ್ತಿ, ಪ್ರವೃತ್ತಿ, ನಿಷ್ಪತ್ತಿಯ

ಸಾಧನಗಳು. ಅವರ ಸರಳತೆ, ಸದುವಿನಯತೆ ಮತ್ತು ಸುದೀರ್ಘ ರಂಗಾನುಭವದ ಹಿನ್ನೆಲೆಯಲ್ಲಿ ಮೈತಳೆದ ಮೂಸೆಯಿಂದ ಹೊರಹೊಮ್ಮುವ ನಿರರ್ಗಳ ವಾಕ್ಪಟುತ್ವ ನಿಜಕ್ಕೂ ಅಚ್ಚರಿಮೂಡಿಸುವಂತಹದು. ಅಲ್ಲದೆ ಈ ವಿಶೇಷ ಗುಣಗಳಿಂದಾಗಿ ಒಮ್ಮೆ ಅವರ ಸನಿಹ ಸಂಪರ್ಕಕ್ಕೆ ಬಂದವರೆಂದಿಗೂ ಅವರನ್ನು ಮರೆಯಲಾರರು.

ಅವರ ನಿರಂತರ ಹಾಸ್ಯ ಪ್ರವೃತ್ತಿ ಸ್ವಭಾವದ ದ್ಯೋತಕವಾಗಿ ಕೆಲವು ಸಿಹಿಹನಿಗಳನ್ನು ಸವಿಯಬಹುದು. ಅವರು ಮಾತುಮಾತಿನ ನಡುವೆ ಸಿಂಪಡಿಸುವ ನಗೆಚಟಾಕಿಗಳು ಕೇಳುಗರಲ್ಲಿ ಮದವಿಳಿಸಿ ಮುದಗೊಳಿಸುತ್ತವೆ. ತಾನೂ ನಕ್ಕು ಇತರರನ್ನೂ ಅಹ್ಲಾದಕರ ವಾತಾವರಣದ ನಗೆಗಡಲಿನಲ್ಲಿ ಮೀಯುವಂತೆ ಮಾಡುವ ಅವರ ಸುಮನೋಭಾವ ಮೆಚ್ಚುವಂತಹದು. ಅದರ ಒಂದೆರಡು ತುಣುಕುಗಳನ್ನು ಮೆಲುಕುಹಾಕಬಹುದು -

i. ವಯೋಮಾನಕ್ಕನುಗುಣವಾಗಿಯೆಂಬಂತೆ ಅವರ ಎರಡೂ ಕಿವಿಗಳು ತುಸು ಮಂದವಾಗಿರಲು ತಮಗೆ ತಾವೇ 'ಕ ಕಾ ಕಿ ಕೇ' (ಕಣ್ಣು ಕಾಣಲ್ಲ ಕಿವಿ ಕೇಳ್ಸೊಲ್ಲ) ಎಂದು ನಗೆಯಾಡುತ್ತಿರುತ್ತಾರೆ.

ii. 'ನೀವು ಆಜನ್ಮ ಬ್ರಹ್ಮಚಾರಿಯೇ?' ಎಂದು ಪ್ರಶ್ನಿಸಿದರೆ ಹೀಗೆ ಉತ್ತರಿಸುತ್ತಾರೆ -

'ಹೌದು ! ಆ ಜನ್ಮದಲ್ಲಿಯೂ ಬ್ರಹ್ಮಚಾರಿ
ಈ ಜನ್ಮದಲ್ಲಿಯೂ ಬ್ರಹ್ಮಚಾರಿ
ಬಹುಶಃ ಮುಂದಿನ ಜನ್ಮದಲ್ಲಿಯೂ ಬ್ರಹ್ಮಚಾರಿಯೇ!!'

## ಪ್ರಶಸ್ತಿ – ಪುರಸ್ಕಾರ – ಸನ್ಮಾನಗಳು

ರಂಗದಾರ್ಶನಿಕ ಶ್ರೀ ವಿ. ರಾಮಮೂರ್ತಿಯವರಿಗೆ ಸದಾ ರಂಗಭೂಮಿಯ ಕುರಿತ ಚಿಂತನೆಯ ಹೊರತಾಗಿ ಮತ್ತಾವುದರ ಬಗೆಗೆ ಅಷ್ಟೇನು ಚಿಂತೆ - ಚಿಂತನೆಗಳಿಲ್ಲವೆನ್ನಬಹುದು. ಶ್ರೀ ರಾಮಮೂರ್ತಿಯವರಿಗೆ ಹತ್ತಾರು ಪ್ರತಿಷ್ಠಿತ ರಾಜ್ಯ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಗೌರವ - ಮನ್ನಣೆಗಳು ಪ್ರಾಪ್ತವಾಗಿವೆ. ಅವರ ಅವಿರತ ಅನುಪಮ ಕೊಡುಗೆಗಳು ಶ್ರಮ ರಂಗಜೀವಿಯ ಜೀವನದ ಮುಖ್ಯ ಅಧ್ಯಾಯಗಳೆಂಬ ಪ್ರತೀಕವಾಗಿ ಭಾರತೀಯ ರಂಗಭೂಮಿಯ ದಿಕ್ಸೂಚಿಗಳೂ ಆಗಿರುವುದು ಗಮನಾರ್ಹ.

**1972 :** ನವದೆಹಲಿಯಲ್ಲಿ ನೆರವೇರಿದ ಏಷ್ಯಾ-72 ಏಷ್ಯನ್ ಟ್ರೇಡ್‌ಫೇರ್‌ನ 'ಏಕ್ ಯಾತ್ರಾ' ಫೆವಿಲಿಯನ್ ಬೆಳಕು ಸಂಯೋಜನೆಗಾಗಿ 'ಫಿಲಿಪ್ಸ್ ಕಮೆಂಡೇಷನ್ ಅವಾರ್ಡ್.' ಪ್ರಶಸ್ತಿ ಪ್ರದಾನ ಮಾಡಿದವರು ಹಾಲೆಂಡ್‌ನ ಫಿಲಿಫ್ಸ್ ಲೈಟಿಂಗ್

ಕಂಪನಿಯ Jan Janson ಅವರು.

**1978 :** 1977ನೇ ಸಾಲಿನ ರಂಗಭೂಮಿ ಬೆಳಕು ವಿನ್ಯಾಸಕ್ಕಾಗಿ ಮೊದಲ ಬಾರಿಗೆ ನೀಡುವ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ನವದೆಹಲಿ. ಪ್ರಶಸ್ತಿ ಪ್ರದಾನ ಮಾಡಿದವರು ಭಾರತದ ರಾಷ್ಟ್ರಪತಿ ಡಾ. ನೀಲಂ ಸಂಜೀವರೆಡ್ಡಿಯವರು.

ಈ ನಿಮಿತ್ತ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನ ಬಯಲು ರಂಗಮಂದಿರದಲ್ಲಿ ಆದ್ಯ ರಂಗಾಚಾರ್ಯರ ಅಧ್ಯಕ್ಷತೆಯಲ್ಲಿ ಪ್ರೇಮ ತುಂಬಿದ ವಾತಾವರಣದಲ್ಲಿ ಭರ್ಜರಿ ಸಮಾರಂಭವೇರ್ಪಟ್ಟಿತ್ತು. ಯುವಜನ ಕ್ರೀಡಾ, ವಾರ್ತಾ ಮತ್ತು ಪ್ರಚಾರ ಇಲಾಖೆಯ ಮಂತ್ರಿಯಾಗಿದ್ದ ಕೆ.ಹೆಚ್. ಶ್ರೀನಿವಾಸ್ ಅವರು ಶ್ರೀ ರಾಮಮೂರ್ತಿಯವರನ್ನು ಗೌರವಿಸಿದರು. ಬಿ.ವಿ. ವೈಕುಂಠರಾಜು ಅವರು ಪ್ರಾಸ್ತಾವಿಕವಾಗಿ ಪರಿಚಯಿಸಿದರು. ಅಂದು ಮೈಸೂರಿನ ಕಾರ್ಯಾಗಾರದಲ್ಲಿ ಶ್ರೀ ಆರ್. ನಾಗೇಶ್ ನಿರ್ದೇಶನದಲ್ಲಿ ತಯಾರಾದ 'ರಂಗಭಾರತ'ವು ರಾಮಮೂರ್ತಿಯವರ ಗೌರವಾರ್ಥವಾಗಿ ಬೆಂಗಳೂರಿನಲ್ಲಿ ಪ್ರದರ್ಶನಕಂಡಿತು.

ಕೇಂದ್ರ ಸಂಗೀತ ನಾಟಕ ಅಕಾಡೆಮಿಯು Stage Technique Catagory ಕುರಿತಂತೆ Back stage workersಗೆ ಪ್ರಶಸ್ತಿಯನ್ನು ನೀಡಲು ನಿರ್ಧರಿಸಿತು. ಇಂಡಿಯಾದ ಮೊದಲನೆಯ ಪ್ರಶಸ್ತಿ ಪುರಸ್ಕೃತರು ಶ್ರೀ ರಾಮಮೂರ್ತಿಯವರ ಹಿರಿಯ ಮಿತ್ರರೂ ಆದ ಕಲ್ಕತ್ತಾದ ದಿವಂಗತ ತಪಸ್‌ಸೇನ್ ಅವರು. ಎರಡನೆಯವರು ಅರ್ಥಾತ್ ಲೈಟಿಂಗ್ ಡಿಸೈನ್ Catagoryಯಲ್ಲಿ ಪ್ರಶಸ್ತಿಯನ್ನು ಕೊಡಮಾಡಿದಾಗ ವಿ. ರಾಮಮೂರ್ತಿಯವರಿಗೆ ಲಭಿಸಿತು. ಅಂದರೆ Stage Lighting Designನಲ್ಲಿನ ಮೊಟ್ಟಮೊದಲ ಪ್ರಶಸ್ತಿ ವಿಜೇತ ಭಾರತೀಯ ಶ್ರೀ ರಾಮಮೂರ್ತಿಯವರು. ಪ್ರಶಸ್ತಿ ಪ್ರದಾನ ಮಾಡಿದವರು ನವದೆಹಲಿಯ ಎನ್.ಎಸ್.ಡಿ. ನಿರ್ದೇಶಕ ಪ್ರೊ. ಮೋಹನ್ ಮಹರ್ಷಿಯವರು. ಅಂದಿನ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾಗಿದ್ದವರು ಡಾ. ಚಂದ್ರಶೇಖರ ಕಂಬಾರ ಅವರು.

**1985 :** ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ. ಅಂದಿನ ಸಮಾರಂಭದ ಅಧ್ಯಕ್ಷರು ಡಾ. ಜೀವರಾಜ ಆಳ್ವ ಅವರು.

**1997 :** ನವದೆಹಲಿಯಲ್ಲಿ ಚಮನ್‌ಲಾಲ್ ಮೆಮೋರಿಯಲ್ ಸೊಸೈಟಿಯು ತನ್ನ

ಸಂಸ್ಥಾಪಕನ ಜ್ಞಾಪಕಾರ್ಥವಾಗಿ ಪ್ರತಿಷ್ಠಾಪಿಸಿದ ಬೆಳಕು ವಿನ್ಯಾಸಕ್ಕಾಗಿನ 3ನೇ ವಾರ್ಷಿಕ ಅವಧಿಯ ಚಿಮನ್‌ಲಾಲ್ ವಾದ್ವಾ ಮೆಮೋರಿಯಲ್ ಅವಾರ್ಡ್ ಪ್ರದಾನ ಮಾಡಿದವರು ಸುಪ್ರಸಿದ್ಧ ಸಾರೋದ್ ವಾದಕ ಶ್ರೀ ಅಮ್ಜದ್ ಅಲಿಖಾನ್ ಮತ್ತು ಶ್ರೀಮತಿ ಶುಭ ಲಕ್ಷ್ಮೀಖಾನ್ ಅವರು.

**2000 :** ಲಕ್ನೋದ ಭಾರತೇಂದು ನಾಟ್ಯ ಅಕಾಡೆಮಿಯು ತನ್ನ ಬೆಳ್ಳಿ ಹಬ್ಬ ಮಹೋತ್ಸವದ ಆಚರಣೆಯ ಸಂದರ್ಭದಲ್ಲಿ ನೀಡುವ 'ಭಾರತೀಯ ನಾಟ್ಯ ಅಕಾಡೆಮಿಯ ಪ್ರಶಸ್ತಿ'. ಪ್ರಶಸ್ತಿ ಪ್ರದಾನ ಮಾಡಿದವರು ಸುಪ್ರಸಿದ್ಧ ಹಿಂದಿ ರಂಗಭೂಮಿ ಮತ್ತು ಚಲನಚಿತ್ರ ನಟರಾದ ಅನುಪಮ್ ಖೇರ್ ಅವರು.

**2004 :** ತುಮಕೂರಿನ 'ನಾಟಕಮನೆ'ಯಿಂದ ತನ್ನ ಮೂರನೆಯ ಸ್ಥಾಪನಾವರ್ಷದ ನೆನಪಿನಾರ್ಥವಾಗಿ ರಂಗಪುರಸ್ಕಾರ.

**2005 :** ಜೀವಮಾನ ರಂಗಕಲೆಗಳ ಕೊಡುಗೆಗಾಗಿ ನವದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದಿಂದ ಪ್ರಶಸ್ತಿ ಪ್ರದಾನ ಮಾಡಿದವರು ಸುಪ್ರಸಿದ್ಧ ನಿರ್ದೇಶಕ ಶ್ರೀ ರಾಜೇಂದ್ರನಾಥ್ ಅವರು.

**2-1-2006 :** ಎನ್.ಎಸ್.ಡಿ., ನವದೆಹಲಿಯ ಶ್ರೀ ಬಿ.ವಿ. ಕಾರಂತ ಸ್ಮೃತಿ ಪ್ರಶಸ್ತಿ ಪುರಸ್ಕಾರ.

**1-11-2008 :** ಕನ್ನಡ ರಾಜ್ಯೋತ್ಸವದ ಅಂಗವಾಗಿ ಪ್ರತಿಷ್ಠಿತ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ'ಯನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಪ್ರದಾನ ಮಾಡಿದರು.

**2-5-2012 :** ವಿಶ್ವಕವಿ ಶ್ರೀ ರವೀಂದ್ರನಾಥ ಟ್ಯಾಗೋರ್‌ರವರ 150ನೇ ಜನ್ಮದಿನದ ಅಂಗವಾಗಿ ತಮಿಳುನಾಡು ರಾಜ್ಯಪಾಲ ಡಾ. ಕೆ. ರೋಸಯ್ಯನವರಿಂದ ಚೆನ್ನೈನಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿಯಿಂದ 2007ನೇ ಸಾಲಿನ 'ಟ್ಯಾಗೋರ್ ರತ್ನ ಸದಸ್ಯತ್ವ' (ಫೆಲೋಷಿಪ್) ಪ್ರಶಸ್ತಿ ಪ್ರದಾನ.

**2014 :** ಬೆಂಗಳೂರಿನ ನಾಗರಭಾವಿ ಬಡಾವಣೆಯ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪ್ರದಾನ ಮಾಡಿದವರು ವಿಧಾನಸಭಾ ಸದಸ್ಯ ವಿ. ಸೋಮಣ್ಣನವರು.

**25-9-2014 :** ಮೈಸೂರು ರಂಗಾಯಣದಿಂದ ಸನ್ಮಾನ.

**12-08-2015 :** 2014ನೇ ಸಾಲಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರದ ಪ್ರಪ್ರಥಮ ಪ್ರತಿಷ್ಠಿತ ಬಿ.ವಿ. ಕಾರಂತ ಪ್ರಶಸ್ತಿ ಪ್ರದಾನ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಂದ ಮೈಸೂರಿನ ರಂಗಾಯಣದಲ್ಲಿ.

ಶ್ರೀ ರಾಮಮೂರ್ತಿಯವರು ಹತ್ತಾರು ಪ್ರತಿಷ್ಠಿತ ಸಾಂಸ್ಕೃತಿಕ ಹಾಗೂ ಸಾರ್ವಜನಿಕ ಸಂಘ ಸಂಸ್ಥೆಗಳು ಮತ್ತು ಸಂಘಟನೆಗಳಿಂದ ಸನ್ಮಾನಿತರಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 'ಮನೆಯಂಗಳದಿ', ಮೈಸೂರು ವಿಶ್ವವಿದ್ಯಾನಿಲಯದ ಲಲಿತಕಲಾ ಕಾಲೇಜು (ಮೈಸೂರು), ಭಾರತ ಯಾತ್ರಾ ಕೇಂದ್ರ, ಎಸ್.ಬಿ.ಎಂ. ಕನ್ನಡ ಸಂಘ, ಬಿ.ಎಲ್.ಟಿ., ಮೈಸೂರು ರಂಗಾಯಣ, ವಿ.ಸೀ. ಸಂಪದ, ಕಲಾಗಂಗೋತ್ರಿ, ದಾಕ್ಷಾಯಣಿ ಭಟ್ ಅವರ 'ದೃಶ್ಯ' ತಂಡ, ಎಸ್. ಮಂಗಳಾರವರ 'ಸಂಚಾರಿ' ತಂಡ, 'ಅಂಬಾರಿ' ತಂಡ, ರಂಗ ಸಮಾಜ (ರಿ.) ಸಾಂಸ್ಕೃತಿಕ ಸಂಸ್ಥೆ ಮುಂತಾದವುಗಳಿಂದ ಗೌರವಿಸಲ್ಪಟ್ಟಿದ್ದಾರೆ.

## ರಂಗಪ್ರಭೃತಿಗಳು ಕಂಡಂತೆ

28 ಏಪ್ರಿಲ್ 1978ರಂದು ಶ್ರೀ ರಾಮಮೂರ್ತಿಯವರಿಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಯು ಸಂದಂದು ಬೆಂಗಳೂರಿನಲ್ಲಿ ನೆರವೇರಿದ ಅತಿಶಯ ಸನ್ಮಾನ ಸಮಾರಂಭದ ಸಂದರ್ಭದಲ್ಲಿ ಉಧೃತವಾದ ಹಿರಿಯ ರಂಗತಜ್ಞರ ಅಭಿಪ್ರಾಯಗಳು ಇಂತಿವೆ -

By winning the sangeet Nataka Academy award Sri V. Ramamurthy has for the first time stepped before lights; otherwise, all the time in the dark, he loves to illuminate for others joy.

This apparent contradiction is an essential feature of his personality. For hours together he would go talking cheerfully on any subject and with any person but once before his 'controls' he is grim and silent.

With kliegel Bros in the USA and in europe he has worked with highly sophisticated equipments but in a district town theatre in India he cheerfully achieves similar results with any available material.

He improvises, he experiments and is bent on learning still more and more. To him lighting is almost one of the characters of the play.

Not even the highest award can adeuately recognise the kind of humility and dedication that Shri Ramamurthy exhibits.

**- Adya Rangacharya**

### TOTAL DEDICATION

"To save the theatre we must destroy it", said Gorden craig. Ramamurthy is one of those very few in this country who are

trying to save the theatre without destroying it. He is expending his life energy to raise new structures on old foundations. This award received by him recently from the Sangeeth Nataka Academy is in recognition of this good work he is doing.

I know Ramamurthy from 1962 when he was a student of the National School of Drama in Delhi. Some of his virtues are - he fears nobody, he hates to criticize people and if he is compelled to do it, he will do it without offending them.

After successful completion of his studies in this country he went to the states and associated with reputed illumination engineers and top stage designer like Mordecai Gorelik. With a keen eye and an analytical mind, he not only saw many things but absorbed them well. Today he knows good deal more about theatre than most who boast about their fragmentary knowledge of it.

Ramamurthy's involvement with theatre is total. That is why he can talk excitingly, provocatively and interestingly for hours on any branch of the theatre. Listening to him is a pleasure."

**- P.S. Rama Rao**

Deputy Director of Song & Drama Division
Govt. of India, Bangalore

"It is really fantastic to work with V. Ramamurthy. A decade back I worked with him in 'Topiyatavayya'. But I was a beginner then, now I understand a lot about the director, his working pattern, his concept of perfection, etc.,"

**-Vasundara Kulkarni**

(As Saraswathi in 'Siri Purandara' Play)

V. Ramamurthy is a lighting designer / technician of national and international acclaim. This highly experenced person has often been invited to speak in many prestigious auditoriums and universites in the country. His lighting effects for the milestone theatre production 'Oedipus' (Translated by P. Lankesh and directed by B.V. Karanth) played by Girish Karnad in the seventies is remembered even today. His litting tunes for 'Udbhva', 'Gullenari' and 'Kabeer' are hits. 'Mooki Talki', a mime performance directed by V. Ramamurthy crossed the 1500 - show mark. The play 'Siripurandara' directed by him for 'Prayogaranga' has been well

received by the audience. He has also composed music for the production and has given good song like 'Manujashareeravidhenu Suka'.

**- Narayana Raichur**
Theatre Critic
('A True Tribute to Sri Ranga', Deccan Herald, May 20, 2004)

"ಅರೆವೃತ್ತಿ ಅಥವಾ ಅರೆಹವ್ಯಾಸಿ ಎಂಬ ಪದಗಳ ಬಳಕೆ, ವ್ಯಾಖ್ಯೆ ಎಂದಿಗೂ ಸಲ್ಲದೆಂಬುದು ಶ್ರೀ ರಾಮಮೂರ್ತಿಯವರ ಖಚಿತ ನಿಲುವು. ಇಂತಾಗಿ ಅವರಂಥ ರಂಗತಜ್ಞನನ್ನು ವೃತ್ತಿ - ಹವ್ಯಾಸಿಯೆಂದು ವಿಂಗಡಿಸಲಾದೀತೇ?"

- ಜಿ.ವಿ. ಅಯ್ಯರ್
ಖ್ಯಾತ ಚಲನಚಿತ್ರ ನಿರ್ಮಾಪಕ, ನಿರ್ದೇಶಕ, ನಟ

"ವಿ. ರಾಮಮೂರ್ತಿಯವರು ಕನ್ನಡ ರಂಗಭೂಮಿಗೆ ಬೆಳಕು ಸಂಯೋಜನೆಯ ತಜ್ಞರಾಗಿ ಅಖಿಲ ಭಾರತ ಸ್ಥಾನವನ್ನು, ಅಂತಾರಾಷ್ಟ್ರೀಯ ಸ್ಥಾನವನ್ನು ತಂದುಕೊಟ್ಟಿದ್ದಾರೆ, ಹೆಸರನ್ನು ಗಳಿಸಿದ್ದಾರೆ. ಇದಲ್ಲದೆ ರಂಗಸಜ್ಜಿಕೆ, ಪ್ರಸಾಧನ ಮೊದಲಾದವುಗಳಲ್ಲಿಯೂ ತಜ್ಞರಾಗಿದ್ದಾರೆ. ಪ್ರತಿವರ್ಷ ನಿಯತ ಸಮಯಕ್ಕೆ ವಿವಿಧ ವಿಶ್ವವಿದ್ಯಾಲಯಗಳು, ಸರಕಾರಿ ಹಾಗೂ ಪ್ರತಿಷ್ಠಿತ ಸಂಘ ಸಂಸ್ಥೆಗಳು ನಗರಗಳಲ್ಲಿ ವರ್ಕ್‌ಷಾಪ್ ಏರ್ಪಡಿಸಲು ಇವರನ್ನು ಆಮಂತ್ರಿಸುತ್ತಿರುತ್ತವೆ."

- ಶ್ರೀರಂಗ
'ಭಾರತೀಯ ಸಂದರ್ಭದಲ್ಲಿ ಕನ್ನಡ ರಂಗಭೂಮಿ',
ಕನ್ನಡ ರಂಗಭೂಮಿ ನಡೆದು ಬಂದ ದಾರಿ,
ಪ್ರ : ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು (1987)

## ಪರಿಸಮಾಪ್ತಿ

'ನೇಪಥ್ಯ ರಂಗಕರ್ಮಿಗಳಿಗೆ ಪ್ರಚಾರದ ಅಬ್ಬರವಿಲ್ಲ; ಒದಗಿಬರುವ ಪ್ರಚಾರ ಮಾಧ್ಯಮ ದೃಷ್ಟಿಯೂ ತೀರಾ ಅಲ್ಪ ಪ್ರಮಾಣದ್ದು, ಜೊತೆಗೆ ಪ್ರೇಕ್ಷಕರ ನೇರ ಮೆಚ್ಚು ಮತ್ತು ಬಿಚ್ಚು ನುಡಿಗಳಿಲ್ಲ. ಈ ಅವ್ಯಕ್ತ ನೋವಿನ ಸಂಗತಿ ಸರ್ವೇಸಾಮಾನ್ಯವಾದದ್ದು. ಯಾವುದೇ ಯಶಸ್ವೀ ಪ್ರಯೋಗದ ಅತಿಮುಖ್ಯ ಕಾರಣೀಭೂತ ಅಂಶಗಳೆಂದರೆ ನೇಪಥ್ಯ ರಂಗಕರ್ಮಿಯ ಬೆವರು ಮತ್ತು ರಕ್ತ. ಎಕ್ಸ್‌ಪರ್ಟ್ ಸೌಂಡ್ ಡಿಪಾರ್ಟ್‌ಮೆಂಟ್, ಲೈಟಿಂಗ್ ಡಿಪಾರ್ಟ್‌ಮೆಂಟ್ ಮತ್ತು ಸ್ಟೇಜ್ ಮ್ಯಾನೇಜ್‌ಮೆಂಟ್ ಸುಸೂತ್ರ ರಂಗಪ್ರಯೋಗದ ವಿಭಾಗಗಳು. ಯಾವುದೇ ಒಬ್ಬ ನಾಟಕಕಾರ ಮತ್ತು ನಿರ್ದೇಶಕನ

ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮನಬಿಚ್ಚಿ ರೆಕ್ಕೆಮೂಡಿಸಿ ದುಡಿಯುವುದು ನೇಪಥ್ಯ ರಂಗಕರ್ಮಿಯ ಕೆಲಸ' (ಸಿ.ಜಿ. ಕೃಷ್ಣಸ್ವಾಮಿ : 'ನೇಪಥ್ಯ ರಂಗ', ರಂಗವಾಣಿ, 10-10-1996).

- ಈ ಮಾತು ಅಕ್ಷರಶಃ ವಿಶೇಷವಾಗಿ ವಿ. ರಾಮಮೂರ್ತಿಯವರಂತಹ ಪರಿಣತ ರಂಗತಜ್ಞರಿಗೆ ಅನ್ವಯಿಸುವಂತಹದು.

ಶ್ರೀ ರಾಮಮೂರ್ತಿಯವರು ರಂಗಚಿಂತಕನಾಗಿ ರಂಗಭೂಮಿಯಲ್ಲಿ ತಮ್ಮದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದವರು. ತಮ್ಮ ಅಸಾಧಾರಣ ಕಾರ್ಯಸಾಧನೆಗಾಗಿ ಅಹರ್ನಿಶಿ ಕಾರ್ಯಪ್ರವೃತ್ತರಾಗಿ ಸಕಲ ಕಲಾಸಕ್ತರಲ್ಲಿ ಸತತ ಪ್ರಯತ್ನ ಮತ್ತು ನಿರ್ದಿಷ್ಟ ಗುರಿಯತ್ತ ಸಾಗಲು ಬೋಧನೆ - ಪ್ರಚೋದನೆಯನ್ನುಂಟು ಮಾಡಿದವರು. ಅವರೋರ್ವ ರಂಗಭೂಮಿಯ ಬತ್ತದ ಖಣಜ. ಈ ದಿಸೆಯಲ್ಲಿ ಅವರ ಆಳವಾದ ಅಧ್ಯಯನ ಮತ್ತು ಅನುಭವವು ಎಣಿಕೆಗೆ ನಿಲುಕದಂತಹವು, ಬಗೆದಷ್ಟು ಹೆಚ್ಚೆಚ್ಚು ಸಮೃದ್ಧವಾಗಿ ವಿಸ್ತಾರಗೊಂಡಿರುವಂತಹದು. ತಮ್ಮ ಚಿಮ್ಮುವ ಉತ್ಸಾಹ, ಅವ್ಯಾಹತ ರಂಗಕಸುಬುಗಾರಿಕೆಯಿಂದ ಅಡಗಿರುವ ರಂಗಸಂಗ ಪ್ರಸಂಗಗಳನ್ನು ಅಸಾಧಾರಣ ನೆನಪಿನ ಮೂಸೆಯಿಂದ ಅಚ್ಚಹಸಿರಾಗಿ ಸ್ಫುಟವಾಗಿ ಹೊರತೆರೆದಿಡಬಲ್ಲರು. ಅವರಿಗೆ ರಂಗಜೀವನವೆಂದರೆ ನಿರಂತರ ದುಡಿಮೆ (ರಂಗನಿರಂತರ). ರಂಗದುಡಿಮೆಯೇ ಅಗ್ರಪೂಜೆ, ಬದುಕನ್ನು ಸಾರ್ಥಕತೆಯತ್ತ ಕೊಂಡೊಯ್ಯುವ ಸಾಧನ, ನಿಷ್ಕಲ್ಮಶ ರಂಗಚಿಂತನೆಯಿಂದ ಅಳವಡಿಸಿಕೊಂಡಿರುವ ಜೀವನಸೂತ್ರ, ತೃಪ್ತಿ ಸಂತೃಪ್ತಿಯು ಪ್ರಾಪ್ತಿ. ತಮ್ಮ ರಂಗಜೀವನದಲ್ಲಿ ಎದುರಾದ ಕೆಲವು ಸಂದಿಗ್ಧ ಸನ್ನಿವೇಶಗಳಲ್ಲಿಯೂ ಕಿಂಚಿತ್ತೂ ಧೃತಿಗೆಡದೆ ನಿಯಮ ಸಂಯಮವನ್ನು ಅನುಸರಿಸಿಕೊಂಡು ಹೆದರದೆ ಎದುರಿಸಿ, ಸಿಕ್ಕು ಸೆಲೆ ಸೊಕ್ಕುಗಳನ್ನು ಎಳೆಎಳೆಯಾಗಿ ಬಿಡಿಸಿ ಸರಳೀಕರಿಸಿ ಮುನ್ನಡೆದವರು. ತಾವು ಕಂಡುಂಡ ನೋವು ನಲಿವು, ಸೋಲು ಗೆಲುವುಗಳನ್ನು ಬೇವು ಬೆಲ್ಲದಂತೆ ಸಮಾನಂತರದಲ್ಲಿ ಸ್ವೀಕರಿಸಿದವರು. ತಮ್ಮ ಕಿರಿಯ ವಯಸ್ಸಿನಿಂದ ಮೊದಲ್ಗೊಂಡು ಹೆಮ್ಮರವಾಗಿ ಬೆಳೆದಿರುವ ರಂಗಬದ್ಧತೆಯನ್ನು ಎಂಬತ್ತರ ಹರೆಯದ ಹಾಸುಪಾಸಿನಲ್ಲಿಯೂ ಚಿಮ್ಮುವ ರಸಬುಗ್ಗೆಯಂತೆ, ಹರಿಯುವ ಪಾದರಸದಂತೆ ಚಲನಶೀಲತೆಯನ್ನು ಛಲಬಿಡದ ತ್ರಿವಿಕ್ರಮನಂತೆ ಪುಟಿದೇಳುವ ಚೈತನ್ಯಪೂರ್ಣ ರಂಗಚಿಂತನೆಗಳಿಂದ ಕಾಪಿಟ್ಟುಕೊಂಡು ಬಂದವರು. ನೇಪಥ್ಯ ಶಿಲ್ಪಿಯ ಕ್ರಿಯಾ ಮನೋಭಾವಸ್ಫುರಿತ ನಡೆನುಡಿ ಇಂದಿನ ಮತ್ತು ಮುಂದಿನ ರಂಗಪೀಳಿಗೆಗಳ ಮಾರ್ಗದರ್ಶನವಾಗಿದೆಯೆಂದರೆ ಅತಿಶಯೋಕ್ತಿಯಾಗದು. ಇಂತಹ ಅಸಾಮಾನ್ಯ ವ್ಯಕ್ತಿತ್ವದ ವ್ಯಕ್ತಿಯಿಂದ ವಿಶ್ವ ರಂಗಭೂಮಿಯು ತಿಳಿಯಬೇಕಾದುದು ಬಹಳಷ್ಟಿದೆ. ತಮ್ಮೆಲ್ಲ ಸಿದ್ಧಿ ಸಾಧನೆಗಳಿಗೆ ಕಾರಣೀಭೂತರಾದಂಥ

ತಮ್ಮ ಗುರುಗಳಾದ ಇಬ್ರಾಹಿಂ ಅಲ್ಕಾಜಿ, ಬಿ. ರೇವಣ್ಣ. ಎಂ.ಎಸ್. ನಾಗರಾಜ್, ಎಸ್. ಶ್ರೀನಿವಾಸರಾವ್, ಪ್ರೊ. ಪಾರ್ಥಸಾರಥಿ ಮತ್ತು ಎ. ರಾಮರಾವ್ ಮುಂತಾದವರನ್ನು ನೆನೆಯುತ್ತಿರುತ್ತಾರೆ.

ಶ್ರೀ ರಾಮಮೂರ್ತಿಯವರು ಎಸ್.ಎಸ್.ಡಿ.ಯಲ್ಲಿ ನಿರ್ದೇಶಕನಾಗಿ ಪದವಿಗಳಿಸಿದ್ದರೂ ಕೊಟ್ಟ ಮಹತ್ವ ಮಾತ್ರ ನೇಪಥ್ಯಕ್ಕೆ. ಅಂತೆಯೇ ರಂಗಬೆಳಕು ಪ್ರಕಾರದ ಅನ್ವರ್ಥನಾಮ ಅಥವಾ ಸಮಾನಾರ್ಥವೆಂಬಂತೆ ಪಡಿಮೂಡಿದವರು. ಅವರು ಪಸರಿಸಿರುವ ರಂಗಕಿರಣಗಳು ಜಾಜ್ವಲ್ಯಮಾನವಾಗಿ ಬೆಳಗಿ 'ಬೆಳಕು' ಎಂಬುದರ ಪರ್ಯಾಯ ಪದರೂಪವೇ ಶ್ರೀ ರಾಮಮೂರ್ತಿಯವರು ಎಂಬುದಾಗಿದೆ. ಅವರು ಬದಲಾಗುತ್ತಿರುವ ಇಲ್ಲವೆ ಮುನ್ನಡೆಯುತ್ತಿರುವ ರಂಗಮೌಲ್ಯಗಳು ಹಾಗೂ ಆಧುನಿಕ ರಂಗತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರ ಮೂಲಕ ಯಶಸ್ವೀ ರಂಗಪ್ರಯೋಗಗಳಿಗೆ ಕಾರಣಕರ್ತರಾಗಿ ದಾಖಲೆಗಳನ್ನು ನಿರ್ಮಿಸಿರುವರು. ಅವರ ರಂಗದೃಷ್ಟಿ ನಿತ್ಯ ಊರ್ಧ್ವಮುಖಿಯಾದುದು. ಅವರ ತೀರದ ರಂಗದಾಹ ಜ್ಞಾನದ ಕ್ಷಿತಿಜವನ್ನು ಸವಿಸ್ತಾರಗೊಳಿಸಿದೆ. ಸದಾ ಹಸನ್ಮುಖಿಯಾಗಿದ್ದುಕೊಂಡು ಬಾಯಲ್ಲಿ ಸಿಗರೇಟನ್ನು ಹಚ್ಚಿ ಕಚ್ಚಿಕೊಂಡು ಸ್ಟೈಲಿಗಾಗಿಯೋ ಅಥವಾ ಕ್ಯಾಸುಯಲ್ ಆಗಿಯೋ ಕುಣಿಸುತ್ತಿದ್ದ ಪರಿ ಆಕರ್ಷಣೀಯವಾಗಿರುತ್ತಿತ್ತು. 'ನಗು ಬದುಕು ಅಳು ಸಾವು', 'ನಕ್ಕು ನಗಿಸುವ ನಗೆ ಲೇಸು' ಎಂಬ ಟಿ.ಪಿ. ಕೈಲಾಸಂರವರ ಉಕ್ತಿಯನ್ನು ಮನಗಂಡು ಮುನ್ನಡೆಯುವ ಛಾತಿ ರಂಜನೀಯ, ಆಕರ್ಷಣೀಯ, ಅನನುಕರಣೀಯ.

ಶ್ರೀ ರಾಮಮೂರ್ತಿಯವರು ಕರ್ನಾಟಕ - ಭಾರತೀಯ - ವಿಶ್ವ ರಂಗಭೂಮಿಯೆನ್ನದೆ ಎತ್ತೆತ್ತಲೂ ರಂಗಬೆಳಕನ್ನು ಪಸರಿಸಿದ್ದಾರೆ. ದೃಶ್ಯ - ಕಾವ್ಯವನ್ನು ದಿವಿನಾಗಿ ಹೊಸೆದು ಬೆಸೆದು ಬೆಳಗಿಸಿ ಮೊಳಗಿಸುವ ಅಭಿಜಾತ ವ್ಯಕ್ತಿತ್ವವನ್ನು ಹೊಂದಿರುವ ಅಪರೂಪದ ವ್ಯಕ್ತಿಯವರು. ಅವರು ಜೀವನರಂಗದಲ್ಲಿ ಏನೆಲ್ಲವನ್ನೂ ಸಾಧಿಸಿದ ಮಾಗಿದ ಜೀವ ಹಾಗೂ ಎಲೆಮರೆಯ ಹಣ್ಣಾಗಿದ್ದರೂ ಯಾವುದನ್ನೂ ಸ್ವಯಂ ತೋರ್ಗೊಡದ Unassuming personalityಯಂತಿರುವ One man theatre ಎಂಬ ಮಾತು ಅವರಿಗೆ ಸುತರಾಂ ಒಪ್ಪುವಂತಹದು. ಅವರು ಆಧುನಿಕ ರಂಗ ತಂತ್ರಜ್ಞಾನ ಮತ್ತು ಭಾರತೀಯ ರಂಗ ಬೆಳಕು ವಿನ್ಯಾಸದ ಇತಿಹಾಸದಲ್ಲಿ ಹೊಸ ಭಾಷ್ಯವನ್ನು ಬರೆದ ಅಧ್ವರ್ಯುಗಳಲ್ಲಿ ಪ್ರಮುಖರು.

ಹಿರಿಯ ಜೀವ ಶ್ರೀ ರಾಮಮೂರ್ತಿಯವರು ಎಂದೂ ಪ್ರಚಾರಪ್ರಿಯತೆಯನ್ನು ಬಯಸದೆ ಸದ್ದುಗದ್ದಲವಿಲ್ಲದೆ ನೇಪಥ್ಯದಲ್ಲಿದ್ದುಕೊಂಡು ತಾನಾಯಿತು ತನ್ನ ಕರ್ತವ್ಯವಾಯಿತು ಎಂಬ ತನ್ಮಯತೆ ಮತ್ತು ತಾದಾತ್ಮ್ಯದಿಂದ ದುಡಿಯುವ ಮನದ

ರಂಗಜೀವಿಯಾಗಿ ಎಲ್ಲರ ಕಣ್ಮಣಿ, ಮಾದರಿಯಾಗಿರುವರು. ಸರ್ವೇಸಾಮಾನ್ಯವಾಗಿ ನೇಪಥ್ಯ ರಂಗದಲ್ಲಿ ಎಷ್ಟೇ ಶ್ರದ್ಧೆ, ಪರಿಶ್ರಮ, ಪ್ರಾಮಾಣಿಕತೆಯ ನಿಸ್ಪೃಹತೆಯಿಂದ ಕಾರ್ಯನಿರ್ವಹಿಸಿದ್ದರೂ ರಂಗಾಭಿಮಾನಿಗಳು, ವೀಕ್ಷಕರು ಮತ್ತು ವಿಮರ್ಶಕರ ಗಮನಸೆಳೆದು ಗುರುತಿಸಲ್ಪಡುವುದು ತುಸು ಅಪರೂಪವಾದುದು. ಆದರೆ ಶ್ರೀ ರಾಮಮೂರ್ತಿಯವರು ತಮಗೆ ಅಗಾಧ ಹಾಗೂ ನಿರಂತರ ನೇಪಥ್ಯ ರಂಗಕ್ಕೆ ನೀಡಿದ ಕೊಡುಗೆಯಿಂದ ಗುರುತಿಸಲ್ಪಟ್ಟು, ಸಂದ ಗಮನಾರ್ಹ ಪ್ರಶಸ್ತಿ ಪುರಸ್ಕಾರ ಮಾನ, ಸನ್ಮಾನಗಳಿಂದ ಗೌರವಾನ್ವಿತರಾಗಿದ್ದಾರೆ. ಈ ಸಾಲಿನಲ್ಲಿ ಅವರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತರಾಗಿದ್ದಾರೆ. ಇಂತಾಗಿ ಈ ರಂಗಪ್ರಕಾರದಲ್ಲಿ ತೊಡಗಿಸಿಕೊಂಡು ಕರ್ತವ್ಯ ನಿರ್ವಹಿಸುವ ರಂಗಕರ್ಮಿಗಳ ಗುಣಮೌಲ್ಯಗಳನ್ನು ಗಣನೀಯವಾಗಿ ವೃದ್ಧಿಸಿದ್ದಾರೆ; ಶಿಸ್ತು ಸಂಯಮದ ಸಾಕಾರಮೂರ್ತಿಯಾಗಿ ಶ್ರೀ ರಾಮಮೂರ್ತಿಯವರು ನೇಪಥ್ಯ ರಂಗಕ್ಕೆ ಬೆಳಕು ಹರಿಸಿದ್ದಾರೆ.

**ಸಾಂದರ್ಭಿಕ ಗ್ರಂಥಸೂಚಿ :**


1. ಜಿ.ಎನ್. ರಂಗನಾಥರಾವ್ : 'ಪ್ರಶಸ್ತಿ - 85', ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, 1986.
2. ಡಾ. ವಿಜಯಾ (ಸಂ.) : 'ಇಂದಿನ ರಂಗ ಕಲಾವಿದರು', ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ಡಿಸೆಂಬರ್, 1986.
3. ಡಾ. ಹೆಚ್.ಕೆ. ರಾಮನಾಥ್, 'ಕನ್ನಡ ರಂಗಭೂಮಿ ವಿಕಾಸ', ಅಭಿನಯ ಪ್ರಕಾಶನ, 474, ನಾಲ್ಕನೇ ಮುಖ್ಯರಸ್ತೆ, ಕುವೆಂಪು ನಗರ, ಮೈಸೂರು - 570 023, (1990).
4. ಡಾ. ಜೆ. ಶ್ರೀನಿವಾಸಮೂರ್ತಿ : 'ಬೆಳಕು ಕೊಟ್ಟು ಕತ್ತಲಲ್ಲೆ ಉಳಿದ ಶ್ರೀ ವಿ. ರಾಮಮೂರ್ತಿ', 'ಪ್ರತಿಭಾ ಸಂಪನ್ನರು', ಭಾಗ - 3, ಎಂ.ವಿ. ವೆಂಕಟೇಶಮೂರ್ತಿ, ವಿ.ಸೀ. ಸಂಪದ, ರಾಜೀವ ನಗರ, ಬನಶಂಕರಿ, 3ನೇ ಸ್ಟೇಜ್, ಬೆಂಗಳೂರು - 560 085, (2014).

ರಂಗವಿಮರ್ಶಕ ಡಾ. ಹೆಚ್.ಎ. ಪಾರ್ಶ್ವನಾಥ್ ಮತ್ತು ನನ್ನ ಪರಿಚಯ ಸುಮಾರು 30 ವರ್ಷಗಳಿಗೂ ಮೇಲ್ಪಟ್ಟದ್ದು. ನಾನು 62 ವರ್ಷಗಳಿಂದ ನಿರಂತರವಾಗಿ ರಂಗಭೂಮಿಯಲ್ಲಿ ಕೆಲಸ ಮಾಡುತ್ತಿರುವುದರ ಬಗ್ಗೆ ಕರ್ನಾಟಕ ನಾಟಕ ಅಕಾಡೆಮಿಗಾಗಿ ನನ್ನ ಕುರಿತು ಪುಸ್ತಕವನ್ನು ಬರೆಯುತ್ತೇನೆ ಎಂದು ಹೇಳಿದಾಗ ಸಂತೋಷವಾಗಿ ಒಪ್ಪಿಕೊಂಡೆ. ಕಾರಣ ಅವರು ವಿಶ್ವರಂಗಭೂಮಿಯ ಎಲ್ಲ ವಿಷಯಗಳ ಬಗ್ಗೆ ಅತ್ಯಂತ ಆಳವಾಗಿ ಅಧ್ಯಯನಮಾಡಿ ಜ್ಞಾನ ಪಡೆದಿದ್ದಾರೆ. ಕಲೆ–ಕಲಾವಿದರ ಬಗ್ಗೆ ದಾಖಲಾತಿ ವಿಚಾರವನ್ನೊಳಗೊಂಡ ಪುಸ್ತಕಗಳನ್ನು ಬರೆದಿದ್ದಾರೆ. ಅಷ್ಟೇ ಅಲ್ಲದೆ ಅಭಿನಯದಲ್ಲಿಯೂ ಸಿದ್ಧಹಸ್ತರೆನಿಸಿಕೊಂಡಿದ್ದಾರೆ. ತಮ್ಮ ವೈದ್ಯಕೀಯ ವೃತ್ತಿಯ ಜೊತೆಗೆ ರಂಗಭೂಮಿಯಲ್ಲಿಯೂ ತಮ್ಮನ್ನು ತಾವೇ ತೊಡಗಿಸಿಕೊಂಡಿದ್ದಾರೆ. ಎಲ್ಲಿ ರಂಗಭೂಮಿಯ ಕೆಲಸವಾದರೂ ಅಥವಾ ಅದರ ಬಗ್ಗೆ ಪುಸ್ತಕಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವಿಷಯಗಳನ್ನು ನಿರಂತರವಾಗಿ ಸ್ವಾಧ್ಯಾಯ ಮಾಡುತ್ತಾ ಬಂದಿದ್ದಾರೆ. ಅಂತಹವರು ನನ್ನ ಬಗ್ಗೆ ಗ್ರಂಥವನ್ನು ಬರೆಯುವೆನೆಂದಾಗ ನಿಜಕ್ಕೂ ಹೆಮ್ಮೆಪಟ್ಟುಕೊಂಡೆ. ಅವರು ಬಂದಾಗಲೆಲ್ಲ ಒಂದು ದಿನಕ್ಕೆ 1½ – 2 ಗಂಟೆಗಳ ಕಾಲದಂತೆ ನನ್ನೊಂದಿಗೆ ದೀರ್ಘ, ಮುಕ್ತ ಸಂವಾದ ಚರ್ಚೆ ನಡೆಸಿದ್ದಾರೆ. ಆಗ ಎಷ್ಟು ನೆನಪಿದಿಯೋ ಅಷ್ಟನ್ನು ಅವರಿಗೆ ತಿಳಿಸಿದ್ದೇನೆ. ಆದರೂ ಹೇಳಬೇಕಾದ್ದು ಮತ್ತೆ ಮಾಡಬೇಕಾದ್ದು ಅನುಭವಿಸುವುದು ಇನ್ನೂ ಎಷ್ಟೋ ಇದೆ.

ಡಾ. ಪಾರ್ಶ್ವನಾಥ್‌ರು ರಂಗಭೂಮಿ ಕ್ಷೇತ್ರಕ್ಕೂ ಮತ್ತು ವೈದ್ಯಕೀಯ ವೃತ್ತಿಗೂ ಒಂದು ಬಿಡಿಸಲಾಗದ ನೆಂಟನ್ನು ಬೆಳಸಿದವರು.

– ವಿ. ರಾಮಮೂರ್ತಿ



ಕ್ಲೆಗೆಲ್ ಬ್ರದರ್ಸ್‌ನ ಥಾಮಸ್ ಜಿ. ಹೇಸ್ ಅವರು ಶೀರ್ಷಿಕೆ ಕೊಟ್ಟ ಭಾವಚಿತ್ರ–
ಹಾಸ್ಯಭರಿತ 'ಯೋಗ' (ನ್ಯೂಯಾರ್ಕ್ ೧೯೭೮)
ಚಿತ್ರಗ್ರಾಹಕ: ಸ್ಟೀವ್ ಗೋಲ್ಡ್‌ಬರ್ಗ್





ಶಾಲಾ ಸಹಪಾಠಿ– ನಟಿ, ಗಾಯಕಿ, ನೃತ್ಯಗಾರ್ತಿ ಗ್ಲೆಂಡಾ ಟೇಲರ್
ಯೂನಿವರ್ಸಿಟಿ ಆಫ್ ಹವಾಯ್‌ನಲ್ಲಿ




ಅಮೆರಿಕಾದ ಪ್ರಖ್ಯಾತ ಮೂಕಾಭಿನಯ ಕಲಾವಿದ ಬಾಬ್ ಕ್ಯಾಪ್ರಿ ಅವರ
"ಮೈಮ್ಸ್ ಅಂಡ್ ಮಮರ್ಸ್" ವೃತ್ತಿ ನಾಟಕ ತಂಡಕ್ಕೆ
ವಿ. ರಾಮಮೂರ್ತಿ ನಾಟಕ ನಿರ್ದೇಶಿಸಿದರು




ಬಿ. ರಾಮಮೂರ್ತಿಯವರು ನ್ಯೂಯಾರ್ಕ್‌ನ
ಕಾರ್ನಗಿ ಹಾಲ್‌ನಲ್ಲಿ ಕನ್ನಡ ಗೀತೆಗಳನ್ನು ಹಾಡುತ್ತಿರುವುದು.
ತಬಲಾ ನುಡಿಸುತ್ತಿರುವವರು: ಹ್ಯಾಂಕ್ ಲೆವಿಸ್, ಶ್ರುತಿ: ಗ್ಲೆಂಡಾ ಟೇಲರ್



ರಂಗಸಂಪದ ಪ್ರದರ್ಶಿಸಿದ ಮಹಾಪ್ರಸ್ಥಾನ ನಾಟಕದ ರಂಗವಿನ್ಯಾಸ
ರಾಮಮೂರ್ತಿ ಅವರಿಂದ (೨೮-೦೫-೧೯೭೭)



ಲಖನೌದಲ್ಲಿ ರಂಗ ತಯಾರಿಕೆಯೊಂದಕ್ಕೆ ಹಾರ್ಮೋನಿಯಂ ಅಭ್ಯಾಸ.
ಮೃದಂಗ : ಯೋಗೇಶ್ ಯಾದವ್ (ಮಾರ್ಚ್ ೧೯೯೫)




ಶ್ರೀ ಸಂಪತ್ (ಚೆಲುವಯ್ಯಂಗಾರ್), ಡಾ॥ ಹಾಮಾನಾ,
ಡಾ॥ ಸಿಂಧುವಳ್ಳಿ ಅನಂತಮೂರ್ತಿ ಅವರೊಂದಿಗೆ




'ಕಲಾನಿಕೇತನದ' 'ರಾಹುಕಾಲ' ನಾಟಕದಲ್ಲಿ ರಾಮಮೂರ್ತಿ ಭೀಮನ
ಪಾತ್ರದಲ್ಲಿ, ರಚನೆ, ನಿರ್ದೇಶನ : ಎಂ.ಎಸ್.ನಾಗರಾಜ್ (೧೯೫೭)



ದೆಹಲಿ ಆರ್ಟ್ ಥಿಯೇಟರ್ ಪ್ರದರ್ಶಿಸಿದ ಪೃಥ್ವಿರಾಜ್ ಚವಾಣ ಅವರ ನಾಟಕವೊಂದಕ್ಕೆ ನಟನಿಗೆ ಮೇಕಪ್ ಮಾಡುತ್ತಿರುವಾಗ. ರಚನೆ, ನಿರ್ದೇಶನ: ಶೀಲಾ ಭಾಟಿಯಾ (೧೬-೦೧-೧೯೬೨)




ಬೆಂಗಳೂರು 'ಕಲಾನಿಕೇತ'ನದ ಕಾರ್ಯದರ್ಶಿ ಎಲ್.ಪಿ.ಶಾಸ್ತ್ರಿ, ಖಜಾಂಚಿ ಹೆಚ್.ಕೃಷ್ಣಮೂರ್ತಿ ಅವರೊಂದಿಗೆ ಅಧ್ಯಕ್ಷನಾಗಿ ಎ. ರಾಮಮೂರ್ತಿ



ಕಂಟ್ರೋಲ್ ರೂಮಿನಲ್ಲಿ ವಿ. ರಾಮಮೂರ್ತಿ



ದೆಹಲಿ ರಾಷ್ಟ್ರೀಯ ನಾಟಕ ಶಾಲೆಯ ವಿದ್ಯಾರ್ಥಿಯಾಗಿದ್ದಾಗ ಅಲ್ಕಾಜಿ ನಿರ್ದೇಶನದ 'ಅಂತಿಗೊನೆ' ನಾಟಕಕ್ಕೆ ವಿ. ರಾಮಮೂರ್ತಿ ಶಬ್ಧ ಸಂಯೋಜನೆ ಮಾಡಿದ್ದರು (೦೮-೦೩-೧೯೬೩)




ಪ್ರಸಿದ್ಧ ಕೂಚಿಪುಡಿ ನೃತ್ಯ ಕಲಾವಿದೆ ಸ್ವಪ್ನಸುಂದರಿಯವರು ಭೂಪಾಲ್‌ನಲ್ಲಿ ನೀಡಿದ ಕಾರ್ಯಕ್ರಮದಲ್ಲಿ ವಿ.ರಾಮಮೂರ್ತಿ ಬೆಳಕಿನ ವಿನ್ಯಾಸ ಮಾಡಿದ್ದರು



ವಿ.ರಾಮಮೂರ್ತಿ, ಎಚ್.ಕೆ.ಯೋಗಾನರಸಿಂಹ ಮತ್ತು ಎಚ್.ವಿ.ವೆಂಕಟಸುಬ್ಬಯ್ಯ




ಹುಬ್ಬಳ್ಳಿಯಲ್ಲಿ ೧೯೮೮ ರಲ್ಲಿ ನಡೆದ 'ನೇಪಥ್ಯ ಶಿಲ್ಪ' ಕಾರ್ಯಾಗಾರದಲ್ಲಿ
ರಂಗವೈದ್ಯ ಡಾ.ಹೆಚ್.ಎ.ಪಾರ್ಶ್ವನಾಥ್,
ಶ್ರೀ ಚಿತ್ತರಂಜನ ಚಟರ್ಜಿ ಅವರೊಂದಿಗೆ ಚರ್ಚೆಯಲ್ಲಿ ವಿ. ರಾಮಮೂರ್ತಿ




ಬಿ.ವಿ.ವೈಕುಂಠರಾಜು, ಶ್ರೀರಂಗ ಮತ್ತು ಕೆ.ಹೆಚ್.ಶ್ರೀನಿವಾಸ ಅವರೊಂದಿಗೆ





ಹಾರ್ಮೋನಿಯಂ ವಾದಕರಾಗಿ...

ಮೇಕಪ್ ಮಾಡಿಸಿಕೊಳ್ಳುತ್ತಿರುವಾಗ...
(೧೭-೦೧-೧೯೭೫)






ವಿವಿಧ ಭಾವಭಂಗಿಯಲ್ಲಿ




ದೆಹೆಲಿಯ ರಾಷ್ಟ್ರೀಯ ನಾಟಕ ಶಾಲೆಯ 'ಅಂತಿಗೊನೆ' ನಾಟಕ ತಂಡ.
ಮಧ್ಯದಲ್ಲಿ ಕುಳಿತಿರುವವರು ಪ್ರೊ॥ ಅಲ್ಕಾಜಿ, ಮತ್ತು ವಿ. ರಾಮಮೂರ್ತಿ
(೨೪-೦೩-೧೯೬೩)



ಬೆಂಗಳೂರಿನ 'ರಂಗಸಮಾಜ' ಸಾಂಸ್ಕೃತಿಕ ಸಂಸ್ಥೆಯಿಂದ ೨೦೧೪ ರಲ್ಲಿ
ರಾಮಮೂರ್ತಿ ಅವರಿಗೆ ಸಂದ ಗೌರವ. ಚಿತ್ರದಲ್ಲಿ ಎಸ್. ನಾಗರಾಜರಾವ್,
ಎನ್. ರಾಮಣ್ಣಿ, ಎಚ್.ವಿ.ವೆಂಕಟಸುಬ್ಬಯ್ಯ, ಎಸ್. ತಿಲಕರಾಜ್



ಮೈಸೂರಿನ 'ಸಮತೆಂತೋ' ಬೆಳ್ಳಿಹಬ್ಬ (೨೮,೨೯–೧೧–೧೯೯೩) ಸಮಾರಂಭದಲ್ಲಿ ಭಾಷಣ



ಡಾ॥ ಎಚ್.ಕೆ.ರಾಮನಾಥ್ ಅವರೊಂದಿಗೆ ವಿ. ರಾಮಮೂರ್ತಿ



ವಿ.ರಾಮಮೂರ್ತಿಯವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಡಾ॥ ಬಿ.ಎಸ್. ಯಡಿಯೂರಪ್ಪ ಅವರಿಂದ ರಾಜ್ಯೋತ್ಸವ ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವರು (೦೧-೧೧-೨೦೦೮)



ತಮಿಳುನಾಡಿನ ರಾಜ್ಯಪಾಲ ಡಾ॥ ಕೆ. ರೋಸಯ್ಯ ಅವರಿಂದ ಸಂಗೀತ ನಾಟಕ ಅಕಾಡೆಮಿಯ 'ಟ್ಯಾಗೋರ್ ರತ್ನ ಸದಸ್ಯತ್ವ'ವನ್ನು (ಫೆಲೋಶಿಪ್) ಚೆನ್ನೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ವೀಕರಿಸುತ್ತಿರುವ ವಿ.ರಾಮಮೂರ್ತಿಯವರು (೦೨-೦೫-೨೦೧೨)



ತುಮಕೂರಿನ 'ನಾಟಕಮನೆ'ಯಿಂದ ಸನ್ಮಾನ



ಬೆಳಕು ವಿನ್ಯಾಸಕ್ಕಾಗಿ ಶ್ರೀ ಅಮ್ಜದ್ ಅಲಿ ಖಾನ್ ಮತ್ತು ಶ್ರೀಮತಿ ಸುಬ್ಬಲಕ್ಷ್ಮೀ ಖಾನ್
ಅವರಿಂದ ಚಮನ್ ಲಾಲ್ ಸ್ಮಾರಕ ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವ
ವಿ.ರಾಮಮೂರ್ತಿಯವರು (ದೆಹಲಿ ೧೯೯೭)